2957

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ—೨೪

ವಿಡಂಬನ

ಎಸ್. ವಿ. ರಂಗಣ್ಣ, ಎಂ.ಎ.

033,6
H1R

ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್
ಮೈಸೂರು
೧೯೪೧

95
E

ಬೆಲೆ: ೨ ಆಣೆ

CC-0. Jangamwadi Math Collection, Varanasi. An eGangotri Initiative

ಪ್ರಚಾರಪುಸ್ತಕಮಾಲೆ

ಪುಸ್ತಕಗಳು ದೊರೆಯುವ ಸ್ಥಳಗಳು :

೧. ಕರ್ನಾಟಕ ಪ್ರಕಟನಾಲಯ, ಕೋಟೆ, ಬೆಂಗಳೂರು ಸಿಟಿ.

೨. ಸತ್ಯಶೋಧನ ಪುಸ್ತಕಭಂಡಾರ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

... ಧಾರವಾಡ.

... ವ್ಯಾಪಾರಿಗಳು, ಬೆಳಗಾವಿ.

...ದು :

...ಮೈಸೂರು.

033,6 726
H1R
Ranganna, SV
Vidambana.

CC-0. Jangamwadi Math Collection, Varanasi. An eGangotri Initiative

033,6 726
H1R

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped
Overdue volume will be charged 1/- per day.

CC-0. Jangamwadi Math Collection, Varanasi. An eGangotri Initiative

ಪ್ರಚಾರಪುಸ್ತಕಮಾಲೆ

ಪುಸ್ತಕಗಳು ದೊರೆಯುವ ಸ್ಥಳಗಳು :

೧. ಕರ್ಣಾಟಕ ಪ್ರಕಟನಾಲಯ, ಕೋಟೆ, ಬೆಂಗಳೂರು ಸಿಟಿ.

೨. ಸತ್ಯಶೋಧನ ಪುಸ್ತಕಭಂಡಾರ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್,
ಮೈಸೂರು.

, ಧಾರವಾಡ.

ವ್ಯಾಪಾರಿಗಳು,
ಬೆಳಗಾವಿ.

033,6 726
H1R
Rangaanna, SV
Vidambana.

ುದು :

ಮೈಸೂರು.

CC-0. Jangamwadi Math Collection, Varanasi. An eGangotri Initiative

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ—೨೪

ವಿಡಂಬನ

ಎಸ್. ವಿ. ರಂಗಣ್ಣ, ಎಂ.ಎ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

ಮೈಸೂರು

೧೯೪೧

CC-0. Jangamwadi Math Collection, Varanasi. An eGangotri Initiative

033,6
H1R

ಪ್ರಥಮ ಮುದ್ರಣ—೧೫೦೫ ಪ್ರತಿಗಳು
೮-೩-೧೯೪೧

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI,
Acc. No. ~~2957~~
726.

CC-0. Jangamwadi Math Collection, Varanasi. An eGangotri Initiative

ಮುನ್ನುಡಿ

ಮೈಸೂರು ವಿಶ್ವವಿದ್ಯಾನಿಲಯದ ಮೊದಲನೆಯ ಚಾನ್ಸಲರವರಾದ ಆಳಿದ ಮಹಾಸ್ವಾಮಿಯವರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್ ಅವರು ಮೊದಲನೆಯ ಸೆನೆಟ್ ಸಭೆಯ ಪ್ರಾರಂಭೋತ್ಸವದ ಭಾಷಣದಲ್ಲಿಯೂ, ಪುನಃ ಮೊದಲನೆಯ ಕಾನ್ವೊಕೇಷನ್ ಮಹೋತ್ಸವದ ಭಾಷಣದಲ್ಲಿಯೂ ವಿಶ್ವವಿದ್ಯಾನಿಲಯದ ಪಾಲಿಗೆ ಹಲವು ಕರ್ತವ್ಯಗಳನ್ನು ಅಪ್ಪಣೆಮಾಡಿದರು. ಅವುಗಳಲ್ಲಿ ವಿಶೇಷವಾದವು ಇವೆರಡು: ಒಳ್ಳೆಯ ಕನ್ನಡದಲ್ಲಿ ಬರೆದ ಪುಸ್ತಕಗಳ ಪ್ರಕಟನೆ, ಹಾಗೂ ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹ. ಮತ್ತು ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ಯಾರು ಕಾರಣಾಂತರಗಳಿಂದ ಕ್ರಮಬದ್ಧವಾದ ಶಿಕ್ಷಣ ಶಿಸ್ತುಗಳಲ್ಲಿ ಭಾಗವಹಿಸಿ ಪರೀಕ್ಷೆಗಳಿಗೆ ಕೂಡಲು ಶಕ್ತರಲ್ಲವೋ ಅಂಥವರಲ್ಲಿ ಜ್ಞಾನಪ್ರಸಾರ ಮಾಡುವುದು; ಅಲ್ಲದೆ ಮೈಸೂರು, ಬೆಂಗಳೂರು ಈ ಎರಡು ಹಿರಿಯ ಪಟ್ಟಣಗಳಲ್ಲಿ ದೊರಕುವ ವಿದ್ಯಾಭ್ಯಾಸಾನುಕೂಲ್ಯಗಳನ್ನು ಪಡೆದಿಲ್ಲದ, ಸಂಸ್ಥಾನದ ದೂರಪ್ರದೇಶಗಳಲ್ಲಿ ವಾಸಿಸುವವರಲ್ಲಿ ಉಚ್ಚ ವರ್ಗದ ಸಂಸ್ಕೃತಿಯನ್ನು ಹರಡುವುದು.

ವಿಶ್ವವಿದ್ಯಾನಿಲಯವು ಸ್ಥಾಪಿತವಾದಂದಿನಿಂದಲೂ ಈ ಎರಡು ಮುಖ್ಯ ಧ್ಯೇಯಗಳನ್ನು ತನ್ನ ಮುಂದೆ ತಪ್ಪದೆ ನಿಲ್ಲಿಸಿಕೊಂಡಿದೆ. ಅದರ ಕನ್ನಡ ಪ್ರಕಟನ ಶಾಖೆಯು ಕೆಲವು ಪ್ರಸಿದ್ಧ ಹಳಗನ್ನಡ ಕಾವ್ಯಗಳನ್ನು ಎಚ್ಚರಿಕೆಯಿಂದ ಪರಿಷ್ಕರಿಸಿ ಅಚ್ಚುಹಾಕಿಸಿದೆ; ಅಲ್ಲದೆ, ಸಾಹಿತ್ಯ ವಿಜ್ಞಾನ ವಿಷಯಗಳನ್ನು ಕುರಿತ ಕೆಲವು ಲಘು ಪುಸ್ತಕಗಳನ್ನೂ ಹೊರತಂದಿದೆ. ಪ್ರಚಾರೋಪನ್ಯಾಸ ಸಮಿತಿಯವರು ಸಂಸ್ಥಾನದ ಎಲ್ಲ ಭಾಗಗಳ ಅನೇಕ ಕೇಂದ್ರಗಳಲ್ಲಿ ಹೆಚ್ಚಾಗಿ ಕನ್ನಡದಲ್ಲಿಯೇ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದಾರೆ.

ಇತ್ತೀಚೆಗೆ ಒಂದು ಫಲದಾಯಕವಾದ ಕಾರ್ಯಕ್ರಮ ಬೆಳೆದುಬರುತ್ತಿದೆ. ವಿಷಯ ಒಂದೊಂದಕ್ಕೆ ಒಂದೊಂದರಂತೆ ಬಿಡಿ ಉಪನ್ಯಾಸ

CC-0. Jangamwadi Math Collection, Varanasi. An eGangotri Initiative

ವನ್ನು ಕೊಡಿಸುವುದರ ಜೊತೆಗೆ, ವಿಶ್ವವಿದ್ಯಾನಿಲಯದ ಅಧ್ಯಾಪಕ
ಸಂಘದ ಸಹಕಾರದಿಂದ ಸಂಸ್ಕೃತಿ ಸಪ್ತಾಹಗಳೆಂದು ಈಗಾಗಲೇ
ಕರೆಯಲ್ಪಡುತ್ತಿರುವ ಉಪನ್ಯಾಸಮಾಲೆಗಳನ್ನು ಇಡಿಸಲಾಗುತ್ತಿದೆ.
ಒಂದೇ ಊರಿನಲ್ಲಿ ಐದಾರು ದಿನ ಭಾಷಣ ಕಾವ್ಯವಾಚನ ಸಂಗೀತಾದಿ
ಗಳು ಜರುಗುತ್ತವೆ; ಉಪನ್ಯಾಸಗಳು ಸಾಹಿತ್ಯ ವಿಜ್ಞಾನ ಸಮಾ
ವೆಲ್ಲಕ್ಕೂ ಸಂಬಂಧಿಸಿರುತ್ತವೆ. ಈ ಸಪ್ತಾಹಗಳು ನೆರವೇರಿದ ದೊಡ
ಬಳ್ಳಾಪುರ, ದಾವಣಗೆರೆ, ಕೋಲಾರ ಮುಂತಾದ ಎಲ್ಲ ಕಡೆಗಳ
ದಲೂ ಅವಕ್ಕೆ ಬಹಳ ಮನ್ನಣೆ ದೊರೆತಿದೆ.

ಈಗ ಅತಿ ಹೊಸದಾದ ಏರ್ಪಾಡಾವುದೆಂದರೆ: ಒಂದೆರಡು
ಊರುಗಳನ್ನು ಆರಿಸಿಕೊಂಡು, ಅಲ್ಲಿಗೆ ಒಂದು ವರ್ಷದಲ್ಲಿ ಹಲವು ಬಾರಿ
ಹೋಗಿ, ಕೆಲವು ವಿಷಯಗಳಲ್ಲಿ ಒಂದೊಂದನ್ನೂ ಕುರಿತು ನಾಲ್ಕಾರು
ಉಪನ್ಯಾಸಗಳನ್ನು ಹೇಳುವ ಯೋಜನೆ. ಆದರಿಂದ ಆ ಊರುಗಳ
ಜನರಿಗೆ ಅನಲ್ಪಕಾಲ ಎಡೆಬಿಡದೆ ಜ್ಞಾನಬೋಧೆ ಸಿಕ್ಕುವುದು. ಪ್ರತ್ಯಕ್ಷ
ಕೇಳಿ ಉಪಯೋಗ ಪಡೆದ ಸಭಿಕರ ಗುಂಪಿನಿಂದ ಆಚೆಗೂ ಕೂಡ ಈ
ಭಾಷಣಮಾಲೆಗಳ ಪ್ರಯೋಜನ ಹರಡಲೆಂಬ ಉದ್ದೇಶದಿಂದ
ಅವುಗಳನ್ನು ಈ ರೀತಿ ಚಿಕ್ಕ ಹೊತ್ತಗೆಗಳಾಗಿ ಪ್ರಕಟಿಸಿದೆ.

ಆಳಿದ ಘನ ಪ್ರಭುಗಳವರು ನಮ್ಮ ವಿಶ್ವವಿದ್ಯಾನಿಲಯಕ್ಕೆ ಎರಡು
ಪವಿತ್ರ ಕರ್ತವ್ಯಗಳನ್ನು ನೇಮಿಸಿದರಷ್ಟೆ: ಸುಲಭಸಮಂಜಸ ಕನ್ನಡ
ದಲ್ಲಿ ರಚಿಸಿದ ಗ್ರಂಥಗಳ ಪ್ರಕಟನೆ; ಜನತೆಯಲ್ಲಿ ಉತ್ತಮ ಬಗೆಯ
ಸಂಸ್ಕೃತಿಯ ಪ್ರಸಾರ. ಆ ಎರಡು ಕರ್ತವ್ಯಗಳನ್ನೂ ಈ ಮಾರ್ಗವಾಗಿ
ಒಂದೇಸಾರಿ ಸಾಧಿಸಬಹುದೆಂಬುದೇ ಹೀಗೆ ಉಪನ್ಯಾಸಗಳನ್ನು ಕೊಟ್ಟು
ಲಘು ಪುಸ್ತಕಗಳನ್ನು ಸಿದ್ಧಮಾಡಿದವರ ನಿರೀಕ್ಷೆ ಮತ್ತು ಹೆಬ್ಬಯಕೆ.

ವಿಶ್ವವಿದ್ಯಾನಿಲಯ, ಮೈಸೂರು,
೧೫—೮—೧೯೪೦.

ಎನ್. ಎಸ್. ಸುಬ್ಬರಾವ್.

CC-0. Jangamwadi Math Collection, Varanasi. An eGangotri Initiative

ಪೀಠಿಕೆ

೧೯೪೦ರ ಸೆಪ್ಟೆಂಬರ್ ಅಕ್ಟೋಬರ್ ತಿಂಗಳುಗಳಲ್ಲಿ ನಾನು ಕೃಷ್ಣರಾಜನಗರದಲ್ಲಿ ಕೊಟ್ಟ ಮೂರು ಉಪನ್ಯಾಸಗಳೇ ಈ ಲೇಖನಕ್ಕೆ ಆಧಾರ. ಅನೇಕ ವರ್ಷಗಳಿಂದಲೂ ಸಂಗ್ರಹಿಸಿದ ವಿಡಂಬನ ನಿದರ್ಶನಗಳಲ್ಲಿ ಚಿಕ್ಕವೂ ಸಂಪೂರ್ಣವೂ ಹೆಚ್ಚು ಪ್ರಯಾಸವಿಲ್ಲದೆ ಅರ್ಥವಾಗುವಂಥವೂ ಆದವನ್ನು ಮಾತ್ರ ಆರಿಸಿಕೊಡಲು ಯತ್ನಿಸಿದ್ದೇನೆ. ಅವುಗಳ ಮೂಲಕ ವಿಡಂಬನದ ಲಕ್ಷಣ ಸುವ್ಯಕ್ತವಾಗಬಹುದೆಂದು ನನ್ನ ನಿರೀಕ್ಷೆ. ಹಾಳೆಗಳನ್ನು ತಿರುವಿಹಾಕುವವರಿಗೆ ಇದೊಂದು ಕೇವಲ ತಮಾಷೆಗಳ ಪುಸ್ತಕವೆಂದು ತೋರಬಹುದು; ಆದರೆ ಚಿತ್ತವಿಟ್ಟು ಪಠಿಸುವವರಿಗೆ ವಿಡಂಬನದ ಗಾಂಭೀರ್ಯವನ್ನು ಒತ್ತಿಹೇಳುವುದೇ ನನ್ನ ಹೆಬ್ಬಯಕೆಯೆಂಬುದು ಗೊತ್ತಾಗದಿರದು. ಪಾಶ್ಚಾತ್ಯ ಸಾಹಿತ್ಯದಲ್ಲಿ ವಿಡಂಬನದ ದೊಡ್ಡ ಕಾವ್ಯಗಳು ಕಾದಂಬರಿಗಳು ನಾಟಕಗಳು ಹೇರಳವಾಗಿವೆ. ಅವುಗಳ ಅಲ್ಪ ಪರಿಚಯವನ್ನಾದರೂ ಇಲ್ಲಿ ಮಾಡಿಕೊಡಲು ಸಾಧ್ಯವಿಲ್ಲ. ಆದ್ದರಿಂದ ಓದುವವರು ವಿಡಂಬನವೆಂಬ ವಿಷಯ ಗಹನವಾದ್ದು, ಅಪರಿಮಿತ ಶಕ್ತಿಯುಕ್ತವಾದ್ದು, ಸಮಾಜದಲ್ಲಿ ಹೆಚ್ಚಿನ ಪರಿಣಾಮವನ್ನುಂಟುಮಾಡಬಲ್ಲದ್ದು ಎಂಬುದನ್ನು ಮರೆಯದಿರಬೇಕೆಂದು ಪ್ರಾರ್ಥನೆ.

ಬರೆವಣಿಗೆಯನ್ನು ಸುಲಭಗೈಯಲು ನನ್ನೊಡನೆ ಉದ್ದಕ್ಕೂ ದುಡಿದ ಶ್ರೀಮಾನ್ ಜಿ. ಹನುಮಂತರಾಯರಿಗೂ ಅದನ್ನು ಅಲ್ಲಲ್ಲಿ ಸರಿಪಡಿಸಲು ಸಹಾಯವಿತ್ತ ಶ್ರೀಮಾನ್ ಟಿ. ಎನ್. ಶ್ರೀಕಂಠಯ್ಯನವರಿಗೂ ನನ್ನ ವಿಶೇಷ ವಂದನೆಗಳು.

ಬೆಂಗಳೂರು
ತಾ॥ ೧-೩-೧೯೪೧

ಎಸ್. ವಿ. ರಂಗಣ್ಣ.

CC-0. Jangamwadi Math Collection, Varanasi. An eGangotri Initiative

CC-0. Jangamwadi Math Collection, Varanasi. An eGangotri Initiative

ವಿಷಯಾನುಕ್ರಮಣಿಕೆ

೧. ವಿಡಂಬನ ಎಂದರೇನು ? ೧

೨. ವಿಡಂಬನದ ವಸ್ತು ೩

೩. ವಿಡಂಬನದ ವಿಧಾನ ೨೬

೪. ವಿಡಂಬನಕಾರ ೫೦

೫. ಸಮಾಪ್ತಿ ೬೨

CC-0. Jangamwadi Math Collection, Varanasi. An eGangotri Initiative

CC-0. Jangamwadi Math Collection, Varanasi. An eGangotri Initiative

ವಿಡಂಬನ

೧. ವಿಡಂಬನ ಎಂದರೇನು ?

"ಇದೇನು ಹನುಮಂತನ ಬಾಲದಹಾಗೆ ಬೆಳೆಯುತ್ತಿದೆ" "ಅದೊಂದು ಗಾಳಿಯ ಗೋಪುರ" "ಸಾಕುಮಾಡಯ್ಯ ನಿನ್ನ ಗೋಳುರಾಮಾಯಣ" ಮುಂತಾದ ಸರಸ ವಚನಗಳನ್ನು ಎಲ್ಲರೂ ಕೇಳುತ್ತಿರುತ್ತಾರೆ. ಸ್ವಲ್ಪ ಕೋಪವೇರಿದಾಗ ಹೇಳುವ "ಅದೊಂದು ಕಳ್ಳರ ಸಂತೆ" "ಎಲ್ಲಿಂದ ಬಂದಳೋ ಈ ತಾಟಕಿ" ಮೊದಲಾದ ಆಕ್ಷೇಪಣೆಗಳೂ ಎಲ್ಲರಿಗೂ ಪರಿಚಯ. ಮನಸ್ಸು ಅತಿ ಉಗ್ರವಾದಲ್ಲಿ ಬಾಯಿಂದ ಬೀಳುವ "ಅದೊಂದು ಊರೇ" "ಅವನೊಬ್ಬ ಮನುಷ್ಯನೇ" "ಅವಳ ಹೆಸರು ಹೇಳಿದರೆ ಉಪ್ಪು ಕೂಡ ಹುಟ್ಟುವುದಿಲ್ಲ" ಇತ್ಯಾದಿ ಬಯ್ಗುಳವೂ ಎಲ್ಲರಿಗೂ ತಿಳಿದ ವಿಷಯ. ಈ ಬಗೆಯ ಮಾತುಗಳಲ್ಲಿ ವ್ಯಕ್ತವಾಗುವ ನಡೆವಳಿಕೆ ಯಾವುದು ? ಅವುಗಳನ್ನು ಆಡುವವರ ಅಭಿಪ್ರಾಯವೇನು ? ಒಬ್ಬ ವ್ಯಕ್ತಿಯ, ಒಂದು ಸಂಸ್ಥೆಯ, ಅಥವಾ ಒಟ್ಟು ಸಮಾಜದ ಯಾವುದೋ ದೋಷವನ್ನು ಎತ್ತಿ ತೋರಿಸಿ ಹೀನಾಯಮಾಡುವುದೇ ಅಲ್ಲವೆ ? ಈ ಕಾರ್ಯವೇ ವಿಡಂಬನ. ವಸ್ತುವನ್ನು ಬೆದಕಿ, ಅದರಲ್ಲಿರುವ ಕುಂದನ್ನು ಕಂಡುಹಿಡಿದು, ಅದನ್ನು ಪ್ರಕಟಪಡಿಸುವುದರ ಮೂಲಕ ವಸ್ತುವನ್ನು ಪರಿಹಾಸಕ್ಕೆ ಗುರಿಮಾಡುವುದೇ ವಿಡಂಬನವೆಂಬ ವರ್ತನೆ. ಅಂದರೆ ವಿಡಂಬನ ಜನಸಾಮಾನ್ಯಕ್ಕೆ ಬಹುದೂರವಾದ ಯಾವುದೋ ರಹಸ್ಯವ್ಯಾಪಾರವಲ್ಲ. ಜನರು ತಮ್ಮ ದಿನದಿನದ ಬಾಳಿಕೆಯಲ್ಲಿ ಆಗಾಗ ಅನುಸರಿಸುವ ಒಂದು ಮಾತಿನ ವಾಡಿಕೆ. ಪರಸ್ಪರ ವಿಡಂಬನಗೈಯುವುದು ಮಾನವನ

CC-0. Jangamwadi Math Collection, Varanasi. An eGangotri Initiative

ಜಾಳಿ. ನಾವು ಹೆಚ್ಚು ಯೋಚನೆಮಾಡದೆ ಕೇವಲ ಸ್ವಭಾವ ಬಲದಿಂದ ಮಾಡುವ ಅಷ್ಟು ಚೆಲುವಿಲ್ಲದ ಕೆಲಸವನ್ನು ಕವಿಗಳು ಬಹಳ ಯೋಚನೆಮಾಡಿ ವಿಶೇಷ ಸಾಮರ್ಥ್ಯದಿಂದ ಅತಿ ರಮಣೀಯವಾಗಿ ಎಸಗುವರು. ಅದೇ ವಿಡಂಬನಸಾಹಿತ್ಯ. “ ವಿಡಂಬನ ಕಾವ್ಯಗಳು ” ಎಂಬ ಉಪನ್ಯಾಸದ ಅಂಕಿತವನ್ನು ಕೇಳಿದ ಮಹಾಶಯರೊಬ್ಬರು “ ಯಾರು ಆ ವಿಡಂಬ ? ಯಾವ ಕಾಲದಲ್ಲಿದ್ದವನು ? ” ಎಂದು ಪ್ರಶ್ನಿಸಿದರು. ಅಜ್ಞಾನದಿಂದ ಇದು ಆಗಿದ್ದರೂ ಆಗಿರಬಹುದು ; ಬಹುಶಃ ಬರಿಯ ಹಾಸ್ಯವೆಂದೇ ತೋರುತ್ತದೆ.

ಮನುಷ್ಯಜೀವನದಲ್ಲಿ ಹೇಗೆಯೊ ಹಾಗೆ ವಿಡಂಬನವು ಸಾಹಿತ್ಯಪ್ರಪಂಚದಲ್ಲಿಯೂ ಎಲ್ಲೆಲ್ಲಿಯೂ ಕಾಣಬರುವ ಅಂಶ. ಕಥೆ ಕಾದಂಬರಿ ಗೀತ ನಾಟಕ ಪದ್ಯ ಪ್ರಬಂಧ ಮಹಾಕಾವ್ಯ ಮುಂತಾದ ಎಲ್ಲ ಸಾಹಿತ್ಯವಿಭೇದಗಳೂ ಅದನ್ನು ಬೇಕಾದಾಗ ಧಾರಾಳವಾಗಿ ಬಳಸಿಕೊಳ್ಳುವುವು. ಅಲ್ಲದೆ ವಿಡಂಬನವೇ ಒಂದು ಸಾಹಿತ್ಯವಿಭಾಗ. ಆದರೂ ಅದನ್ನು ಕುರಿತ ಜಿಜ್ಞಾಸೆ ಅಷ್ಟೇನೂ ಸುಲಭವಲ್ಲ; ಏತಕ್ಕೆಂದರೆ ಅನೇಕ ಸೂಕ್ಷ್ಮ ವಿಚಾರಗಳು ಅದಕ್ಕೆ ಸಂಬಂಧಿಸಿವೆ. ವಿಡಂಬನಕ್ಕೆ ಸರಿಯಾದ ವಸ್ತುಗಳಾವುವು ? ಅದು ಹಿಡಿಯುವ ಕ್ರಮ ಒಂದೇ ಒಂಬತ್ತೇ ? ಅದರ ಮುಖ್ಯ ಧ್ಯೇಯವೇನು ? ಯಾವ ಕವಿ ಬೇಕಾದರೂ ವಿಡಂಬನಕಾರನಾಗಬಹುದೇ ? ಅಥವಾ ವಿಡಂಬನಮಾಡಲು ಪ್ರಶಸ್ತವಾದ ಯೋಗ್ಯತೆ ಇರಬೇಕೇ ? ಅದಕ್ಕೆ ದೊಡ್ಡ ಸಾಹಿತ್ಯವೆನ್ನಿಸಿಕೊಳ್ಳಲು ಹಕ್ಕಿದೆಯೇ ? ಈ ವಿಚಾರಗಳನ್ನು ಸರಳರೀತಿಯಲ್ಲಿ ಪ್ರಸ್ತಾಪಿಸಿ ವಿಡಂಬನದ ಸತ್ವವನ್ನೂ ಸ್ವಾರಸ್ಯವನ್ನೂ ಸ್ಪಷ್ಟಪಡಿಸುವುದು ಈ ಸಣ್ಣ ಕೈಪಿಡಿಯ ಕರ್ತವ್ಯ.

CC-0. Jangamwadi Math Collection, Varanasi. An eGangotri Initiative

೨. ವಿಡಂಬನದ ವಸ್ತು

ಮನುಷ್ಯನ ಸ್ವರೂಪ ಸ್ವಭಾವ ವೇಷ ಅಲಂಕಾರ ನಡೆ ನುಡಿ ಕಾರ್ಯ ಸಮಾರಂಭಗಳಲ್ಲಿ ಕಾಣಬರುವ ವಿಕಾರಗಳೇ ವಿಡಂಬನದ ಸಾಮಗ್ರಿ. ಸುಗುಣವನ್ನು ಕುರಿತು ನಕಲಿಮಾಡಲು ಯಾರೂ ಒಪ್ಪರು; ಯಾವ ವಕ್ರತೆಯೂ ಇಲ್ಲದೆ ಯಾವ ಅಪರಾಧಕ್ಕೂ ಬೀಳದೆ ತನ್ನ ಪಾಡಿಗೆ ತಾನು ಜೀವನವನ್ನು ಸಾಗಿಸುತ್ತಿರುವ ನಮ್ರಪುರುಷ ಎಂದಿಗೂ ನಗೆಪಾಟಲಲ್ಲ. ಎಲ್ಲಿ ಕಳಂಕ ಅಥವಾ ಕೊಂಕು ಎದ್ದು ನಿಲ್ಲುತ್ತದೆಯೋ ಅಲ್ಲಿಗೆ ವಿಡಂಬನ ಹಲ್ಲು ಮೊರೆಯುತ್ತ ಹಾರಿಬರುತ್ತದೆ. ನಿರ್ದೋಷವೆನ್ನುವುದು ಒಂದೇ ತರಹ; ದೋಷಗಳಾದರೋ ನೂರೆಂಟು ಬಗೆಯವು. ಶುಚಿಗೆ ಬಿಳಿಯ ವರ್ಣವೊಂದೇ; ಕೊಳಕಿಗೆ ಎಣಿಸಲಾಗದಷ್ಟು ಬಣ್ಣ. ನೆರೆಹೊರೆ ಮೆಚ್ಚುವಂತೆ ನೇರ್ಪಾಗಿರುವ ರೀತಿ ಒಂದೇ; ತಪ್ಪುಮಾಡಲು ನಾನಾ ದಾರಿಗಳುಂಟು. ಲಕ್ಷ್ಮೀಶ ಕವಿಯ ದುರುಳೆಮರುಳರ ಈ ಪಟ್ಟಿಗಳನ್ನು ಓದಿದರೆ ಯಾರಿಗೆ ತಾನೆ ಗಾಬರಿಯಾಗದು?

ಚಪಲೆ ಚಂಚಲೆ ಚಾಟುವತಿ ಚಂಡಿ ಛಲವಾದಿ ।
ಕುಪಿತೆ ಕುತ್ಸಿತೆ ಕುಹಕೆ ಕುಜೆ ಕಡ್ಡೆ ಕುಲಗೇಡಿ ।
ಕಪಟೆ ಕಂಟಕಿ ಕಟಕಿ ಕಡುದುಷ್ಟೆ ಕಲಹಾರ್ಥಿ
ಪರುಷೆ ಪರವಶೆ ಪಾದರಿ ॥

ವಿಫಲೆ ವಿಹ್ವಲೆ ವಿಷಮೆ ವಿರಹಿ ವಿಪರೀತೆ ಮಿಗೆ ।
ತಪಿತೆ ತಸ್ಕರೆ ತವಕಿ ತವೆ ತಂದ್ರಿ ತಾಮಸಿಯೆ ।
ನೃಪ ವನಿತೆಯರ ನಿಜಕೆ ನಿಲಿಸಿ ನಿಶ್ಚೈಸಿದೊಡೆ
ಬಳಿಕ ಬಳಲಿಕೆ ಬಾರದೆ ॥

CC-0. Jangamwadi Math Collection, Varanasi. An eGangotri Initiative

ಜಡನ ಮೂರ್ಖನ ಶಠನ ತಾಮಸನ ನಿಷ್ಠುರದ ।
ನುಡಿಯುವನ ಪಿಸುಣನ ಕೃತಘ್ನನ ಕರುಬನ ಬಾ ।
ಯ್ಬಡಿಕನ ಕುಚೇಷ್ಟಕನ ಕಾಮುಕನ ಹಿಂಸಕನ
ಡಾಂಭಿಕನ ಪಾಷಂಡಿಯ ॥

ಕಡುಗೋಪದವನ ಬಹುಭಕ್ಷಕನ ಕೊಳಕನನ ।
ವ್ಯಥನ ಕುತ್ಸಿತನ ಕುಹಕನ ದುರಾಚಾರದಿಂ ।
ನಡೆವವನ ವಿಶ್ವಾಸಘಾತಕನ ಪಾತಕನ ಲಕ್ಷ್ಮಿ
ತೊಲಗದೆ ಮಾಣ್ಬಳೆ ॥

ಹೀಗೆ ವಿಡಂಬನದ ವಿಷಯ ಭಿನ್ನಭಿನ್ನವಾದ ನಾನಾಮುಖಗ ಳಿಂದ ಕೂಡಿರುವುದು. ಅವೆಲ್ಲವನ್ನೂ ಕೂಲಂಕಷವಾಗಿ ವಿಮರ್ಶೆ ಮಾಡುವುದು ಸಾಧ್ಯವೆ? ಸಂಪೂರ್ಣವಾಗಿ ತರ್ಕ ಒಪ್ಪು ವಂತೆ ಎಲ್ಲ ವಿವರಗಳನ್ನೂ ವರ್ಗೀಕರಣಮಾಡುವುದು ನಮಗೆ ಅನಾವಶ್ಯಕ. ಮೂಲತತ್ವಗಳನ್ನು ಸುಲಭವಾಗಿ ಸಂಕ್ಷೇಪವಾಗಿ ತಿಳಿದುಕೊಳ್ಳುವುದೇ ನಮ್ಮ ಈಗಿನ ಅಪೇಕ್ಷೆ. ಆದ್ದರಿಂದ ಮನುಷ್ಯನ ನ್ಯೂನತೆ ಅತಿರೇಕಗಳನ್ನು ಸ್ಥೂಲವಾದ ಕೆಲವು ಗುಂಪುಗಳಾಗಿ ವಿಂಗಡಿಸಿ ಅವನ್ನು ಕುರಿತು ಚರ್ಚೆ ನಡೆಸಿದರೆ ನಮ್ಮ ಇಷ್ಟಾರ್ಥ ಸಂದಂತೆ. ಅಂಗವಿಕಾರ, ವಸ್ತ್ರಭೂಷಣಗಳ ವೈಪರೀತ್ಯ, ಕಸಬಿನ ಕೊಂಕು, ಸ್ವಭಾವಲೋಪ, ನಾನಾವಿಧದ ವಂಚನೆ, ಪಾಪಕೃತ್ಯ—ಈ ಆರು ಪ್ರಕರಣಗಳಲ್ಲಿ ವಸ್ತು ವಿಚಾರಣೆಯನ್ನು ಮಾಡಿದರೆ ಸಾಕು.

(೧) ಯೂರೋಪಿನ ಆದಿ ಕವಿ ಹೋಮರನ "ಇಲಿಯಡ್" ಮಹಾಕಾವ್ಯದಲ್ಲಿ ಥರ್ಸೈಟೀಸ್ ಎಂಬವನು ಒಬ್ಬ ವಿಚಿತ್ರ ವ್ಯಕ್ತಿ. "ಗ್ರೀಕರ ಅಕ್ಷೋಹಿಣಿಗಳಲ್ಲಿ ಅವನಂತಹ ಕುರೂಪಿ ಇನ್ನಿಲ್ಲ: ಕಮಾನಿನಂತೆ ಬಾಗಿದ ತೊಡೆ; ಒಂದು ಕಾಲು

CC-0. Jangamwadi Math Collection, Varanasi. An eGangotri Initiative

ಕುಂಟು; ಭುಜಗಳು ಮುಂದಕ್ಕೆ ಚಾಚಿಕೊಂಡು ಎದೆಯನ್ನು ಒತ್ತುತ್ತಿದ್ದುವು; ಸೊಟ್ಟತಲೆ; ತಲೆಚಿಪ್ಪಿನ ಮೇಲೆ ಜಿಕೆದು ನಿಂತಿದ್ದ ಬಿಡಿಕೂದಲು ಅಲ್ಲೊಂದು ಇಲ್ಲೊಂದು. ವೀರಾಧಿವೀರರ ಸಭೆಯಲ್ಲಿ ನಿಶ್ಶಬ್ದವಾಗಿರುವಾಗ ಥರ್ಸೈಟೀಸ್ ಎದ್ದು ತಪ್ಪುತಪ್ಪಾಗಿ ತಡೆಬಡೆಯಿಲ್ಲದೆ ನೂರಾರು ಶಬ್ದಗಳನ್ನು ನುಡಿದೇ ಬಿಟ್ಟ." ಈ ಚಿತ್ರವೇ ಯೂರೋಪಿನ ಸಾಹಿತ್ಯದಲ್ಲಿ ಮೊದಲ ವಿಡಂಬನವೆಂದು ಪ್ರತೀತಿ. ಅಲ್ಲಿಂದ ಮುಂದೆ ಬುದ್ಧ್ಯಾ, ಅಂಗವಿಕಾರದ ಅವಹೇಳನೆ ಬರವಣಿಗೆಯಲ್ಲಿ ಇದ್ದೇ ಇದೆ. ಸೌಂದರ್ಯವನ್ನು ಪಡೆಯದಿದ್ದರೂ ಪರವಾಯಿಲ್ಲ; ಅಂಗಾಂಗಗಳು ಸಮನಾಗಿ ಹೊಂದಿಕೊಂಡಿದ್ದರೆ ಸಾಕು. ಅದನ್ನು ಸಾಮಾನ್ಯವಾಗಿ ನರವರ್ಗದ ಬಹುಭಾಗಕ್ಕೆ ಪ್ರಕೃತಿಮಾತೆ ಅನುಗ್ರಹಿಸಿದ್ದಾಳೆ. ಹಾಗಿಲ್ಲದೆ ಯಾವುದೋ ವ್ಯತ್ಯಾಸ ಕಣ್ಣನ್ನು ಕುಕ್ಕುವಷ್ಟು ಎಲ್ಲಿ ತೋರಿಬರುತ್ತದೆಯೋ ಅಲ್ಲಿ ಸ್ವಲ್ಪ ಕುತೂಹಲಕ್ಕೆ ಅವಕಾಶ. ಚಪ್ಪಟೆಮೂಗು ಮೆಳ್ಳೆಗಣ್ಣು ಅತಿಕಪ್ಪು ಅತಿಕೆಂಪು ಪಟ್ಟು ಹಿಡಿದ ಶಿರಸ್ಸು ಸಿಡುಬಿನ ದೊಡ್ಡ ಕಲೆ ಮುಂತಾದ ಶಾರೀರಕ ಹೆಚ್ಚು ಕಡಮೆಗಳು ನೋಡುವವರ ಚೆಲ್ಲಾಟಕ್ಕೆ ಪಕ್ಕಾಗುವುದು ಸಹಜ. ಪ್ರಾಚೀನ ಗ್ರೀಕರ ಅಜ್ಞಾತ ಕವಿಯೊಬ್ಬನು ದೀರ್ಘನಾಸಿಕವನ್ನು ಹೀಗೆ ತಮಾಷೆ ಮಾಡಿದ್ದಾನೆ: "ಡಿಕ್ಸನಿಗೆ ಬೇಕುಬೇಕಾದಾಗ ತನ್ನ ಮೂಗನ್ನು ಒರಸಿಕೊಳ್ಳಲು ಆಗುವುದೇ ಇಲ್ಲ; ಮೂಗು ಬಹು ಉದ್ದ, ಕೈಗಳು ತೀರ ಮೋಟಕು. ಅವನು ಸೀನಿದಾಗ ಅಷ್ಟು ದೂರದ ಸದ್ದು ಅವನ ಕಿವಿಗೆ ಹೇಗೆ ಕೇಳಿಸೀತು!" ಷೇಕ್ಸ್‌ಪಿಯರ್ ಸೃಷ್ಟಿಸಿರುವ ಜ್ಯಾಕ್ ಫಾಲ್‌ಸ್ಟ್ಯಾಫ್ ಎಂಬ ಪಾತ್ರ ವಿನೋದವಾಙ್ಮಯದಲ್ಲಿ ಹಿಮಾಲಯದಂತೆ. ಫಾಲ್‌ಸ್ಟ್ಯಾಫನಿಗೆ ಅದ್ಭುತವಾದ ಸ್ಥೂಲಕಾಯ;

CC-0. Jangamwadi Math Collection, Varanasi. An eGangotri Initiative

ಅವನ ಸ್ನೇಹಿತರು ಅವನನ್ನು ಗೇಲಿಮಾಡುವ ವೈಖರಿ ಸಂತೋಷ ಕರ: "ಈ ಹಾಸಿಗೆಯನ್ನು ಹಪ್ಪಳಮಾಡುವವ, ಕುದುರೆಯ ಬೆನ್ನನ್ನು ಮುರಿಯುವವ, ಕೊಬ್ಬುಮಾಂಸಗಳ ದೊಡ್ಡ ಪರ್ವತ! ಎಲವೊ, ಜ್ಯಾಕ್, ನಿನ್ನ ಮೊಳಕಾಲನ್ನು ನೀನು ನೋಡಿ ಎಷ್ಟು ಸಂವತ್ಸರಗಳಾದುವೋ? ನೀನು ಸತ್ತರೆ ಹೊರುವವರ ಗತಿಯೇನೊ?" ಇದು ಪುರಾತನ ರೋಮನ್ ಕವಿ ಮಾರ್ಷಲ್ ಮಾಡಿರುವ ಪಟ್ಟೆತಲೆಯ ಪ್ರಹಸನ: "ನಿನ್ನ ಜಾಗದಲ್ಲಿ ನೀನು ಕುಳಿತಿದ್ದಾಗ ನೀನೊಬ್ಬನೇ ಮೂರು ಮಂದಿಯೆಂದು ಬಗೆದೆ. ಲ್ಯಾಬೀನಸ್; ನಿನ್ನ ತಲೆಪಟ್ಟೆ ನನ್ನನ್ನು ಭ್ರಾಂತಿಗೊಳಿಸಿತು. ಆ ಕಡೆ ಈ ಕಡೆ ಹುಡುಗರಿಗಿರುವಂತೆ ದಟ್ಟವಾದ ಕರಿ ಕುರುಳುಗಳು: ಮಧ್ಯೆ ಅಗಲವಾದ ಬೆಳೆಯ ಪಟ್ಟೆ. ಡಿಸೆಂಬರಿನಲ್ಲಿ ಇದರಿಂದ ನಿನಗೆ ಒಳ್ಳೆಯ ಆದಾಯ: ಚಕ್ರವರ್ತಿ ಬಡವರಿಗೆ ತಿಂಡಿಯ ಚುಕ್ಕೆಗಳನ್ನು ದಾನಮಾಡುವಾಗ ನಿನಗೆ ಮೂರು ಸಿಕ್ಕುತ್ತವೆ! ಮೂರು ತಲೆಯ ಗಿರಿಯಾನ್ ರಾಕ್ಷಸ ನಿನ್ನಂತೆ ಇದ್ದನೆಂದೇ ನನ್ನ ನಂಬಿಕೆ. ಆದ್ದರಿಂದ ನಗರದ ಹೆಬ್ಬಾಗಿಲ ಬಳಿ ಸುಳಿದೀಯೆ. ಕಂಡೆಯಾ! ಅಲ್ಲಿ ಮಹಾಪರಾಕ್ರಮಿ ಹರ್ಕ್ಯುಲೀಸನ ವಿಗ್ರಹ ವಿದೆ: ನೀನೇ ಗಿರಿಯಾನ್ ಎಂದು ಭಾವಿಸಿ ಅವನು ನಿನ್ನನ್ನು ತೀರಿಸಿಬಿಟ್ಟಾನು!"

ಈ ವಿಚಾರದಲ್ಲಿ ಲೋಕದ ದೃಷ್ಟಿ ಕೊಂಚ ಬದಲಾಯಿಸಿದೆ. ದೈಹಿಕ ಪ್ರಮಾದಗಳನ್ನು ನಿಶ್ಶಂಕೆಯಿಂದ ಅಪಹಾಸ್ಯಗೈಯುವ ಸ್ವಾತಂತ್ರ್ಯ ಈಚಿನವರೆಗೂ ಕವಿಗೆ ಇತ್ತೆಂದು ಹೇಳಬಹುದು. ಹದಿನೆಂಟನೆಯ ಶತಮಾನದಲ್ಲಿ ಕೂಡ ಹುಚ್ಚರ ಆಸ್ಪತ್ರೆಗೆ ಜನರು ಹೋಗಿ ಹರ್ಷನಾಟಕವನ್ನು ಈಕ್ಷಿಸಿದಂತೆ ಆಮೋದ

CC-0. Jangamwadi Math Collection, Varanasi. An eGangotri Initiative

ಪಡುತ್ತಿದ್ದರು. ಅಂಥಾ ನಡತೆ ಅನಾಗರಿಕನ ಲಕ್ಷಣವೆಂದು ಈಗಿನ ಭಾವನೆ. ಅದಕ್ಕೆ ಕಾರಣಗಳು ಮೂರು: ಅವಯವ ಗಳ ವಿಕಾರ ಕಣ್ಣಿರುವ ಎಲ್ಲರಿಗೂ ಗೋಚರವಾಗುವ ಸ್ಪಷ್ಟ ಸಂಗತಿ; ಅದನ್ನು ನಕಲಿಗೆ ಈಡುಗೈಯುವುದಕ್ಕೆ ಯಾವ ಪ್ರತಿಭೆಯೂ ನೈಪುಣ್ಯವೂ ಬೇಕಾಗಿಲ್ಲ. ಎರಡನೆಯ ದಾಗಿ ಅದು ಪ್ರಕೃತಿ ನಿಯಾಮಕ; ಉಬ್ಬುಹಲ್ಲೋ ಕೆಂಪು ಕೂದಲೊ ಕುಳ್ಳು ಆಕಾರವೊ ಅದರೊಡನೆ ಹುಟ್ಟಿಬಂದುದು ಆ ನತದೃಷ್ಟನ ತಪ್ಪೆ? ಕಣ್ಣು ಮೂಗು ಸರಿಯಾಗಿರುವವರು ತಮ್ಮ ಸೌಭಾಗ್ಯದ ಸಲುವಾಗಿ ಯಾವಾಗಲೂ ದೇವರಿಗೆ ಕೃತಜ್ಞ ರಾಗಿರಬೇಕು. ಮತ್ತು ದೈಹಿಕ ದುರ್ದಶೆಗೊಳಗಾದವರ ವಿಷ ಯದಲ್ಲಿ ಕನಿಕರವನ್ನು ತೋರಬೇಕು. ಕೊನೆಯದಾಗಿ ಶರೀರ ವೈಕಲ್ಯವನ್ನೇ ವಸ್ತುವಾಗಿ ಉಳ್ಳ ವಿಡಂಬನ ನಯವೂ ಹಿತವೂ ಅಂದವೂ ಆಗಿರುವುದು ಅಪರೂಪ.

ಈ ಸಂದರ್ಭದಲ್ಲಿ ಒಂದು ಸಂಗತಿಯನ್ನು ಮರೆಯಲಾಗದು. ಮುಪ್ಪು ತನ್ನಷ್ಟಕ್ಕೆ ತಾನೆ ದೂಷ್ಯವಲ್ಲ; ಆದರೆ ತಲೆನಡುಗುವ ಮುದುಕ ಬಲಿಷ್ಠ ಯುವಕನಂತೆ ನಟಿಸಲು ಯತ್ನಿಸಿದರೆ ನಾಚಿಕೆಗೇಡು. ಅಷ್ಟಾವಕ್ರ ತನ್ನ ಪಾಡಿಗೆ ತಾನು ಇದ್ದು ಕೊಂಡರೆ ಜನರ ಕೈರಣೆಗೆ ಅವನು ಪಾತ್ರ; ಅದನ್ನು ಬಿಟ್ಟು ತಾನು ಮನ್ಮಥನೆಂದು ಮೆರೆಯತೊಡಗಿದರೆ ಅವನ ಬೆನ್ನಿನ ಮೇಲೆ ಬೀಳುತ್ತದೆ ಅಣಕದ ಚಾಟಿಯೇಟು. ಉಗ್ಗತನ ಕ್ಷಮಾರ್ಹ; ಆದರೆ ತೊದಲಿಸುವ ತಾನು ವಾಗ್ಮಿಯೆಂದು ಕೊಬ್ಬಿ ಅಬ್ಬರಿಸಿದರೆ ಆಗ ಅವನಿಗೆ ಕೇಡು ಖಂಡಿತ. ಇದು ಮುಖ್ಯವಾದ ಅಂಶ. ಎಂಟು ಚೇಷ್ಟೆಮಾಡದೆ ಇರುವ ಕುಂಟನಿಗೆ ಇಲ್ಲವೇ ಇಲ್ಲ ಮೂದಲೆಯ ತಂಟೆ. ಆಂದರೆ ಯೋಗ್ಯ ವಿಡಂಬ

CC-0. Jangamwadi Math Collection, Varanasi. An eGangotri Initiative

ನಕ್ಕೆ ಯುಕ್ತಾಯುಕ್ತ ಪರಿಜ್ಞಾನವುಂಟು; ಅನ್ಯಾಯವನ್ನೆಸಗಲು ಅದು ಎಂದಿಗೂ ಒಪ್ಪದು; ಪಾತ್ರಾಪಾತ್ರವನ್ನು ಅರಿತು ತನ್ನ ಉದ್ಯಮವನ್ನು ಮುಂದುವರಿಸುವುದು ಅದರ ರೂಢಿ. ಹಳ್ಳಿಯ ಮಾರಿ ಯಾವುದನ್ನೂ ಯೋಚಿಸದೆ ಕೋಣನನ್ನು ಬಲಿ ತೆಗೆದು ಕೊಳ್ಳುತ್ತಾಳೆ; ವಿಡಂಬನ ಮಾರಿಯ ವರ್ತನೆ ಹಾಗಲ್ಲ. ಕಪ್ಪೋ ಕುರೂಪವೊ ಆಗಲಿ ಎಂದುಕೊಂಡು ಕೋಣ ತೆಪ್ಪಗಿದ್ದರೆ ಅದನ್ನು ಅವಳು ಬಾಧಿಸುವುದೇ ಇಲ್ಲ. ಆದರೆ ತೇಜಿಗಿಂತ ತಾನು ತೇಜಸ್ವಿಯೆಂದು ಕೋಣ ಓಡಾಡತೊಡಗಿದರೆ ಕೂಡಲೆ ಅದನ್ನು ಬಲಿಹೊಯ್ಯುವಳು!

(೨) ಮನುಷ್ಯನಷ್ಟು ನಿಸ್ಸಹಾಯಕವಾಗಿ ಜನಿಸುವ ಜೀವಿ ಮೇದಿನಿಯ ಮೇಲೆ ಮತ್ತೊಂದಿಲ್ಲ. ಆದರೂ ತನ್ನ ಪ್ರಚಂಡ ಬುದ್ಧಿಶಕ್ತಿಯಿಂದ ಅವನು ಪ್ರಪಂಚದ ಯಾಜಮಾನ್ಯವನ್ನು ಗಳಿಸಿಕೊಂಡಿರುವ. ಚಳಿ ಮಳೆಗಳಿಂದ ಶರೀರವನ್ನು ರಕ್ಷಿಸುವುದಕ್ಕೆ ಅವನು ಏರ್ಪಡಿಸಿಕೊಂಡ ಸಲಕರಣೆ ಉಡುಪು. ಉಡುಪಿನ ಆ ಉಪಯೋಗದಿಂದ ತೃಪ್ತಿಯಾಗಲಿಲ್ಲ ಮನುಷ್ಯನ ಮನಸ್ಸು. ಅಂದದ ಹಂಬಲಿಕೆ ಅವನಲ್ಲಿ ಒಂದು ಸಹಜ ಧರ್ಮ. ಆದ್ದರಿಂದ ಹಾಕಿಕೊಳ್ಳುವ ಬಟ್ಟೆಬರೆಯನ್ನು ಮುದ್ದಾಗಿ ಮಾರ್ಪಡಿಸಿ, ಅದು ಮೈಕಟ್ಟಿನ ಬೆಡಗನ್ನು ಪುಷ್ಟಿಗೊಳಿಸುವಂತೆ ನಿಯೋಜಿಸಿದ. ಆಭರಣಗಳ ಚರಿತ್ರೆಯೂ ಅಂತೆಯೇ. ಅಪೂರ್ವವಾಗಿ ಅಮೂಲ್ಯವಾಗಿ ಕಂಡುಬಂದ ಲೋಹ ಮತ್ತು ಹರಳುಗಳನ್ನು ಹತ್ತಿರ ಬಚ್ಚಿಟ್ಟುಕೊಂಡು ಗುಟ್ಟಿನಲ್ಲಿ ಸೌಖ್ಯಪಡುತ್ತ, ಕಾಲಕ್ರಮೇಣ ಇತರರಿಗೆ ಪ್ರದರ್ಶಿಸಿ ಹೆಮ್ಮೆಯನ್ನು ಹೆಚ್ಚಿಸಿಕೊಳ್ಳುವ ಬಯಕೆಯಿಂದ ಅವನ್ನು ಮೈಮೇಲೆ ಧರಿಸಲಾರಂಭಿಸಿ, ಅವೂ ಕೂಡ ಶರೀರದ ಶೋಭೆಯನ್ನು ಇಮ್ಮಡಿ

CC-0. Jangamwadi Math Collection, Varanasi. An eGangotri Initiative

ಮಾಡುವಂತೆ ಅವಕ್ಕೆ ರೂಪುಕೊಡಲು ಉದ್ಯುಕ್ತನಾದ. ವಸ್ತ್ರ ಭೂಷಣಗಳಿಗೆ ಇದೇ ನಿಜವಾದ ಸಾರ್ಥಕತೆ. ಅವು ಹೇಗಿರಬೇಕು, ಎಷ್ಟಿರಬೇಕು ಎಂಬುದಕ್ಕೆ ಒಂದು ಕಟ್ಟನ್ನು ನಿಶ್ಚಯಿಸಲು ಸಾಧ್ಯವೆ ಎಂದು ಕೇಳಿದರೆ ಉತ್ತರಕೊಡುವುದು ಅಷ್ಟೇನೂ ಕಷ್ಟವಲ್ಲ. ದೇಶ ಕಾಲಗಳು ಯಾವುದೋ ಹಾಳತವನ್ನು ನೇಮಿಸುವುವು: ಅದನ್ನು ಅವು ಅತಿಕ್ರಮಿಸಬಾರದು, ಅಷ್ಟೆ. ಪ್ರತಿಯೊಂದು ತಲೆಮಾರಿನಲ್ಲಿಯೂ ಯಾವುದೋ ಒಂದು ಉಡಿಗೆ ತೊಡಿಗೆಯ ಸಂಕೇತ ವಿಧಿಬದ್ಧವಾಗುತ್ತದೆ. ಏಳೆಂಟು ಮುಂದಾಳುಗಳು ಸಭೆ ಸೇರಿ ಗೊತ್ತುಮಾಡುವ ಶಾಸನವಲ್ಲ ಅದು; ಸಂಬಳದ ನೌಕರರು ಬರೆದಿಡುವ ಕರಾರೂ ಅಲ್ಲ. ಸಮಾಜದಲ್ಲಿ ಹೇಗೊ ಆವಿರ್ಭವಿಸಿ, ಬೆಳೆದು, ಹರಡಿ, ಎಲ್ಲರ ವಿಧೇಯತೆಯನ್ನೂ ಸ್ವೀಕರಿಸುವ ಒಂದು ತರಹದ ಕಟ್ಟಳೆ. ಬಹುಶಃ ಬಿಡಿ ವ್ಯಕ್ತಿಗಿರುವಂತೆ, ಒಟ್ಟು ಸಮಾಜಕ್ಕೂ ಒಂದು ಬಗೆಯ ಗುಪ್ತವಾದ ಸಾಮೂಹಿಕ ಪ್ರಜ್ಞೆಯಿದೆ. ಅದರ ವಿಚಕ್ಷಣೆಗೆ ಅನುಗುಣವಾಗಿ ವೇಷ ಭೂಷಣಗಳ ಮರ್ಯಾದೆ ಬಳಕೆಗೆ ಬರುತ್ತದೆ. ಅದನ್ನು ವಿರೋಧಿಸಿದಲ್ಲಿ ಆಭಾಸ. "ದೇವರಿಗೆ ಒಪ್ಪಿಸಬೇಕಾದುದನ್ನು ದೇವರಿಗೆ ಒಪ್ಪಿಸು; ದೊರೆಗೆ ಕೊಡಬೇಕಾದುದನ್ನು ದೊರೆಗೆ ಕೊಡು" ಎಂದು ಯೇಸುಕ್ರಿಸ್ತ ಬುದ್ಧಿಹೇಳಿದ. ಹಾಗೆಯೇ ಸಮಾಜಕ್ಕೆ ಸಲ್ಲಬೇಕಾದ್ದನ್ನು ಸಮಾಜಕ್ಕೆ ಸಲ್ಲಿಸಲೇ ಬೇಕು. ಈ ವಿಷಯವನ್ನು ಉಲ್ಲಂಘಿಸುವವನು ಹಾಸ್ಯಾಸ್ಪದನಲ್ಲದೆ ಮತ್ತೇನು? ಮೈಗೆ ತುಂಬ ಹತ್ತಿಕೊಂಡು ಅನಾನುಕೂಲವೆಂದು ತೋರುವ ಅಂಗಿ; ಆನೆಯ ಕಾಲಿಗೆ ತೊಡಿಸಬಹುದಾದ ಷರಾಯಿ; ಪಟ್ಟೆಪಟ್ಟೆಯ ಬಟ್ಟೆ; ಕಣ್ಣನ್ನು ಕೋರೈಸುವ ಬಣ್ಣ; ಬಹಳ ಅಗಲದ ರಾಗಟೆ;

CC-0. Jangamwadi Math Collection, Varanasi. An eGangotri Initiative

ತೆಳುರೇಷ್ಮೆಯನ್ನುಟ್ಟ ನವೀನ ಯುವತಿಯು ಕಿವಿಗೆ ಚಂದ್ರಮುರು ; ಪಾಶ್ಚಾತ್ಯ ತಲೆಟೊಪ್ಪಿಗೆಯನ್ನು ಹಾಕಿದ ಯುವಕನ ಹಣೆಯಲ್ಲಿ ದಪ್ಪ ಮೂರುನಾಮ; ಚಿನ್ನ ವಜ್ರದ ಅಂಗಡಿಯೋ ಎಂದು ತೋರುವಂತೆ ಹೇರಿಕೊಂಡ ಒಡವೆ; ಪರರಲ್ಲಿ ಅಸೂಯೆಯನ್ನು ಉಂಟುಮಾಡಲೋಸುಗವೇ ಮೆರೆಸುವ ಐಶ್ವರ್ಯ— ಇವು ಗುಂಪುಜೀವನಕ್ಕೆ ನಿಷಿದ್ಧ. ಇಂಥಾ ವಿದ್ಯಮಾನಗಳನ್ನು ಕಂಡರೆ ವಿಡಂಬನ ಕೆರಳುವುದು ಯುಕ್ತವೆ. ಹದವಾದ ಮಿತವನ್ನು ಮೀರದಿದ್ದರೆ ಎಲ್ಲವೂ ಸುಗಮ. ಆದರೆ ಪ್ರತಿಯೊಂದು ಕಾಲದಲ್ಲಿಯೂ ಲೋಕಕ್ಕೆ ಹೊರಚಾಗಿ ನಡೆಯುವ ಹೆಬ್ಬಯಕೆಯುಳ್ಳ ಕೆಲವರು ಅವತರಿಸುತ್ತಾರೆ. ಮಾರ್ಷಲ್ ತನ್ನ ಕಾಲದ ಶ್ರೀಮಂತರ ಡೌಲನ್ನು ಹಳಿಯುವ ಸೊಬಗನ್ನು ನೋಡಿ: "ಈ ರಾತ್ರಿ ನಿನ್ನ ಮನೆಯಲ್ಲಿ ಔತನವಾಗುವಾಗ ಹನ್ನೊಂದುಬಾರಿ ಎದ್ದು ಹೋದೆ, ಸಾಯ್ಲಸ್; ನಿನ್ನ ನಿಲುವಂಗಿಯನ್ನು ಹನ್ನೊಂದು ಬಾರಿ ಬದಲಾಯಿಸಿದೆ. ಏತಕ್ಕೆ ? ಬೆವರಿನ ತೊಟ್ಟೊಂದು ಬಟ್ಟೆಗೆ ಹತ್ತಿಕೊಂಡು ಅದರಮೇಲೆ ತಂಗಾಳಿ ಬೀಸಿದರೂ ನಿನ್ನ ಆರೋಗ್ಯಕ್ಕೆ ಅಪಾಯವೇನೊ !. ಆದರೆ ನಿನ್ನೊಡನೆ ಊಟಕ್ಕೆ ಕುಳಿತಿದ್ದ ನನಗೆ ಬೆವರಲೇ ಇಲ್ಲವಲ್ಲ; ಹದ ತಂಪಾಗಿ ಹಿತವಾಗಿತ್ತು! " ಹೀಗೆಯೇ ಎಲಿಸಬೆತ್ ರಾಣಿ ಆಳುತ್ತಿದ್ದಾಗ ವಸ್ತ್ರವ್ಯಾಮೋಹ ಇಂಗ್ಲಿಷ್ ಜನರಲ್ಲಿ ಅತ್ಯಧಿಕವಾಗಿ ಬೆಳೆದಿತ್ತು. ಆ ದೇಶ ಈ ದೇಶದ ಬಗೆಬಗೆಯ ಮಾದರಿಗಳನ್ನು ಅನುಕರಿಸಿ ಎಷ್ಟು ಅಟ್ಟಹಾಸ ಮಾಡಿದರೂ ಅವರಿಗೆಸಾಲದು. ಆ ಹುಚ್ಚನ್ನು ಡೆಕ್ಕರ್ ಎಂಬ ಕವಿ ಹೀಗೆ ವಿಡಂಬನಗೈದ: "ಒಬ್ಬ ಕಲೆಗಾರ ಯೂರೋಪಿನ ಹಲವು ನಾಡುಗಳ ಜನರನ್ನು ಚಿತ್ರಿಸತೊಡಗಿದ. ಫ್ರಾನ್ಸ್ ಜರ್ಮನಿ

CC-0. Jangamwadi Math Collection, Varanasi. An eGangotri Initiative

ಸ್ಪೇನ್ ಇಟಲಿ ರಷ್ಯದ ಪ್ರತಿನಿಧಿಗಳನ್ನು ಅವರವರ ಪೋಷಾಕುಗಳಿಗನುಸಾರವಾಗಿ ರೂಪಿಸಿ ಕೃತಾರ್ಥನಾದ. ಇಂಗ್ಲೆಂಡಿನ ಸಿಪಾಯಿಯನ್ನು ಚಿತ್ರಿಸುವುದೊಂದು ಉಳಿಯಿತು : ಕಲೆಗಾರನಿಗೆ ದೊಡ್ಡ ಕಷ್ಟ ಸಂಭವಿಸಿತು ; ಎಷ್ಟು ಚಿಂತಿಸಿದರೂ ದಿಕ್ಕೇ ತೋಚದಂತಾಯ್ತು. ಕೊನೆಗೆ ಇಂಗ್ಲಿಷರವನ ಬೆತ್ತಲೆ ಆಕೃತಿಯನ್ನು ರಚಿಸಿ, ಒಂದು ಕೈಯ ಮೇಲೆ ಬಟ್ಟೆಯ ಥಾನುಗಳನ್ನು ಪೇರಿಸಿ, ಇನ್ನೊಂದು ಕೈಯಲ್ಲಿ ಕತ್ತರಿಯನ್ನು ಕೊಟ್ಟು, ಚಿತ್ರವನ್ನು ಮುಗಿಸಿದ!" ಅದೇ ಕಾಲದ ಜಾನ್ ಅರ್ಲ್ "ಷೋಕಿಗಾರನಿಗೆ ಇರುವುದು ಎರಡೇ ವಿಚಾರಗಳ ಯೋಗಕ್ಷೇಮ : ಮೊದಲು ಉಡುಪು, ಆಮೇಲೆ ದೇಹ ; ಅವೆರಡರ ಮಿಶ್ರಣದಿಂದ ಹುಟ್ಟುವುದೇ ಅವನ ಆತ್ಮ ಅಂತಶ್ಶಕ್ತಿಗಳು!" ಎಂದು ನಿಂದಿಸಿದ. ಕೃತಕ ಹಲ್ಲುಗಳನ್ನೂ ಚೆಲುವಾದ ಚೌರಿಗಳನ್ನೂ ಧರಿಸುವುದು, ಘಮಘಮಿಸುವ ಪುಡಿಕೆಂಪು ಬಿಳಿಯ ಬಣ್ಣವೇ ಮುಂತಾದ ಅಂಗರಾಗಗಳನ್ನೂ ಬಳಿದುಕೊಳ್ಳುವುದು, ಪಾಶ್ಚಾತ್ಯ ಸ್ತ್ರೀಯರಿಗೆ ಬಹಳ ಹಿಂದಿನಿಂದಲೂ ಬಂದ ಅಭ್ಯಾಸ. ಸಾಧಾರಣ ಹೆಂಗಸು ಸುಂದರಿಯಂತೆಯೂ ಮಧ್ಯವಯಸ್ಸಿನವಳು ತರುಣಿಯಂತೆಯೂ ಕಾಣಿಸಬೇಕೆಂಬುದೇ ಅವರ ಭಾರಿ ಪ್ರಯತ್ನ ; ಅದಕ್ಕಾಗಿ ತುಂಬ ಹಣದ ಖರ್ಚು ; ಘಂಟೆ ಘಂಟೆ ಕನ್ನಡಿಯ ಮುಂದೆ ಕಾಲಹರಣ ; ಅಂತು ಎಲ್ಲ ವಿವರಗಳೂ ವಿಡಂಬನಕ್ಕೆ ಸಮಂಜಸವಾದ ತುತ್ತು. "ಗಾಲ, ನಿನ್ನ ತುರುಬು ಎಲ್ಲಿಯೋ ದೂರದಲ್ಲಿ ತಯಾರಾದುದು. ರಾತ್ರಿ ಮಲಗುವಾಗ ನಿನ್ನ ಹಲ್ಲಿನ ಸಾಲನ್ನು ಬೇರೊಂದು ಕಡೆ ತೆಗೆದಿಡುವೆ. ನಿನ್ನ ಮುಖ ನಿನ್ನೊಡನೆ ನಿದ್ರಿಸುವುದಿಲ್ಲ. ನೂರು ಪೆಟ್ಟಿಗೆಗಳಲ್ಲಿ ಬಹು ಜೋಪಾನದಿಂದ

CC-0. Jangamwadi Math Collection, Varanasi. An eGangotri Initiative

ನೀನು ಶಯನಿಸುವೆ. ಆದರೂ ಆ ಹುಬ್ಬನ್ನ—ಬೆಳಗ್ಗೆ ನಿನಗಾಗಿ ಕೊಂಡುತಂದ ಹುಬ್ಬನ್ನ—ಕುಣಿಸುವೆಯಲ್ಲ! "—ಮಾರ್ಷಲ್. "ಕ್ಲೋ, ಕಾಗೆಯಂತೆ ಕಪ್ಪಾಗಿರುವ ನಿನ್ನ ಕೂದಲು ಬಣ್ಣಹಾಕಿದ ಕೂದಲು ಎಂದು ಜನರು ದೂರುವರು. ಅದು ಸುಳ್ಳು ಅಪವಾದ. ನನಗೆ ಗೊತ್ತು, ನೀನು ಎಲ್ಲಿ ಕಪ್ಪು ಕೂದಲನ್ನೇ ಕೊಳ್ಳುನೆಯೆಂಬುದು!"—ಲ್ಯೂಸಿಲಿಯಸ್. ಗೋಲ್ಡ್‌ಸ್ಮಿತ್ ಕವಿ ತನ್ನ ಕಾಲದ ಸ್ತ್ರೀಯರನ್ನು ಹೀಗೆ ಹಂಗಿಸುತ್ತಾನೆ: "ಅನೇಕ ಇಂಗ್ಲಿಷ್ ಮಹಿಳೆಯರಿಗೆ ಒಬ್ಬೊಬ್ಬರಿಗೂ ಎರಡೆರಡು ಮುಖ. ಮಲಗಿ ವಿಶ್ರಾಂತಿ ಪಡೆಯುವುದಕ್ಕೆ ಒಂದು, ಹೊರಗಡೆ ಜನರ ಗೋಷ್ಠಿಗೆ ತೋರಿಸುವುದಕ್ಕೆ ಇನ್ನೊಂದು. ಮೊದಲನೆಯ ಮುಖ ಮನೆಯಲ್ಲಿ ಗಂಡ ಮಕ್ಕಳುಮರಿಗಳಾಗಿ. ಎರಡನೆಯದು ಹೊರಗಿನ ಮಂದಿ ನೋಡಿ ಆಹ್ಲಾದಪಡಲೋಸುಗ. ಸಂಸಾರದಲ್ಲಿ ಉಪಯೋಗಿಸುವ ಮುಖ ಸಾಮಾನ್ಯವಾಗಿ ಅಷ್ಟಕ್ಕಷ್ಟೆ; ಆದರೆ ಸಮಾಜದಲ್ಲಿ ವಿಜೃಂಭಿಸುವ ವದನ ಬಹು ಲಕ್ಷಣವಾದ್ದು. ಕನ್ನಡಿಯೂ ಸಖಿಯೂ ಸೇರಿ ಪರ್ಯಾಲೋಚನೆಗೈದು ಆ ವದನವನ್ನು ನಿರ್ಮಿಸುವರು." ಪ್ಲೇಟೊವಿನ ಒಂದು ಚಿಕ್ಕವಿಡಂಬನ ಕವನವಿದೆ; ಅದರಲ್ಲಿ ಇಳಿ ವಯಸ್ಸಿನ ಒಬ್ಬನಾರಿ ಪ್ರಾರ್ಥಿಸುತ್ತಾಳೆ: "ಈ ಕನ್ನಡಿಯನ್ನು ಹಿಂದಕ್ಕೆ ತೆಗೆದುಕೊ, ರತಿದೇವಿ! ಅದು ನನಗೆ ಇನ್ನು ಬೇಡ. ಹಿಂದೆ ಹೇಗಿದ್ದೆನೆಂಬುದನ್ನು ನೋಡಲು ಅನುಕೂಲವಿಲ್ಲ; ಮುಂದೆ ಹೇಗಾಗುವೆನೆಂಬುದನ್ನು ನೋಡಲು ಅಪೇಕ್ಷೆಯಿಲ್ಲ."

(೩) ಯಾವುದಾದರೂ ವೃತ್ತಿಯ ಮೂಲಕ ಜೀವನೋಪಾಯವನ್ನು ಸ್ವತಂತ್ರವಾಗಿ ನಡೆಸುವುದು ಪ್ರತಿಯೊಬ್ಬನ ಕರ್ತವ್ಯ. ಒಂದು ವೃತ್ತಿಗೆ ಸೇರಿಕೊಂಡು, ಅದರಲ್ಲಿಯೇ

CC-0. Jangamwadi Math Collection, Varanasi. An eGangotri Initiative

ಲೀನವಾಗಿ, ಅದಕ್ಕೆ ತನ್ನ ಕಾಲ ಗಮನ ಶಕ್ತಿ ಸಾಮರ್ಥ್ಯಗಳ ಬಹುಭಾಗವನ್ನು ಮುಡಿಪಾಗಿ ಕೊಡುವುದರಿಂದ ಅನಿವಾರ್ಯ ವಾಗಿ ಒಂದು ಏಕಮುಖತ್ವ ಅಥವಾ ಸಂಕುಚಿತ ಮನೋ ಧರ್ಮ ಕೆಲಸಗಾರನಲ್ಲಿ ಜನಿಸುತ್ತದೆ. ಒಂದು ಕಸಬಿಗೆ ಸೇರಿದ ಹಲವರಲ್ಲಿ ಒಂದೇ ತರಹದ ಕೊಂಕು ವ್ಯಕ್ತವಾಗುವುದರಿಂದ ಆ ಕೊಂಕು ಆ ಕಸಬಿಗೇ ಅಂಟಿಕೊಂಡುಬಿಡುತ್ತದೆ, ನಾವಿಕನಿಗೂ ರಾವುತನಿಗೂ ಇತರರಂತೆ ಹೆಜ್ಜೆ ಹಾಕಲು ಸಾಧ್ಯವಿಲ್ಲ. ಕ್ಷೌರಿಕ ವಿಶೇಷ ವಾಚಾಳಿ, ವೈದ್ಯನ ಬಳಿಗೆ ಹೋದ ರೋಗಿ ಹಿಂತಿರುಗ ಲಾರ, ವಕೀಲನಿಗೆ ಒಪ್ಪಿಸಿಕೊಟ್ಟ ವ್ಯಾಜ್ಯ ಹಾಳಾದಂತೆಯೇ. ಉಪಾಧ್ಯಾಯನಿಂದ ಬಾಲಕನ ಬುದ್ಧಿ ಕೀಳಾಗುತ್ತದೆ, ಹೆಂಗ ಸಿಗೆ ಹೇಳಿದ ಗುಟ್ಟು ಖಂಡಿತ ರಟ್ಟು, ಕವಿಗೂ ಬಡತನಕ್ಕೂ ನಂಟು, ಪರಬ್ರಹ್ಮದ ಯೋಚನೆ ಇಲ್ಲದವನೇ ಪುರೋಹಿತ, ಇತ್ಯಾದಿ ಸಿದ್ಧಾಂತಗಳು ನರವರ್ಗದಲ್ಲಿ ಬೇರೂರಿವೆ. ಯಥಾರ್ಥ ವನ್ನು ಭಾವಿಸಿದರೆ, ತಪ್ಪು ವೃತ್ತಿಯದಲ್ಲ. ಕೃಷಿಗಳಲ್ಲಿ ಉಚ್ಚ ನೀಚ ಪವಿತ್ರ ಮೈಲಿಗೆ ಎಂದು ಭೇದವನ್ನು ಬಗೆಯಲಾಗದು: ಲೋಕಕ್ಕೆ ಗೊತ್ತು ಎಲ್ಲ ಕಾಯಕಗಳೂ ಸತ್ಕಾರಕ್ಕೆ ಯೋಗ್ಯ ವೆಂಬುದು. ಅಂದರೆ ಉದ್ಯೋಗಿಯ ಅನರ್ಹತೆ ಚಾಪಲ್ಯ ಅನಾದರ ನಿರ್ದಯೆ ಸ್ವಾರ್ಥ ದ್ರವ್ಯಾಪೇಕ್ಷೆಗಳಿಂದ ಉದ್ಯೋ ಗಕ್ಕೆ ಅಪವಾದ ತಟ್ಟುತ್ತದೆ. ಕಸಬುದಾರನ ವಕ್ರತೆ ಅವನ ಕಸಬಿನ ನೆತ್ತಿಯಮೇಲೆ. ಈ ವಿಡಂಬನಗಳನ್ನು ಗಮನಿಸಿ:- "ನಿನ್ನೆಯು ರಾತ್ರಿ ಈ ವಿಗ್ರಹಕ್ಕೆ ತಾಕಿತು ವೈದ್ಯನ ಕಣ್ಣು; ಘಟ್ಟಿಶಿಲೆ; ಮೇಲೆ ದೇವತೆ; ಆದರೆಯು ಈಗ ಅದು ಮಣ್ಣು."— ನಿಕಾರ್ಕಸ್. "ವೈದ್ಯ ಸೋಟಸನ ಮಗಳೆ, ಲ್ಯಾಬಲ, ಕೈ ಹಿಡಿದ ಪತಿಯನ್ನು ಪ್ರೀತಿಸದೆ ಬೇರೊಬ್ಬ ಪ್ರಿಯನೊಡನೆ

CC-0. Jangamwadi Math Collection, Varanasi. An eGangotri Initiative

ನೀನು ಓಡಿಹೋದೆ. ನಿನ್ನ ನಡೆವಳಿಕೆ ವೈದ್ಯ ನೋಟಕನ ಮಗಳಿಗೆ ತಕ್ಕುದಲ್ಲ"—ಮಾರ್ಷಲ್. ನಮ್ಮಲ್ಲಿಯೂ ಒಂದು ಹಾಸ್ಯಕಥೆ ಇದೆ. ವೈದ್ಯವೃತ್ತಿಯ ಸೋದರರಿಬ್ಬರು ಪ್ರಯಾಣ ದಿಂದ ಹಿಂತಿರುಗಿ ಬರುವಾಗ, ತಮ್ಮ ಹಳ್ಳಿಯ ಹತ್ತಿರ ಚಿತೆಯ ಮೇಲೆ ಒಂದು ಹೆಣ ಉರಿಯುತ್ತಿದ್ದುದನ್ನು ಕಂಡರು. ತಮ್ಮ ನಿಗೆ ಅಣ್ಣ ಹೇಳಿದ: "ಊರಿನಲ್ಲಿ ನಾನೂ ಇರಲಿಲ್ಲ; ನೀನೂ ಇರಲಿಲ್ಲ; ಹೇಗಾಯ್ತು ಇದು?" "ಸೀಮಿಲಸ್ ರಾತ್ರಿ ಪೂರ್ತ ತನ್ನ ಪಿಟೀಲನ್ನು ಬಾರಿಸಿ ನೆರೆಹೊರೆಯವರನ್ನೆಲ್ಲ ಕೊಂದ. ಒಬ್ಬ ಮಾತ್ರ ಉಳಿದ: ಕಿವುಡ ಆರಿಗನ್. ಪ್ರಕೃತಿ ದೇವಿ ಅವನ ಕಿವಿಯನ್ನು ಕಿತ್ತುಕೊಂಡದ್ದಕ್ಕೆ ಪರಿಹಾರವಾಗಿ ಅವನಿಗೆ ಪೂರ್ಣಾಯುಷ್ಯವನ್ನು ಕೊಟ್ಟಳು!"—ಲಿಯೋನಿ ಡಾಸ್. "ಕಾವ್ಯಪಠನಮಾಡುವ ಮೊದಲು ಉಣ್ಣೆಬಟ್ಟೆಯನ್ನು ಏಕೆ ಕುತ್ತಿಗೆಗೆ ಸುತ್ತಿಕೊಳ್ಳುವೆ, ಗನುಕಿ ಬಾಸಸ್? ನಾವು ಅದನ್ನು ನಮ್ಮ ಕಿವಿಗಳಿಗೆ ಕಟ್ಟಿಕೊಳ್ಳಬೇಕಲ್ಲವೆ?"-ಮಾರ್ಷಲ್. "ಸಂಪನ್ನನೊಬ್ಬನಿಗೆ ಒಂದು ರಾತ್ರಿ ಕನಸು ಬಿತ್ತು. ಒಬ್ಬ ಸುಲ್ತಾನ ಸ್ವರ್ಗದಲ್ಲಿಯೂ ಒಬ್ಬ ಖಾಜಿ ನರಕದಲ್ಲಿಯೂ ಇದ್ದುದನ್ನು ಕಂಡ. 'ಇದೇನು ಅದಲುಬದಲಾಗಿದೆಯಲ್ಲ!' ಎಂದು ಅಚ್ಚರಿಪಟ್ಟ. ಕನಸಿನಲ್ಲಿಯೇ ಉತ್ತರ ಬಂತು: 'ಧರ್ಮಪ್ರಿಯನೂ ಶೀಲವಂತನೂ ಆದುದರಿಂದ ಈ ಸುಲ್ತಾನ ಸ್ವರ್ಗಕ್ಕೆ ಏರಿದ; ಸುಲ್ತಾನರ ಅನುಗ್ರಹಕ್ಕೆ ಬಾಯಿತೆರೆದುದ ರಿಂದ ಈ ಖಾಜಿ ನರಕಕ್ಕೆ ಇಳಿದ.'"—ಷೇಕ್ ಸಾದಿ. "ಯಾವು ದಾದರೂ ಆಪತ್ತು ಅಟ್ಟಿಸಿಕೊಂಡು ಬಂದರೆ ಅದನ್ನು ಮಠಾಧಿ ಕಾರಿಗಳು ಭಗವಾನ್ ಪೀಟರ್ ಭಗವಾನ್ ಪಾಲರಿಗೆ ಬಿಟ್ಟು ಬಿಡುವರು. ಅದನ್ನು ಆ ಆಚಾರ್ಯರು ನೋಡಿಕೊಳ್ಳಲಿ; ಅವ

CC-0. Jangamwadi Math Collection, Varanasi. An eGangotri Initiative

ರಿಗೆ ಸ್ವರ್ಗದಲ್ಲಿ ಯಥೇಷ್ಟವಾಗಿ ಬಿಡುವಿದೆಯಲ್ಲ! ಆದರೆ ಸಿರಿ
ಸೌಖ್ಯ ಉತ್ಸವಾದಿಗಳು ಕೂಡಿಬಂದರೆ ಅವು ಮಾತ್ರ ಮಠಾಧಿ
ಕಾರಿಗಳಿಗೇ ಬೇಕು.”—ಇರ್ಯಾಸ್ಮಸ್. “ಪ್ರಾಣಿಗಳಲ್ಲೆಲ್ಲಾ
ಹೋತವೊಂದೇ ಬುದ್ಧಿಶಾಲಿ: ಗಡ್ಡವನ್ನು ಇಟ್ಟುಕೊಂಡು
ಬದುಕಿದೆ. ಕ್ಷೌರಿಕ ಆಂಟಿಯೋಕಸನ ಭೀತಿ ಅದಕ್ಕಿಲ್ಲ.”—
ಮಾರ್ಷಲ್. “ನುಷರ್‌ವಾನ್ ನರೇಂದ್ರನಿಗೆ ಒಬ್ಬ ಹೊಗಳು
ಭಟ್ಟ ಒಂದು ಸುದ್ದಿಯನ್ನು ಬಿನ್ನವಿಸಿದ: ‘ಮಹಾಸ್ವಾಮಿ
ಯವರ ಪ್ರಬಲ ಶತ್ರುವನ್ನು ಭಗವಂತ ಭೂಮಿಯಿಂದ ತೊಡೆದು
ಹಾಕಿದ!’ ನುಷರ್‌ವಾನ್ ಅವನನ್ನು ಕೇಳಿದ: ‘ಭಗವಂತ
ನನ್ನನ್ನು ಉಳಿಸುತ್ತೇನೆಂದು ನಿನ್ನೊಡನೆ ಹೇಳಿ ಕಳುಹಿ
ಸಿದನೇ?”—ಷೇಕ್ ಸಾದಿ. “ಓ, ಅರಿಸ್ಟೈಡೀಸ್, ಭಾಷಣ
ಶಾಸ್ತ್ರದ ಮಹಾಮಹೋಪಾಧ್ಯಾಯ ನೀನು; ನಿನ್ನ ಮಾತು
ಗಾರಿಕೆ ಅತ್ಯಾಶ್ಚರ್ಯಕರ. ನೋಡು, ಸುತ್ತ ಕುಳಿತುಕೊಂಡು
ಸ್ತಬ್ಧರಾಗಿ ನಿನ್ನ ನುಡಿಗಳನ್ನು ಆಲಿಸುತ್ತಿರುವರು, ಏಳುಮಂದಿ
ವಿದ್ಯಾರ್ಥಿಗಳು——ಕೊಠಡಿಯ ನಾಲ್ಕು ಗೋಡೆಗಳು, ಮೂರು
ಬೆಂಚುಗಳು!”— ಗ್ರೀಕರ ಅಜ್ಞಾತ ಕವಿ. “ಎಲವೊ, ಹಾಳು
ಮೇಷ್ಟ್ರ! ನಮ್ಮ ನಡುವೆ ನೀನೇಕೆ ಬಂದೆಯೊ? ಕೋಳಿ
ಕೂಗುವುದಕ್ಕೆ ಮೊದಲೇ ಬಾಲಕರನ್ನು ಗದರಿಸುತ್ತ, ಅವರ
ಬೆನ್ನಿನಮೇಲೆ ಗುದ್ದುತ್ತ, ಅಸಾಧ್ಯ ಗಲಭೆಯೆಬ್ಬಿಸುವೆ. ಹಿತ್ತಾ
ಳೆಯ ಪ್ರತಿಮೆಯನ್ನು ರಚಿಸುವಾಗ ಕಮ್ಮಾರನ ಕೊಡತಿ ನಿನ್ನ
ಹಾಗೆ ಸದ್ದು ಮಾಡುತ್ತೆ. ತಮ್ಮ ಕಡೆಯವನು ಪಂದ್ಯದಲ್ಲಿ
ಗೆದ್ದಾಗ ಪ್ರೇಕ್ಷಕರು ಮಾಡುವ ಕೋಲಾಹಲ ನಿನ್ನ ಗಲಾಟೆ
ಗಿಂತ ಮೃದು. ನಿನ್ನ ನೆರೆಯವರಾದ ನಾವು ಹೆಚ್ಚೇನೂ ಬೇಕೆ
ನ್ನುವುದಿಲ್ಲ: ಒಂದೆರಡು ಘಂಟೆಯ ಸುಖನಿದ್ರೆ. ರಾತ್ರಿಯೆಲ್ಲಾ

CC-0. Jangamwadi Math Collection, Varanasi. An eGangotri Initiative

ಎಚ್ಚತ್ತಿರುವುದು ಸುಲಭವೆ, ನೀನೇ ಹೇಳು ? ಹುಡುಗರಿಗೂ ನೀನು ಬೇಡ. ಸದ್ಯ ಸ್ಕೂಲನ್ನು ಸಾಕುಮಾಡು. ಹೋಗಲಿ; ಬೊಜ್ಜೆ ಎಬ್ಬಿಸುವುದಕ್ಕೆ ಎಷ್ಟು ಸಂಭಾವನೆ ತೆಗೆದುಕೊಳ್ಳು ವೆಯೊ ಅಷ್ಟನ್ನೇ ತೆಗೆದುಕೊಂಡು ಬಾಯಿಮುಚ್ಚಿಕೊಂಡಿರಲು ಒಪ್ಪುವೆಯಾ ? "—ಮಾರ್ಷಲ್. "ಕವಿ: ' ಇಲ್ಲಿಗೇತಕ್ಕೆ ನುಗ್ಗು ವಿರಿ, ಇಲಿರಾಯರೆ ? ನಿಮಗೆ ಆಹಾರವೇನೂ ಈ ಮನೆಯಲ್ಲಿ ಸಿಕ್ಕಲಾರದು. ಬೇರೆಕಡೆ ಹೋಗಿ ಮೃಷ್ಟಾನ್ನವನ್ನು ತಿನ್ನಿ. ನನ್ನ ಪುಸ್ತಕಗಳನ್ನು ಕಡಿಯಲು ಪ್ರಯತ್ನಿಸಿದರೆ ನಿಮಗೆ ಅಜೀರ್ಣ ಸಿದ್ಧ. ಅವುಗಳಲ್ಲಿ ಕೆಲವನ್ನು ನಾನೇ ಅರಗಿಸಿಕೊಳ್ಳಲಾರೆ."— ಅರಿಸ್ಟೊ.

(೪) ಪ್ರತಿಯೊಬ್ಬ ಮನುಷ್ಯನೂ ತನ್ನ ದುಡಿಮೆಯಿಂದ ತನ್ನ ಅನ್ನವನ್ನು ಸಂಪಾದಿಸಿಕೊಂಡು, ಹೆಂಡತಿ ಮಕ್ಕಳನ್ನು ಸಲಹುತ್ತ, ಸ್ವಾಮಿಯ ಅಧೀನದಲ್ಲಿದ್ದರೂ ಸ್ವಾತಂತ್ರ್ಯವನ್ನು ಕಳೆದುಕೊಳ್ಳದೆ, ಇತರರ ಸೌಖ್ಯಕ್ಕೆ ಹೊಟ್ಟೆಕಿಚ್ಚು ಪಡದೆ ತನ್ನ ಸೌಖ್ಯವನ್ನು ಪೋಷಿಸಿಕೊಂಡು, ಒಟ್ಟಿನಲ್ಲಿ ಆತ್ಮಗೌರ ವಕ್ಕೆ ಕುಂದಿಲ್ಲದಂತೆ ಬಾಳಬೇಕೆಂಬುದೇ ಸಮಾಜದ ನಿರೀಕ್ಷಣೆ. ಎಲ್ಲರೂ ಈ ಬಟ್ಟೆಗೆ ಸರಿದೂಗದಿದ್ದರೂ ಅದನ್ನು ಜೀವನದ ಧ್ಯೇಯವಾಗಿ ಮುಂದಿಟ್ಟುಕೊಂಡಿರುವುದು ಸಮರ್ಪಕ. ಆದ್ದ ರಿಂದ ಯಾರ ಆಶ್ರಯದಲ್ಲಿಯೋ ಹೊಟ್ಟೆಯನ್ನು ಹೊರೆಯುವ ಪರಾವಲಂಬನೆ; ಕೆಲಸಮಾಡದೆ ಬಿದ್ದುಕೊಂಡಿರುವ ಆಲಸ್ಯ ; ಹೇಡಿತನ; ಅಳತೆಮೀರಿದ ದಾಸ್ಯಭಾವ; ಜಗಳಗಂಟಿತನ; ಒಣ ಅಹಂಕಾರ ; ಮೂರ್ಖತನ; ನಾಚಿಕೆಯ ಅಭಾವ; ಲೋಭ :—ಮುಂತಾದ ಸ್ವಭಾವ ನ್ಯೂನತೆಗಳು ಸರ್ವಥಾ ಕೂಡದು. ಅವು ಯಾರಲ್ಲಿ ಹೊಕ್ಕಿವೆಯೊ ಅವರು ಎಣಿಕೆಗೆ

CC-0. Jangamwadi Math Collection, Varanasi. An eGangotri Initiative

ಪುರನಿವಾಸಿಗಳೇ ಹೊರತು ನಿಶ್ಚಯಾರ್ಥದಲ್ಲಿ ಅಲ್ಲ. ಖಂಡನೆಗೂ ವಾಗ್ದಂಡನೆಗೂ ಈ ಲೋಪಗಳು ಗುರಿಯಾಗುವುದು ಸರಿಯೆ. ಯುಕ್ತಪೌರತ್ವಕ್ಕೆ ಅವು ದೊಡ್ಡ ಅಡಚಣೆ; ಕೊಂಚ ಮಟ್ಟಿಗೆ ಮನುಷ್ಯತ್ವಕ್ಕೂ ಅವುಗಳಿಂದ ಹಾನಿ. ಅವು ಸಿಕ್ಕಿದ ರಾಯ್ತು ವಿಡಂಬನಕ್ಕೆ, ಬಕಾಸುರನ ಊಟ ವೃಕೋದರನಿಗೆ ಸಿಕ್ಕಿದ ಹಾಗೆ. ಸಂತತವಾದ ಗೃಹಕಲಹದಿಂದ ರೋಸಿಹೋದ ಗಂಡನೊಬ್ಬ ಹೇಳುತ್ತಾನೆ: "ಈ ಗೋರಿಯ ಕೆಳಗೆ ಮಲಗಿದ್ದಾಳೆ ನನ್ನ ಕಾಂತೆ; ಸಮಾಧಾನದಲ್ಲಿದ್ದಾಳೆ ಆಕೆ—ನನಗೂ ಶಾಂತಿ."—ಬ್ವಾಲೊ. ಇದೂ ಸ್ತ್ರೀಪುರುಷರ ಸಂಬಂಧವನ್ನು ಕುರಿತದ್ದು; ಆದರೆ ಸ್ವಲ್ಪ ಲಲಿತವಾಗಿದೆ: "ಅನುಗ್ರಹದೇವಿಯರು ಈಗ ನಾಲ್ಕು; ಕಲಾಭಿಮಾನ ಶಕ್ತಿಗಳು ಹತ್ತು; ಲಾವಣ್ಯದ ರಾಣಿಯರು ಇಬ್ಬರು. ನನ್ನ ಡೋರಿಸ್ ಅನುಗ್ರಹದೇವಿ ಕಲಾಭಿಮಾನಶಕ್ತಿ ಲಾವಣ್ಯದ ರಾಣಿಯಾಗಿ ಹೊಳೆಯುತ್ತಿರುವಳು. ಇನ್ನೊಂದು ಗುಟ್ಟಿನ ಮಾತು: ಹಾಗೆಯೇ ಕಾಡಿ ಪೀಡಿಸುವ ಚಂಡಿಯರು ಈಗ ನಾಲ್ವರಾಗಿರುತ್ತಾರೆ!"—ಗ್ರೀಕರ ಅಜ್ಞಾತ ಕವಿ. ಅಸೂಯೆಯ ವಿಡಂಬನ: "ಚೋರ ಡಯಫನ್ ತನ್ನ ಶಿಲುಬೆಗಿಂತ ಎತ್ತರವಾದ ಶಿಲುಬೆಯ ಮೇಲೆ ಇನ್ನೊಬ್ಬ ಚೋರನನ್ನು ಮೊಳೆ ಬಡಿದು ಏರಿಸಿದ್ದುದನ್ನು ಕಂಡ: ಹೊಟ್ಟೆಕಿಚ್ಚಿನಿಂದ ಸತ್ತ."—ಲ್ಯೂಸಿಲಿಯಸ್. ಪರಾನ್ನಜೀವಿಯನ್ನು ಮಾರ್ಷಲ್ ಉತ್ಸಾಹದಿಂದ ಅಪಹಾಸ್ಯಗೈಯುತ್ತಾನೆ: "ನೋಡು, ರೂಫಸ್! ಸೀಲಿಯಸ್ಸನ ಹುಬ್ಬು ಗಂಟಿಕ್ಕಿದೆ; ಹೊತ್ತು ಏರಿದ್ದರೂ ಆ ಮಂಟಪದ ಮುಂದೆ ಹಾಗೆ ಹೀಗೆ ಓಡಾಡುತ್ತಿದ್ದಾನೆ; ಅವನ ಮೋರೆಯನ್ನು ಕವಿದಿರುವ ಮೋಡ ಯಾವುದೋ ದೊಡ್ಡ

CC-0. Jangamwadi Math Collection, Varanasi. An eGangotri Initiative

ದುಃಖವನ್ನು ಸೂಚಿಸುವುದಿಲ್ಲವೇ? ಬಾರಿಬಾರಿಗೂ ಸಿಟ್ಟುಸಿರನ್ನು ಕರೆಯುತ್ತಿರುವ; ತನ್ನ ತಲೆಕೂದಲನ್ನು ತಾನೇ ಉನ್ಮತ್ತನಂತೆ ಕೀಳುತ್ತಿರುವ. ಆಶ್ಚರ್ಯ. ಸ್ನೇಹಿತ ಸಹೋದರರಾರೂ ಸತ್ತಿಲ್ಲ; ಅವನ ಮಕ್ಕಳೆಲ್ಲರಿಗೂ ಕುಗ್ಗದ ಆರೋಗ್ಯ; ಹೆಂಡತಿ ಹಸನ್ಮುಖಿ. ಮನೆಮಠ ಆಸ್ತಿಪಾಸ್ತಿ ದನಕರು ಎಲ್ಲವೂ ಸಮರ್ಪಕ; ಅವನ ಸೇವಕರಾರೂ ಹಣದೋಚಿಕೊಂಡು ಪಲಾಯನಮಾಡಿಲ್ಲ. ಹಾಗಾದರೆ ಅವನ ಆತಂಕಕ್ಕೆ ಏನು ಕಾರಣ? ಈ ಹೊತ್ತು ಮನೆಯಲ್ಲಿಯೇ ಉಣ್ಣಬೇಕಾಗಿದೆ."—ಮಾರ್ಷಲ್. ಗುಲಾಮಗಿರಿ ಗುಲಾಮನಿಗೂ ಕೆಟ್ಟದು; ಒಡೆಯನಿಗೂ ಕೆಟ್ಟದು. ಅವನಿಗೆ ಸಂಪೂರ್ಣವಾಗಿ ಗೌರವ ನಾಶ, ಇವನಿಗೆ ಅಹಂಕಾರದ ಆಧಿಕ್ಯ. ಈ ತತ್ವವನ್ನು ರಸವತ್ತಾಗಿ ಪರಿಹಾಸಗೈದಿದ್ದಾನೆ ಕವಿ: "ಶ್ರೀಮಂತರ ನಡುವೆ ಬಡವರ ವಾಸ ಬಹು ಕಷ್ಟ; ಆದರೆ ಕೆಲವರು ಅದಕ್ಕೆ ಹೊಂದಿಕೊಂಡು ಬಿಡುತ್ತಾರೆ. ಸೀಎಸ್ ಜಿಲ್ಲೆಯ ಪ್ರಧಾನಪಾದರಿಯ ಸೇವಕವರ್ಗಕ್ಕೆ ಸೇರಿದ ಒಬ್ಬ ಶಾಸ್ತ್ರಿ ಅತಿವಿಧೇಯತೆಯ ವಿನಯವನ್ನು ರವೆಯಷ್ಟೂ ಮೀರುತ್ತಿರಲಿಲ್ಲ. ಸಾಯುವತನಕ ಹಾಗೆಯೇ ಕಂಡು ನಡೆದುಕೊಂಡ. ಅವನಿಗೆ ವಿಷಮಕಾಹಿಲೆಯೆಂದು ವರ್ತಮಾನ ಬರಲು ಸ್ವಾಮಿಯಾದ ಮಠಾಧಿಪತಿ ಅವನನ್ನು ಕಡೆಯಬಾರಿ ನೋಡಲು ಅವನು ಮಲಗಿದ್ದ ಕೊಟಡಿಗೆ ದಯಮಾಡಿಸಿದ. ಸಾಯಲಿದ್ದ ಆ ಶಾಸ್ತ್ರಿ ಬಹಳ ಸಂಕಟಪಡುತ್ತ ವಿಜ್ಞಾಪಿಸಿದ: 'ಅಯ್ಯೋ, ಅನಿವಾರ್ಯವಾಗಿ ದಣಿಗಳ ಇದಿರಿನಲ್ಲಿಯೇ ಮರಣ ಹೊಂದಬೇಕಾಗಿದೆ; ಮಹಾಸ್ವಾಮಿಯವರು ಮನ್ನಿಸುವಿರೇನು?' ಮಠಾಧಿಪತಿ ಕೃಪೆಯಿಂದ ಅಭಯಕೊಟ್ಟ: 'ಆಗಲಿ, ಆಗಲಿ, ನಾನಿದ್ದರೂ ಪರವಾಯಿಲ್ಲ.' "—ಅನಟೋಲ್ ಫ್ರಾನ್ಸ್.

CC-0. Jangamwadi Math Collection, Varanasi. An eGangotri Initiative

ಹೇಡಿಯ ಒಣಬಡಾಯಿ ವಿಡಂಬನೆಗೆ ಅತಿ ಪ್ರಿಯವಾದ ವಸ್ತು. ಅದಕ್ಕೆ ಬೆನ್ ಜಾನ್ಸನ್ ತನ್ನ ನಾಟಕವೊಂದರಲ್ಲಿ ಸೃಷ್ಟಿಸಿರುವ ಕ್ಯಾಪ್ಟನ್ ಬಾಬಡಿಲ್ ಎಂಬ ಪಾತ್ರ ಉತ್ಕೃಷ್ಟ ಉದಾಹರಣೆ. ಬಾಬಡಿಲ್ ಜಂಭದಲ್ಲಿ ಅದ್ವಿತೀಯ. ತನ್ನ ಸಾಮರ್ಥ್ಯವನ್ನು ತಾನೇ ಸ್ತುತಿಸಿದ್ದೂ ಸ್ತುತಿಸಿದ್ದೇ. ಘೋರ ಸಂಗ್ರಾಮಗಳಲ್ಲಿ ಭಾಗವಹಿಸಿದ್ದೇನು; ಭಾರಿ ಕೋಟೆಗಳನ್ನು ಒಡೆದು ಒಳನುಗ್ಗಿದ್ದೇನು; ಲಂಡನ್ನಿನಲ್ಲಿಯೂ ಕೂಡ ಐದಾರು ಜನ ಪುಂಡರು ಒಟ್ಟಿಗೆ ಮೇಲೆ ಬಿದ್ದಾಗ ಅವರನ್ನು ಹತ್ಯಗೈಯಲು ಇಷ್ಟಪಡದೆ ಒಂದು ಕೇರಿ ಕೇರಿಯೇ ನೋಡುತ್ತಿರುವಾಗ ಅವರೆಲ್ಲರನ್ನೂ ಸೋಲಿಸಿ ಅಟ್ಟಿಸಿಕೊಂಡು ಹೋದದ್ದೇನು:—ಹೀಗೆ ಪೊಳ್ಳು ಹರಟೆ ಹೊಡೆಯುತ್ತಾನೆ. ಆಮೇಲೆ ತನ್ನ ಪರಾಕ್ರಮ ಎಷ್ಟು ದೂರ ಹೋಗಬಲ್ಲುದೆಂಬುದನ್ನು ಬಣ್ಣಿಸುತ್ತಾನೆ: "ಮಿತ್ರರೆ, ನಿಮ್ಮೊಡನೆ ಏಕಾಂತದಲ್ಲಿ ಹೇಳುವ ಮಾತು, ಲಾಲಿಸಿ. ಈ ಹೋಟೆಲಿನಲ್ಲಿ ನಾನು ರಹಸ್ಯವಾಗಿ ವಾಸವಾಗಿದ್ದೇನೆ. ನಾನಿರುವುದು ಅನೇಕರಿಗೆ ಗೊತ್ತಿಲ್ಲ. ಆದರೂ ನಮ್ಮ ರಾಣಿಯೂ ಆಡಳಿತದ ಶ್ರೀಮಂತರೂ ಒಪ್ಪುವುದಾದರೆ, ಇಂಗ್ಲೆಂಡಿನ ಪ್ರಜೆಗಳಿಗೆ ಗಂಡಾಂತರ ಲೇಶವೂ ಇಲ್ಲದಂತೆಯೂ ಯುದ್ಧದ ಖರ್ಚಿನಲ್ಲಿ ಅರ್ಧ ಮುಕ್ಕಾಲುಪಾಲು ಉಳಿತಾಯವಾಗುವಂತೆಯೂ ಯಾವ ಶತ್ರುಗಳನ್ನಾದರೂ ನಾನು ವಿಚಾರಿಸಿಕೊಳ್ಳಬಲ್ಲೆ. ಅದನ್ನು ಹೇಗೆ ಮಾಡುವೆನೆನ್ನುವಿರಾ? ಚಿತ್ತೈಸಿ. ಶಕ್ತರಾದ ಹತ್ತೊಂಬತ್ತು ಯೋಧರನ್ನು ಗುಂಪುಕೂಡಿಸುವೆ. ವ್ಯಾಧಿರಹಿತರಾಗಿ ಸುಟಿಯಾಗಿ ಅವರು ಇದ್ದರೆ ಸಾಕು. ಇಡೀ ರಾಜ್ಯದಲ್ಲಿ ಹುಡುಕಿ ಅವರನ್ನು ಆರಿಸಿಕೊಳ್ಳುವೆ. ಚುನಾವಣೆಯನ್ನು ಹೇಗೆ ಮಾಡುವೆನೆನ್ನುವಿರಾ? ನನ್ನಲ್ಲಿ

CC-0. Jangamwadi Math Collection, Varanasi. An eGangotri Initiative

ಒಂದು ಅಸಾಧಾರಣವಾದ ಹುಟ್ಟುಗುಣವಿದೆ: ಅದರ ಬಲದಿಂದ ಯೋಗ್ಯರನ್ನು ಕಂಡುಹಿಡಿಯುವುದು ನನಗೆ ಬಹು ಸುಲಭ. ಹತ್ತೊಂಬತ್ತು ಜನರಿಗೂ ತಕ್ಕ ಶಿಕ್ಷಣವನ್ನು ನಾನೇ ಕೊಟ್ಟು, ಅವರೆಲ್ಲರೂ ಹೆಚ್ಚು ಕಡಮೆ ನನ್ನಷ್ಟೇ ಕದನ ಕುಶಲಿಗಳಾಗುವಂತೆ ಸಜ್ಜುಗೊಳಿಸುವೆನು. ಆಯಿತು. ನಮ್ಮ ಹಗೆಗಳು ನಲವತ್ತು ಸಾವಿರವೆಂದು ಇಟ್ಟುಕೊಳ್ಳೋಣ. ಮಾರ್ಚಿ ಹತ್ತನೆಯ ತಾರೀಖು ರಣವನ್ನು ಪ್ರಾರಂಭಿಸುವೆವು ಅನ್ನೋಣ. ಪ್ರತಿಕಕ್ಷಿಗಳಲ್ಲಿ ಇಪ್ಪತ್ತು ಜನರನ್ನು ದ್ವಂದ್ವ ಯುದ್ಧಕ್ಕೆ ಕರೆಯುವೆವು. ಸ್ವಾಭಿಮಾನ ಅವರಿಗೆ ಇಲ್ಲವೆ? ನಮ್ಮ ಕಾಳಗದ ಆಹ್ವಾನವನ್ನು ಅವರು ಮನ್ನಿಸಲೇಬೇಕು. ಸರಿ; ಆ ಇಪ್ಪತ್ತು ಜನರನ್ನು ಕೊಲ್ಲುವೆವು: ಇನ್ನು ಇಪ್ಪತ್ತು ಜನರನ್ನು ಕರೆಯುವೆವು. ಅವರನ್ನೂ ಕೊಲ್ಲುವೆವು: ಮತ್ತೆ ಇಪ್ಪತ್ತು, ಅವರಿಗೂ ಸಾವು; ತಿರುಗಿ ಇಪ್ಪತ್ತು, ಅವರೂ ಧ್ವಂಸ; ಹೀಗೆ ನಮ್ಮಲ್ಲಿ ಪ್ರತಿ ಒಬ್ಬನೂ ದಿನಕ್ಕೆ ಹತ್ತು ಎದುರಾಳುಗಳನ್ನು ಗೆಲ್ಲುವೆವು. ಅಂದರೆ ದಿನಕ್ಕೆ ಇಪ್ಪತ್ತು ಹತ್ತು ಶತ್ರುಗಳ ನಾಶ; ಇಪ್ಪತ್ತು ಹತ್ತಲ ಇನ್ನೂರು; ದಿನಕ್ಕೆ ಇನ್ನೂರು; ಐದುದಿವಸಕ್ಕೆ ಸಾವಿರ; ನಲವತ್ತು ಸಾವಿರ; ಸರಿ, ನಲವತ್ತು ಸಾರಿ ಐದು; ಐದು ಸಾರಿ ನಲವತ್ತು: ಇನ್ನೂರು ದಿವಸಗಳಲ್ಲಿ ಲೆಕ್ಕಾಚಾರದಂತೆ ಅರಿ ಸೈನ್ಯ ಸಂಪೂರ್ಣವಾಗಿ ಭೂಗತ. ಚಾಚೂ ತಪ್ಪದೆ ಈ ಸಾಹಸವನ್ನು ನಿರ್ವಹಿಸುತ್ತೇನೆ ಎಂಬುದಾಗಿ ಈ ನನ್ನ ಬಡ ಕುಲೀನ ಶರೀರದಮೇಲೆ ಆಣೆಯಿಟ್ಟು ಶಪಥಮಾಡುತ್ತೇನೆ. ಆದರೆ ನಮ್ಮ ಮೇಲೆ ಯಾರೂ ಯಾವ ಪಿತೂರಿಯನ್ನೂ ನಡೆಸದೆ ಇರಬೇಕು. ಆಗ ನ್ಯಾಯರೀತಿಯಲ್ಲಿ ಸೌಜನ್ಯವನ್ನು

CC-0. Jangamwadi Math Collection, Varanasi. An eGangotri Initiative

ಬಿಡದೆ ನಮ್ಮ ಕತ್ತಿಗಳಿಂದ ಈ ಕೆಲಸವನ್ನು ಸಾಧಿಸುವೆವು." ಬಾಬಡಿಲ್ ಹೀಗೆ ಪ್ರತಿಜ್ಞೆ ಪಡುತ್ತಿರುವಾಗ ಡೌನ್‌ರೈಟ್ ಎಂಬೊಬ್ಬ ಮುದುಕ ಬಂದು ಅವನನ್ನು ಚೆನ್ನಾಗಿ ದಂಡಿಸುತ್ತಾನೆ. ಬಾಬಡಿಲ್ ನಿಜವಾಗಿಯೂ ಅಂಜುಬುರುಕನಾದುದರಿಂದ ಏನೂ ಮಾಡಲಾರದೆ ತೆಪ್ಪಗೆ ಒದೆಗಳನ್ನು ತಿನ್ನುವನು. ಅವನ ಸುಳ್ಳು, ಸೊಕ್ಕಿಗೆ ಅದೇ ತಕ್ಕ ಶಾಸ್ತಿ.

(೫) ಇರಬೇಕಾದ ಸದ್ಗುಣ ಇಲ್ಲದೆ ಹೋಗುವ ಹೀನಬಡತನದಿಂದ ಮನುಷ್ಯ ವಿನೋದಕ್ಕೆ ಭಾಗಿಯಾಗುವುದನ್ನು ಕಂಡದ್ದಾಯ್ತು. ಇರಬಾರದ ದುರ್ಗುಣಗಳು ಇರುವ ಹಾಳುಹೆಚ್ಚಿಗೆಯಿಂದ ಮನುಷ್ಯ ವಿಡಂಬನಕ್ಕೆ ಗುರಿಯಾಗುವುದನ್ನು ಈಗ ಭಾವಿಸಬೇಕು. ಅವಗುಣಗಳ ಬೇರಾವುದೊ ಬೆಳೆವಣಿಗೆಯೆಂತೊ ಗುರುತು ಹಿಡಿಯುವುದು ಕಷ್ಟ. ಒಂದೇ ಮಾತಿನಲ್ಲಿ ಸ್ಥೂಲವಾಗಿ ಆಡಬಹುದಾದರೆ, ಸಮಸ್ತ ದುರ್ಮಾರ್ಗಕ್ಕೂ ಸ್ವಾರ್ಥವೇ ತವರು. ಹೇಗಾದರೂ ಆಗಲಿ ಸ್ವಂತ ಪ್ರಯೋಜನವನ್ನು ಪಡೆಯಲೇ ಬೇಕು ಎಂಬ ಅಭಿಪ್ರಾಯ ಅಂತಃಕರಣದಲ್ಲಿ ವಿಷಬೀಜ; ಅದಕ್ಕೆ ಸುಳ್ಳೇ ಹೂ, ಮೋಸವೇ ಹಣ್ಣು. ಹೊರಗೊಂದು, ಒಳಗೊಂದು; ಹೃದಯದಲ್ಲಿ ಹಾಲಾಹಲ, ಬಾಯಿಯಲ್ಲಿ ಸುರಿಯುವ ಜೇನು; ಅನುಕೂಲಸ್ಥಿತಿಯಲ್ಲಿರುವಾಗ ಸ್ನೇಹಿತರ ಮೇಲೆ ಸ್ನೇಹಿತರು, ದುರ್ದಿನ ಬಂದಾಗ ಕೂಗಿದರೆ 'ಆ' ಎನ್ನಲು ಒಬ್ಬರೂ ಇಲ್ಲ; ಈ ತರದ ವ್ಯಾಪಾರಗಳಿಂದ ಜಗತ್ತು ಬಹಳ ನೊಂದಿದೆ, ನೋಯುತ್ತಿದೆ. ನಾರಾಯಣನ ಅವತಾರಗಳು ಒಂಬತ್ತು ಆಗಿ ಹೋದರೂ ನರರ ವಂಚನೆ ನಿಂತಿಲ್ಲ. ದಾಸರು ಜಂಗಮರು ಕವಿಗಳು ದಾರ್ಶನಿಕರು ಋಷಿಗಳು ಉಪನಿಷತ್ತುಗಳು ಎಷ್ಟೋ

CC-0. Jangamwadi Math Collection, Varanasi. An eGangotri Initiative

ಹುಟ್ಟಿಬಂದವರೂ ಲೋಕದ ದುಷ್ಪ್ರವರ್ತನೆ ಹರಿದಿಲ್ಲ, ಹದ್ದಿಗೆ ಬಂದಿಲ್ಲ. ವಿಡಂಬನಕಾರರಿಗೆ ಅದು ಸಹಜವಾದ ಸುಪುಷ್ಟ ಸಾಮಗ್ರಿ. ಅವರು ನಾನಾ ಶೈಲಿಯಲ್ಲಿ ಅವನ್ನು ಅಣಕಿಸದೇ ಹೋಗಿದ್ದರೆ ಅವರ ಆವಾಂತರವನ್ನು ಯಾರು ತಡೆಯುತ್ತಿದ್ದರು? ಕೆಳಗೆ ಕೊಟ್ಟಿರುವ ವಿಡಂಬನಗಳಿಗೆ ಟಿಪ್ಪಣಿ ಅನಾವಶ್ಯಕ.

"ಸೆಕ್ಸ್‌ಟಸ್, ನೀನು ಸರ್ವಥಾ ಸಾಲಗಾರನಲ್ಲ; ನಿಶ್ಚಯವಾಗಿ ಒಪ್ಪಿದೆವು, ಖಂಡಿತ ಅಲ್ಲ. ಪಡೆದ ಸಾಲವನ್ನು ಯಾವನು ಬಿಡದೆ ಹಿಂದಕ್ಕೆ ಕೊಡುವನೋ ಅವನು ಸಾಲಗಾರ, ಸೆಕ್ಸ್‌ಟಸ್."—ಮಾರ್ಷಲ್. "ನಾನು ರೋಮ್ ಪಟ್ಟಣಕ್ಕೆ ಹೇಗೆ ಬರಲಿ? ಹುಸಿನುಡಿ ನನಗೆ ಬಾರದು; ಅನ್ಯಾಯಕ್ಕೋಸ್ಕರ ಆಣೆಯಿಡಲಾರೆ; ಹಣವಂತನ ಕಾಕುಪದ್ಯಗಳನ್ನು ಹೊಗಳುವುದು ನನ್ನಿಂದಾಗದು; ಅವನು ಹೇಳಿದ್ದಲ್ಲ ನನಗೆ ವೇದವಲ್ಲ; ತಂದೆಯ ಅಪಾರ ಆಸ್ತಿ ಯಾವಾಗ ಕರವಶವಾಗುವುದೊ ಎಂದು ಹಾತೊರೆಯುತ್ತಿರುವ ತರುಣನಿಗೆ ಪ್ರಿಯಭವಿಷ್ಯ ನುಡಿಯುವ ಜಾಣತನ ನನ್ನಲ್ಲಿಲ್ಲ; ಪೋಕರಿ ಘಟಿಂಗರಿಗೆ ನನ್ನಿಂದ ಪರಿಚರ್ಯೆ ಸಲ್ಲದು. ಈ ನಗರ ಸೌಜನ್ಯಗಳಲ್ಲಿ ನಾನು ತುಂಬ ದರಿದ್ರ. ಬಡತನದಲ್ಲಿಯೇ ನನ್ನ ಬಾಳ ಹಾದಿಯನ್ನು ನಡೆಯುವೆ!"—ಜುವೆನಲ್. "ಮರೋನಿಲ ಎಂಬವಳನ್ನು ಮದುವೆಯಾಗಲು ಗೆಮಲಸ್ ತವಕಪಡುತ್ತಿರುವ. ಅವನ ಶ್ರದ್ಧೆ ಹೇಳತೀರದು: ಅನೇಕ ದೂತರ ಓಡಾಟ; ಪ್ರಾರ್ಥನೆಗೆ ಕೊನೆಯಿಲ್ಲ; ಅವಳಿಗೆ ಉಡುಗೊರೆಯಮೇಲೆ ಉಡುಗೊರೆ. ಅವಳೇನು ದೇವಲೋಕದ ಚೆಲುವೆಯೆ? ಛೀ, ಅವಳಿಗಿಂತ ಕುರೂಪಿ ಇನ್ನಿಲ್ಲ. ಹಾಗಾದರೆ

CC-0. Jangamwadi Math Collection, Varanasi. An eGangotri Initiative

ಅದಾವುದು ಗೆಮುಲಸ್ಸನ್ನು ಆಕರ್ಷಿಸಿರುವ ಅವಳ ರಮ್ಯಗುಣ? ಅವಳ ಉಬ್ಬಸ."—ಮಾರ್ಷಲ್. "ಈ ಗ್ರೀಕರವ ಒಂದು ನಿಕೃಷ್ಟ ಜಂತು,—ಮುಖಸ್ತುತಿ ಮಾಡುವ, ಅಂಗಲಾಚುವ, ನಂಬಿಕೆಯಿಲ್ಲದ, ಉಪಾಯಗಾರ ಹುಳು. ಮಳೆಹೊಯ್ದಂತೆ ಮಾತಾಡಬಲ್ಲ; ಲಜ್ಜೆ ಎಳ್ಳಷ್ಟಿಲ್ಲ ಅವನಿಗೆ. ಪ್ರೋಟಿಯಸ್ನಂತೆ ತನ್ನ ಸ್ವರೂಪವನ್ನು ಬದಲಾಯಿಸಲಾಪ. ಅವನನ್ನು ಇಂಥವ ನೆಂದು ಕರೆಯುವುದು ಅಶಕ್ಯ. ವೈಯಾಕರಣ, ಚಿತ್ರಕಾರ, ಜ್ಯೋತಿಷ್ಕ, ಲಾಕ್ಷಣಿಕ, ಸರ್ಕಸು ಫೈಲ್ವಾನ, ಮಾಂತ್ರಿಕ, ಸಿಟೀಲುಗಾರ, ವೈದ್ಯ,—ಎಲ್ಲ ಕಸಬೂ ತನ್ನದೇ ಎಂದು ಈ ಹಸಿದ ಗ್ರೀಕನ ಭಾವನೆ. ಆಕಾಶಕ್ಕೆ ಹತ್ತು ಎಂಬುದಾಗಿ ಅವನಿಗೆ ಅಪ್ಪಣೆಮಾಡಿ, ಆಕಾಶಕ್ಕೇ ಹತ್ತಿಬಿಡುವ!"—ಜುವೆನಲ್. "ಜೇಮ್ಸ್ ಬ್ರಿಡ್ಜಸ್ ಮತ್ತು ಡೀನ್‌ಸ್ವಿಫ್ಟ್ ಇಬ್ಬರೂ ಒಡನಾಡಿಗಳು. ಜೇಮ್ಸ್ ಡ್ಯೂಕ್‌ಪದವಿಗೇರಿದ. ಸರಿ; ಅವರಿಬ್ಬರ ಗೆಳೆತನ ಕೊನೆಗೊಂಡಿತು. ಜೇಮ್ಸ್‌ನೊಡನೆ ಸಲಿಗೆಯಿದ್ದ ಪಾತ್ರಕ್ಕೆ ಡ್ಯೂಕನ ಪರಿಚಯವಿದೆಯೆಂದು ಅಬದ್ಧ ಹೇಳಿದ ಡೀನನು ತೀವ್ರನಿಂದೆಗೆ ಅರ್ಹ!"—ಸ್ವಿಫ್ಟ್. "ಕೊಂಚ ಕೈಸಾಲವನ್ನು ಕೇಳಿದರೆ ಹತ್ತಿರ ಹಣ ವಿಲ್ಲವೆಂದು ಉತ್ತರ ಕೊಡುವೆ; ನನ್ನ ಜಮಿನಾನನ್ನು ಒತ್ತೆಯಿಡು ತ್ತೇನೆಂದರೆ ಸಾಲವನ್ನೀಯಲು ಆತುರ ಪಡುವೆ. ಟಿಲೀಸಿ ಯಸ್, ನಾನೂ ನೀನೂ ಬಾಲ್ಯಸ್ನೇಹಿತರು. ಒಳ್ಳೆಯದು; ನೀನು ಹಾಸಿಗೆ ಹಿಡಿದು ಮಲಗಿದೆ; ನನ್ನ ಸವುತೆ ಕುಂಬಳ ನಿನ್ನಲ್ಲಿಗೆ ಬಂದು ಉಪಚರಿಸಲಿ. ನಿನ್ನ ಮಗಳು ಮೃತಿಹೊಂದಿ ದಳು: ನನ್ನ ರಾಗಿ ಗೋಧಿ ನಿನ್ನನ್ನು ಸಂತೈಸಲಿ. ನಿನ್ನ ಮೇಲೆ ಕ್ಯಾರಸ್ ದೊಡ್ಡ ದೂರು ಹೊರಿಸಿದ್ದಾನೆ; ನನ್ನ ಹಲಸು

CC-0. Jangamwadi Math Collection, Varanasi. An eGangotri Initiative

ತೆಂಗು ಕೋರ್ಟಿಗೆ ನಡೆದು ನಿನ್ನ ಪರ ನಿಂತು ವಾದಿಸಲಿ. ದೇಶವನ್ನು ಬಿಟ್ಟು ಹೊರಡಬೇಕೆಂದು ನಿನಗೆ ಶಿಕ್ಷೆಯಾಗಿದೆ; ನನ್ನ ಹೊಲಗದ್ದೆ ನಿನ್ನೊಡನೆ ಹೊರಡುತ್ತವೆ!"—-ಮಾರ್ಷಲ್. "ಖೊರಸಾನಿನ ಒಬ್ಬ ದೊರೆಗೆ ಒಂದು ಸ್ವಪ್ನವಾಯಿತು. ಅದರಲ್ಲಿ ನೂರು ವರ್ಷದ ಹಿಂದೆ ಸತ್ತುಹೋಗಿದ್ದ ಒಬ್ಬ ಸುಲ್ತಾನ ಕಾಣಿಸಿಕೊಂಡ. ಅವನ ಶರೀರವೆಲ್ಲವೂ ನಶಿಸಿ ಮಣ್ಣಾಗಿತ್ತು; ಆದರೆ ಅವನ ಕಣ್ಣುಗಳು ಮಾತ್ರ ಬಹು ಪ್ರಕಾಶದಿಂದ ಅತ್ತಿತ್ತ ದುರುಗುಟ್ಟಿನೋಡುತ್ತಿದ್ದುವು. ಆ ಒಗಟಿನ ಅರ್ಥ ಪಂಡಿತರಿಗೂ ಕೂಡ ಹೊಳೆಯಲಿಲ್ಲ. ಒಬ್ಬ ಫಕೀರ ಅದನ್ನು ಹೀಗೆ ಬಿಡಿಸಿದ: ತನ್ನ ರಾಜ್ಯ ಮತ್ತೊಬ್ಬರಿಗೆ ಹೇಗೆ ವಶವಾಯಿತೆಂದು ಆ ಸುಲ್ತಾನ ಇನ್ನೂ ಬಿರುಗಣ್ಣಿನಿಂದ ನೋಡುತ್ತಿದ್ದಾನೆ!"—ಷೇಕ್‌ಸಾದಿ. ಕುಮಾರವ್ಯಾಸ ಭಾರತದಲ್ಲಿ ಶ್ರೀಕೃಷ್ಣ ಹೇಳಿಲ್ಲವೇ: "ಕೌರವೇಶ್ವರ ಕೇಳು ಧರಣೀ ನಾರಿ ಆನಿಬರಿಗೊಕ್ಕತನವಿದ್ದು ಆರ ಮೆಚ್ಚಿದಳು ಆರ ಸಂಗಡ ಉರಿಯ ಹಾಯ್ದಳು?"

(೬) ಇನ್ನು ಉಳಿದಿರುವುದು ಮನುಷ್ಯ ಪಶುಪ್ರಾಯನಾದಾಗ ಎಸಗುವ ಪಾಪಕೃತ್ಯಗಳು. ಕಳ್ಳತನ ದರೋಡೆ ಅತ್ಯಾಚಾರ ದ್ರೋಹ ಹಿಂಸೆ ಕೊಲೆ ಮುಂತಾದ ಕಿಲ್ಬಿಷಗಳಿಂದ ಇಹದ ಜೀವನ ಕಲುಷಿತವಾಗಿದೆ. ಕೆಲವು ವಿಮರ್ಶಕರ ಅಭಿಪ್ರಾಯದಲ್ಲಿ ಅವು ವಿಡಂಬನಕ್ಕೆ ಮೀರಿದ ಗಡಸು ವಿಷಯಗಳು. ಅವರ ವಾದ ಇದು: ಅವೆಲ್ಲವೂ ದುಷ್ಕರ್ಮಗಳು; ಕೆಲವಂತೂ ದುರಂತವಾದುವು; ಆದ್ದರಿಂದ ಅವು ಚಿತ್ತಕ್ಷೋಭೆಯನ್ನೂ ಹೆದರಿಕೆಯನ್ನೂ ಯಾತನೆಯನ್ನೂ ಹುಟ್ಟಿಸುತ್ತವೆ. ವಿಡಂಬನಕ್ಕೆ ಅನುಗುಣವಾದ ಉಲ್ಲಾಸ ಅವುಗಳಿಂದ ಸಾಧ್ಯ

CC-0. Jangamwadi Math Collection, Varanasi. An eGangotri Initiative

ವಿಲ್ಲ. ವಿಡಂಬನ ಅಲ್ಪದೋಷಗಳನ್ನು ಅವಹೇಳನಗೈಯು ವುದೇ ಸಾಧು; ಭೀಷಣ ಪಾತಕಗಳ ಗೋಜು ಅದಕ್ಕೆ ಏಕೆ? ಪೋಲೀಸು ಕೋರ್ಟು ಜೈಲುಗಳಿಗೆ ಅವು ಸರಿಯಾದ ಆಹಾರ.

ಈ ವಾದವನ್ನು ಒಪ್ಪಲಾಗದು. ಸಮಾಜದಲ್ಲಿ ದುರ್ಜನರು ತಲೆಯೆತ್ತಿರುವವರೆಗೂ ಅವರನ್ನು ವಿಡಂಬನ ಭಲ್ಲೆಯದಿಂದ ಚುಚ್ಚುವುದು ಲೋಕಹಿತೈಷಿಗಳ ಕರ್ತವ್ಯ. ಕಲಿಪುರುಷನನ್ನು ತಡೆಗಟ್ಟುವುದಕ್ಕೆ ಮನುಷ್ಯ ಎಷ್ಟು ಮಂತ್ರಗಳನ್ನು ಉಚ್ಚರಿಸಿ ದರೂ ಸಾಲದು; ವಿಡಂಬನವನ್ನು ಉಪಯೋಗಿಸದೆ ಇದ್ದರೆ ಆದೀತೆ? ಅಪರಾಧಗಳನ್ನು ನಿರ್ದಾಕ್ಷಿಣ್ಯವಾಗಿ ಬಡಿದುದರಿಂದ ಜುವೆನಲ್ ವಾಲ್ಟೇರ್ ಸ್ವಿಫ್ಟ್ ಇಬ್ಸನ್ ಟಾಲ್‌ಸ್ಟಾಯ್ ಮುಂತಾದ ಕೆಲವರಿಗೆ ಸಾವಿಲ್ಲದ ಪ್ರಖ್ಯಾತಿ. ಅವೇನೋ ಅತ್ಯಂತ ಕಠಿಣವಾದ ಪ್ರಸಂಗ; ಬರೆಯುವವನಿಗೂ ಓದುವವ ನಿಗೂ ಹೆಚ್ಚು ತ್ರಾಸವನ್ನು ಉಂಟುಮಾಡತಕ್ಕವು. ಆದ್ದರಿಂದ ಸಾಧಾರಣ ದರ್ಜೆಯ ಕವಿ ಅವುಗಳ ತಂಟೆಗೆ ಹೋಗದಿರು ವುದು ಒಳ್ಳೆಯದು.

CC-0. Jangamwadi Math Collection, Varanasi. An eGangotri Initiative

೩. ವಿಡಂಬನದ ವಿಧಾನ

ಕುಗ್ಗದ ಕೊನೆಯಿಲ್ಲದ ಯುದ್ಧವೇ ವಿಡಂಬನದ ಹಣೆಬರಹ ವೆಂಬುದು ಇಷ್ಟುಹೊತ್ತಿಗೆ ನಮಗೆ ಮನದಟ್ಟಾಗಿದೆ. ಕುಟಿಲ ಕ್ಷತ್ರಿಯರನ್ನು ಅಡಗಿಸಲು ಪರಶುರಾಮ ಇಪ್ಪತ್ತೊಂದುಬಾರಿ ಭೂಮಿಯ ಸುತ್ತ ಸಂಚರಿಸಿದ: ಕೌಟಿಲ್ಯವನ್ನು ಹತೋಟಿಯಲ್ಲಿ ಡಲು ವಿಡಂಬನ ಯಾವಾಗಲೂ ಗಸ್ತು ತಿರುಗುತ್ತಿರಬೇಕು. ದೋಷಗಳಂವರೋ ವಿಧವಿಧದ ಮಾಯಾವೇಷವನ್ನೂ ನಾನಾ ಮಟ್ಟದ ಶಕ್ತಿಯನ್ನೂ ಬಗೆಬಗೆಯ ದುಷ್ಟತನವನ್ನೂ ಪ್ರಕಟಿಸ ಬಲ್ಲವು. ಆದ್ದರಿಂದ ವೇಷಕ್ಕೆ ತಕ್ಕ ಭಾಷೆ, ದೋಷಕ್ಕೆ ತಕ್ಕ ಹಾಸ್ಯ. ಒಂದನ್ನು ಭಂಗಿಸುವ ರೀತಿಯಲ್ಲಿ ಇನ್ನೊಂದನ್ನು ಭಂಗಿಸಲು ಅಶಕ್ಯ. ಖಡ್ಗದಿಂದ ಕೆಲವನ್ನು ತುಂಡರಿಸಬಹುದು. ಮತ್ತೆ ಕೆಲವು ರೇಷ್ಮೆಯಂತೆ ನವಿರಾಗಿ ಕತ್ತಿಯ ಏಟನ್ನು ತಪ್ಪಿಸಿ ಕೊಳ್ಳುವುವು. ನಾಲ್ಕಾರು ಎಷ್ಟು ಮೃದುವೆಂದರೆ ಅವನ್ನು ಚಿವುಟಿಹಾಕುವುದಕ್ಕೆ ಉಗುರೇ ಸಾಕು. ಮತ್ತೆ ಕೆಲವು ಮಂದವಾಗಿ ದಪ್ಪವಾಗಿ ಕರಿಯ ಕಲ್ಲಿನ ಹಾಗೆ ಭಾರವಾಗು ತ್ತವೆ: ಅವನ್ನು ಒಡೆಯಲು ಉಕ್ಕಿನ ಜಾಣ ಕಬ್ಬಿಣದ ಸುತ್ತಿಗೆ ಅಗತ್ಯ. ಒಂದೊಂದು ಸಾರಿ ಕಸ್ಮಲ ಬಸಿದು, ಹರಿದು, ಒಣಗಿ, ಹೆಪ್ಪುಗಟ್ಟಿ, ವ್ಯಕ್ತಿ ಸಂಸ್ಥೆಗಳನ್ನು ಮುಚ್ಚಿಬಿಡುತ್ತದೆ: ಆಗ ಅದನ್ನು ಕರಗಿಸಿ ಕ್ಷೀಣಿಸಲು ಗಟ್ಟಿ ದ್ರಾವಕ ಬೇಕು. ಹೀಗೆ ಅನೇಕ ಅಸ್ತ್ರಶಸ್ತ್ರಗಳಿಂದ ವಿಡಂಬನದ ಆಯುಧಶಾಲೆ ಕಿಕ್ಕಿರಿದು ತುಂಬಿದೆ. ವಂಚಿಸುವುದರಲ್ಲಿ ಸಟೆ ಹೇಳುವುದರಲ್ಲಿ ವೇದನೆ ಯನ್ನುಂಟುಮಾಡುವುದರಲ್ಲಿ ಮನುಷ್ಯನ ದುರ್ಬುದ್ಧಿ ಹೊಸ ಹೊಸ ಮಾರ್ಗವನ್ನು ಕಂಡುಹಿಡಿಯುತ್ತಿದ್ದರೆ, ಅದೇ ರೀತಿ

CC-0. Jangamwadi Math Collection, Varanasi. An eGangotri Initiative

ಯಲ್ಲಿ ಮನುಷ್ಯನ ರಕ್ಷಣೋಪಾಯವೂ ವೃದ್ಧಿಹೊಂದುತ್ತ ಹೋಗುತ್ತಿದೆ. ನವೀನ ಜಾಡ್ಯಕ್ಕೆ ನವೀನ ಮದ್ದು; ನೂತನ ಗಲೀಜಿಗೆ ನೂತನ ಪೊರಕೆ. ಇಲ್ಲದಿದ್ದರೆ ಸತ್ಪ್ರಜೆಗಳಿಗೂ ಸಕಲ ಸಮಾಜಕ್ಕೂ ಗತಿಯೆಂತು?

ವಿಡಂಬನದ ಕೆಲವು ಮುಖ್ಯ ವಿಧಾನಗಳನ್ನು ಈ ಅಧ್ಯಾಯ ದಲ್ಲಿ ವರ್ಣಿಸಿದೆ. ಅವನ್ನು ನಕ್ಷೆಯಂತೆ ತೋರಿಸುವ ಒಂದು ವಿಡಂಬನ ಚಕ್ರವನ್ನು ಈ ರೀತಿ ರಚಿಸಿದ್ದೇನೆ:



ವಿಡಂಬನದ ಎಲ್ಲ ಕ್ರಮಗಳೂ ಇಲ್ಲಿ ಶಾಸ್ತ್ರೀಯವಾಗಿ ವಿಂಗಡ ವಾಗಿದೆಯೆಂದು ನಾನು ಹೇಳಲಾರೆ. ಸಂಕ್ಷೇಪವಲ್ಲಿ ವಿಷಯದ

CC-0. Jangamwadi Math Collection, Varanasi. An eGangotri Initiative

ಮುಖ್ಯಾಂಗಗಳನ್ನು ಅರಿತುಕೊಳ್ಳುವುದು ನಮ್ಮ ಪ್ರಕೃತ ಉದ್ದೇಶ. ಅದಕ್ಕೆ ಈ ವಿಭಜನೆ ಸಹಕಾರಿಯಾಗುವುದೆಂದು ನನ್ನ ನಿರೀಕ್ಷೆ.

ಮಂಡಲದ ತಲೆಭಾಗದಲ್ಲಿ ಕಂಡುಬರುವ ಪರಿಹಾಸವೆನ್ನುವುದು ವಿಡಂಬನ ಪದ್ಧತಿಗಳಲ್ಲಿ ಅತ್ಯುತ್ತಮ. ನಯ ನಾಜೂಕನ್ನು ಒಳಕೊಂಡ ಶುದ್ಧವಾದ ಪದ್ಧತಿ ಅದು. ಸರಸವಾದ ಮನೋಭಾವ; ಹಿತವೂ ಹೊಸದೂ ಆದ ಅಭಿಪ್ರಾಯ ಪರಂಪರೆ; ಸವಿಯಾದ ಇಂಪಾದ ಭಾಷೆ; ಒಟ್ಟಿನಲ್ಲಿ ಮಿತವೂ ಮೃದುವೂ ಮನೋಹರವೂ ಆದ ಲೇಖನ. ವಿಡಂಬನಕ್ಕೆ ಪಾತ್ರನಾದ ಪುರುಷನೇ ಅದರ ರುಚಿಯನ್ನು ಮೆಚ್ಚಿ ತಲೆ ತೂಗಿ ಆನಂದಪಡುವಂಥಾದ್ದು. ಈ ಲಲಿತಹಾಸವೇ ಹಾರೆಸ್, ಚಾಸರ್, ಸರ್ವ್ಯಾಂಟೀಸ್, ಆಡಿಸನ್, ಗೋಲ್ಡ್‌ಸ್ಮಿತ್, ಬಟ್ಲರ್, ಆನಟೋಲ್ ಫ್ರಾನ್ಸ್ ಮುಂತಾದ ಕವಿಗಳು ಉಪಯೋಗಿಸಿ ಪ್ರಶಸ್ತಗೊಳಿಸಿರುವ ರೀತಿ; ಅದೇ ವಿಡಂಬನದ ಕಿರೀಟ. ವಸ್ತುವನ್ನು ಜರೆದರೂ ಅದರ ಮೇಲಣ ಗೌರವ ಮಾಯವಾಗದೇ ಇರುವುದು ಪರಿಹಾಸದ ಹೆಗ್ಗುರುತು. ಈ ಪರಿಣಾಮಕ್ಕೆ ಹಾಸ್ಯಗಾರನ ಎರಡು ಅಭಿಮತಗಳು ಕಾರಣ: ವಸ್ತುವಿನ ನ್ಯೂನತೆ ಅಣಕಕ್ಕೆ ಸಿಕ್ಕಿದರೂ ವಸ್ತು ಪೂರ್ಣವಾಗಿ ದೂಷ್ಯವಲ್ಲ; ಅದೇ ನ್ಯೂನತೆ ಸಹಸ್ರ ವಸ್ತುಗಳಲ್ಲಿ ತೋರಿಬರುವುದರಿಂದ ಅದು ಸರ್ವಸಾಮಾನ್ಯ. ಅಹಂಭಾವ ಹಾಸ್ಯಕ್ಕೆ ತಕ್ಕ ಅವಗುಣ; ಆದರೆ ಅಹಂಭಾವವಿಲ್ಲದ ನರರು ಬಹು ವಿರಳವಲ್ಲವೆ? ಹೀಗೆ ನ್ಯೂನತೆಯನ್ನು ಸಾಧಾರಣೀಕರಿಸಿ ಅದನ್ನು ಕೃಪೆಯಿಂದ ಕೂಡಿದ ಕೋಮಲಹಾಸ್ಯಕ್ಕೆ ತರುವುದರಿಂದ ಪರಿಹಾಸ ಸುಶಿಕ್ಷಿತವಾದ ವಿಡಂಬನ.

CC-0. Jangamwadi Math Collection, Varanasi. An eGangotri Initiative

ನಕ್ಷೆಯ ಹೆಜ್ಜೆಯ ಬಳಿ ಗುರುತಿಸಿರುವುದು ಬಯ್ಗುಳ. ಇದು ಯಾವ ತಿರುಗುಮುರುಗನ್ನೂ ಅರಿಯದ ಸರಳವಾದ ಖಡಾಖಂಡಿತದ ಧಿಕ್ಕಾರ. ತಡೆಬಡೆಯಿಲ್ಲದೆ ದೋಷಗಳನ್ನು ಆಕ್ಷೇಪಣೆಗೆ ದೂಡಿಬಿಡುವುದೇ ಇದರ ಜಾಯಮಾನ. ಎಲ್ಲ ದೂಷಣೆಯೂ ಕೆಟ್ಟುದು ಕನಿಷ್ಠವಾದುದು ಎಂದು ಬಗೆದರೆ ನಾವು ಮೋಸಹೋದಂತೆ. ತಿಳಿಯಾದ ತಾತ್ಪರ್ಯವನ್ನಿಟ್ಟು ನಿರ್ಮಲವಾದ ಮನಸ್ಸಿನಿಂದ ಮಾಡಿದ ನಿಷ್ಕಪಟ ನಿಂದೆ ಸ್ವೀಕರಿಸಲು ಅರ್ಹವಾದ್ದು. ತಾಯಿ ತಂದೆ ಗುರು ಹಿರಿಯರ ತಾಡನೆಗೆ ಸಿಕ್ಕದ ಹುಡುಗ ಹೇಗೆ ಮುಂದಕ್ಕೆ ಬಂದಾನು? ತೆಗಳುವವರಿಂದ ನಾವು ಹೆಚ್ಚು ಕಲಿಯುತ್ತೇವೆಯೇ ಹೊರತು ಹೊಗಳುವವರಿಂದಲ್ಲ. ಬಸವಣ್ಣ ನುಡಿದಿಲ್ಲವೆ: "ಎನ್ನವರೊಲಿದು ಹೊನ್ನ ಶೂಲದೊಳಿಕ್ಕಿದರೆನ್ನ ಹೊಗಳಿ ಹೊಗಳಿ. ಎನ್ನ ಹೊಗಳಿಕೆ ಎನ್ನ ಮೈಗೊಂಡಿತಲ್ಲಾ. ಅಯ್ಯೋ ನೊಂದೆನು, ನೊಂದೆನು; ಸೈರಿಸಲಾರೆನು. ಕೂಡಲಸಂಗಮದೇವಾ, ನೀನೆನಗೊಳ್ಳಿದನಾದರೆ ಎನ್ನ ಹೊಗಳಿಕೆಗಡ್ಡಬಾರಾ, ಧರ್ಮಿ." ಇಲ್ಲದ ಸಲ್ಲದ ಆರೋಪಗಳನ್ನು ಮಾಡುವ ನೀತಿಗೆಟ್ಟ ಕೂಟಸಾಕ್ಷಿ ನಮಗೆ ಬೇಡ: ಇರುವ ತಪ್ಪುಗಳನ್ನು ಅಚ್ಚುಕಟ್ಟಾಗಿ ಎತ್ತಿತೋರಿಸುವ ಸ್ಫುಟವಾಕ್ಯ ಉಪಯುಕ್ತವಾದ ವಿಡಂಬನ. ದ್ರೌಪದಿ ಎಸಗುವ ಕುರುಸಭೆಯ ಈ ಅವಹೇಳನ ಉಚಿತವಲ್ಲದೆ ಏನು? "ಹಿರಿಯರಿಲ್ಲದ ಸಭೆ ಮನುಷ್ಯರ | ನೆರವಿಯದು ಸಭೆಯಲ್ಲ ಮೂರ್ಖರು | ಹಿರಿಯರಲ್ಲ ಯಥಾರ್ಥಭಾಷಣ ಭೀತ ಚೇತನರು!"— ಕುಮಾರವ್ಯಾಸ. ರಾವಣನ ಆಸ್ಥಾನದಲ್ಲಿ ವಿಭೀಷಣನು ಹೀಗೆ ಗರ್ಜಿಸುತ್ತಾನೆ: "ಹೋ ಹೊ ಗಜಬಜಿದೇಕೆ ಮಾಮಾ | ಸಾಹಸಿಗಳಹುದಹುದು ಬಲ್ಲೆವು | ಜೇಹುಕಸಿ ತಾನೊಂದು

CC-0. Jangamwadi Math Collection, Varanasi. An eGangotri Initiative

ಬಂದೀಪುರವನಸಲಂಗೆ॥ ಆಹುತಿಯನಿತ್ತು ರುಷಿ ಮನುಜ ಸ| ಮೂಹಗಳ ಕೊಲುವಾಗ ನಿಮ್ಮಯ | ಬಾಹುಬಲವೇನಾಯ್ತು ನಾಚಿಕೆಯಿಲ್ಲ ನಿಮಗೆಂದ॥ "—ತ್ರಿಮ್ಮಾರ್ಯ. ಸಂಚಿಯ ಹೊನ್ನಮ್ಮನ "ಹೆಣ್ಣಲ್ಲವೆ ತಮ್ಮನೆಲ್ಲ ಹಡೆದ ತಾಯಿ | ಹೆಣ್ಣಲ್ಲವೆ ಪೊರೆದವಳು॥ ಹೆಣ್ಣು ಹೆಣ್ಣೆಂದೇತಕೆ ಬೀಳುಗಳೆವರು | ಕಣ್ಣು ಕಾಣದ ಗಾವಿಲರು॥" ಎಂಬ ವಚನಕ್ಕೆ ಗಂಡಸರು ತಲೆ ತಗ್ಗಿಸಬೇಕಾದುದೆ! ನಿಂದಾತ್ಮಕವಾದ ವಿಡಂಬನ ಕೆಲವು ವೇಳೆ ಕಟುವಾಗಿ ಕಹಿಯಾಗಿ ಬರುತ್ತದೆ; ಅದರಲ್ಲಿಯೂ ನಮ್ಮ ವಚನಕಾರರ ವೈಷ್ಣವದಾಸರ ನಾಲಗೆಯಿಂದ. ಅವನ್ನು ಓದಿದಾಗ ಇಸಾಯ ಜೆರೆಮಿಯಾ ಮುಂತಾದ ಪ್ರಾಚೀನ ಹೀಬ್ರೂ ಜನಾಂಗದ ನಾಯಕರ ನೆನಪುಂಟಾಗುತ್ತದೆ. ದಾಸರ ಮಾತುಗಳನ್ನು ಯಾರು ಮರೆತಾರು? "ಮಡಿ ಮಡಿ ಮಡಿಯೆಂದು ಅಡಿಗಡಿಗ್ಹಾರುತಿ | ಮಡಿಯೆಲ್ಲಿ ಬಂತೆ ಬಿಕನಾಸಿ?" "ಎಲ್ಲಾರು ಮಾಡುವುದು ಹೊಟ್ಟೆಗಾಗಿ | ಗೇಣು ಬಟ್ಟೆಗಾಗಿ!" ಸರ್ವಜ್ಞ ಅನ್ನುವುದನ್ನು ಕೇಳಿ: "ಅತ್ತಿಯ ಮರ ಕಾಯಿ ಹೊತ್ತಿರ್ಪ ತೆರನಂತೆ | ತತ್ವಭೇದಗಳನರಿಯದಲೆ ರುದ್ರಾಕ್ಷಿ | ಹೊತ್ತು ಫಲವೇನು ಸರ್ವಜ್ಞ." "ಕಾಡ ಬೂದಿಯ ಪೂಸಿ ತೋದ ಕಾವಿಯ ಹೊದ್ದು | ಹೋದಾತ ಯೋಗಿಯೆನಬೇಡ ಇಂದ್ರಿಯವ | ಕಾದಾತ ಯೋಗಿ ಸರ್ವಜ್ಞ."

ವಿಡಂಬನ ವೃತ್ತದಲ್ಲಿ ನಮ್ಮ ಬಲಭಾಗಕ್ಕೆ ಕಾಣಿಸುವ ನಾಲ್ಕೂ ಸುಸೂತ್ರವೂ ಅಮಿಶ್ರವೂ ಆದ ಸುಲಭ ವಿಧಾನಗಳು. ಸಮಯ ಸಂದರ್ಭಗಳ ತಾತ್ಕಾಲಿಕ ಪ್ರೇರಣೆಯಿಂದ ಅವು ಉಲ್ಬಣವಾಗುವುವು. ಅವಕ್ಕೆ ಗಾಢವಾದ ಆಲೋಚನೆ ಅನಾವಶ್ಯಕ. ಅಪಾರ ಉಲ್ಲಾಸವೇ ಅವೆಲ್ಲದರ ಸಮಾನ ಲಕ್ಷಣ.

CC-0. Jangamwadi Math Collection, Varanasi. An eGangotri Initiative

ಅವಕ್ಕೆಲ್ಲ ನಗುವೋರೆಯೇ ಹೊರತು ಉರಿವೋರೆ ಇಲ್ಲದುದ ರಿಂದ ಅವುಗಳ ಕೈವಶವಾದ ಪದಾರ್ಥಕ್ಕೆ ಹೆಚ್ಚು ಸಂಕಟವಿಲ್ಲ. ಉಕ್ಕಿ ಉಕ್ಕಿ ಹರಿಯುವ ಆವೇಶ; ಹಿಡಿದು ನಿಲ್ಲಿಸಲಾಗದ ಲವಲವಿಕೆ; ಕೇವಲ ತವಾಷೆಯ ತೀಕ್ಷ್ಣತೆ—ಇವೇ ಅವುಗಳ ಆವರಣ. ಶ್ರೇಷ್ಠ ಪರಿಹಾಸದ ಸುಣುಪು ನಾಜೂಕುಗಳು ಅವುಗಳಿಂದ ದೂರ; ಆದರೂ ಅವುಗಳಲ್ಲಿ ರಮಣೀಯತೆ ಯುಂಟು.

ಹುಚ್ಚು ಹಾಸ್ಯವೆಂಬ ವಿಡಂಬನ ಅಮಾನುಷ ವ್ಯಕ್ತಿ ಅಸಂಭವ ಕಾರ್ಯ ಮುಂತಾದ ಕೌತುಕಗಳ ಮೇಲೆ ನಿಂತಿದೆ. ಕವಿಯ ಮನಸ್ಸು ಯಾವ ನಿಯಮವನ್ನೂ ಲಕ್ಷಿಸದೆ, ನಂಬಿ ಕೆಗೆ ಅರ್ಹ ಅನರ್ಹ ಎಂಬ ವಿವೇಚನೆಯನ್ನು ಬಿಟ್ಟುಕೊಟ್ಟು ಯದ್ವಾತದ್ವಾ ವಿಹರಿಸುವಂತೆ ತೋರಿದಾಗ ಹುಚ್ಚು ಹಾಸ್ಯದ ಜನನ. ಹೊರಗಡೆ ಅದು ಕುತರ್ಕವೂ ಅಸಂಬದ್ಧವೂ ಆದ ಚೆಲ್ಲಾಟ. ಆದರೆ ಅದರ ಒಳಗಡೆಯಲ್ಲಿ ಸಮಾಜದ ವಿಮರ್ಶೆ ಕುಳಿತಿರುತ್ತದೆ. ಅಂದರೆ ಹುಚ್ಚು ಹಾಸ್ಯದ ಹುಚ್ಚು ಅರ್ಥವಿ ರುವ ಹುಚ್ಚು, ಅರ್ಥವಿಲ್ಲದ್ದಲ್ಲ. ಈ ಬಗೆಯ ವಿಡಂಬನದಲ್ಲಿ ಪ್ರಾಚೀನ ಗ್ರೀಕ್ ಕವಿ ಅರಿಸ್ಟೋಫೇನಿಸ್ ಎತ್ತಿದ ಕೈ. ಅವನ ಒಂದು ಕಾವ್ಯದಲ್ಲಿ ಹಿರಿಯ ಸಾಹಿತಿ ಯಾರೆಂಬುದನ್ನು ಕಾವ್ಯದ ಪಂಕ್ತಿಗಳನ್ನು ಉಚ್ಚರಿಸುವುದರ ಮೂಲಕವೂ ತಕ್ಕಡಿ ಯಲ್ಲಿ ತೂಗುವುದರ ಮೂಲಕವೂ ನಿಷ್ಕರ್ಷಿಸುತ್ತಾರೆ! ಇನ್ನೊಂದರಲ್ಲಿ ಹೆಂಗಸರು ಒಳಸಂಚುಮಾಡಿ, ಮುಂಜಾನೆ ಗುಟ್ಟಿನಲ್ಲಿ ಹಾಸಿಗೆ ಬಿಟ್ಟೆದ್ದು, ಗಂಡಂದಿರ ನಿಲುವಂಗಿಗಳನ್ನು ತೊಟ್ಟುಕೊಂಡು, ಶಾಸನಸಭೆಗೆ ಹೋಗಿ, "ಇನ್ನು ಮುಂದೆ ಸ್ತ್ರೀಯರೇ ಆಡಳಿತ ಸೂತ್ರಗಳನ್ನು ಹಿಡಿಯತಕ್ಕದ್ದು!"

CC-0. Jangamwadi Math Collection, Varanasi. An eGangotri Initiative

ಎಂದು ನಿರ್ಣಯಿಸುತ್ತಾರೆ! ಮತ್ತೊಂದರಲ್ಲಿ ಆಥೆನ್ಸಿನ ಪ್ರಜಾಪ್ರಭುತ್ವದಿಂದ ಬೇಸರಹೊಂದಿದ ಇಬ್ಬರು ಪೌರರು, ಒಂದು ರೆಕ್ಕೆ ಹುಳುವಿನ ಮೇಲೆ ಕುಳಿತು ಆಕಾಶಕ್ಕೆ ಹಾರಿ, ಮೇಘಗಳ ಮಧ್ಯೆ ಒಂದು ನಗರವನ್ನು ಸ್ಥಾಪಿಸಲು ಯತ್ನಿಸುವರು! ಇವೆಲ್ಲಾ ಸ್ವಚ್ಛಂದವಾದ ವಚನಕ್ರೀಡೆಯಾದರೂ ಅಲ್ಲಿ ಹುದುಗಿರುವ ವಿಡಂಬನವನ್ನು ಅಲ್ಲಗಳೆಯಲಾಗದು.

ಹುಚ್ಚುಹಾಸ್ಯ ಒಂದು ಬಗೆಯ ಅತಿಚೇಷ್ಟೆ. ವಿಕಟಹಾಸ್ಯವೆಂಬುದು ಮತ್ತೊಂದು ಬಗೆಯ ಕುಚೇಷ್ಟೆ. ವಿಚಿತ್ರ ಅನುಕರಣವೇ ಇದರ ಹಾದಿ. ಯಾವುದನ್ನು ಕುರಿತು ವಿಡಂಬನ ಆಗಬೇಕೋ ಅದನ್ನು ನಗೆಗೇಡಾಗುವಷ್ಟು ಕೆಳಕ್ಕೆ ಇಳಿಸುವುದು ಇದರ ಗುರಿ. ಹೀಗೆ ಕೀಳುಗೈಯುವ ಕೆಲಸ ಎರಡು ವಿಧದಲ್ಲಿ ಆಗಬಹುದು. ಗಹನ ಪ್ರಸಂಗವನ್ನು ಹಾಸ್ಯ ಶೈಲಿಯಲ್ಲಿ ವರ್ಣಿಸಿ ಅದರ ಮೇಲ್ಮೆಯನ್ನು ತಗ್ಗಿಸುವುದು ಒಂದು ಬಗೆ: ಇಂಗ್ಲೆಂಡಿನಲ್ಲಿ ಪ್ಯೂರಿಟರ್ ಎಂಬ ವಿಪರೀತ ಶ್ರದ್ಧೆಯ ತೀವ್ರ ಪಂಗಡದವರು ಆಳುತ್ತಿದ್ದಾಗ ಜನರ ಸಾಧಾರಣ ಆಟಪಾಟಗಳಿಗೂ ನಿರ್ಬಂಧ ಒದಗಿ ಬಹಳ ಕಷ್ಟವುಂಟಾಯ್ತು. ಬಟ್ಲರ್ ಎಂಬ ಕವಿ ಒಬ್ಬ ಪ್ಯೂರಿಟರ್ ನ್ಯಾಯಾಧಿಕಾರಿಯನ್ನು ತನ್ನ ಕಾವ್ಯದ ನಾಯಕನನ್ನಾಗಿಟ್ಟುಕೊಂಡು, ಪ್ರಜೆಗಳಲ್ಲಿ ನಿಷ್ಠೆಯನ್ನೂ ಧರ್ಮಪರತೆಯನ್ನೂ ಹರಡಲು ಅವನು ಹೂಡುವ ಏರ್ಪಾಡುಗಳನ್ನು ಅತಿಶಯೋಕ್ತಿ ವಿಕಾರಹೋಲಿಕೆ ಪ್ರಾಸದ ವೈಪರೀತ್ಯ ಆಡಂಬರದ ಪದಗಳಿಂದ ಕೂಡಿದ ಆಡಿಕೊಳ್ಳುವ ರೀತಿಯಲ್ಲಿ ಬಣ್ಣಿಸಿ, ಸ್ವಾರಸ್ಯವಾದೊಂದು ಶಾಶ್ವತ ವಿಡಂಬನವನ್ನು ರಚಿಸಿದ. ಅತ್ಯಲ್ಪವಾದ ಸಂಗತಿಯನ್ನು ಮಹಾಕಾವ್ಯದ ಸಾಲಂಕೃತ ಶೈಲಿಯಲ್ಲಿ ನಿರೂಪಿಸುವುದು ವಿಕಟಹಾಸ್ಯದ

CC-0. Jangamwadi Math Collection, Varanasi. An eGangotri Initiative

ಎರಡನೆಯ ದಾರಿ. ಪೋಪ್ ಕವಿಯ "ಕುರುಳಿನ ಅಪಹಾರ" ವೆಂಬ ಕಾವ್ಯ ಜಗತ್ಪ್ರಸಿದ್ಧ. ಒಬ್ಬ ಲಲನೆಯ ಕುರುಳೊಂದನ್ನು ಅವಳನ್ನು ಪ್ರೀತಿಸುತ್ತಿದ್ದ ಒಬ್ಬ ಯುವಕ ಕತ್ತರಿಸಿಕೊಂಡುಬಿಟ್ಟ. ಎರಡು ಮನೆತನಕ್ಕೂ ವೈಷಮ್ಯ ಹುಟ್ಟಿತು. ಪೋಪ್‌ಕವಿ ಆ ವಿಡಂಬನ ಕಾವ್ಯವನ್ನು ಬರೆದು, ಇಬ್ಬರೂ ನಗುವಂತೆ ಎಸಗಿ, ಅವರನ್ನು ಪುನಃ ಅನ್ಯೋನ್ಯಗೊಳಿಸಲು ನೆರವಾದ. ಆ ಕಾವ್ಯದಲ್ಲಿ ವಿಷಯ ಕೇವಲ ಸಣ್ಣದು; ರೀತಿ ಮಾತ್ರ ತೋರಿಕೆಯಲ್ಲಿ ಬಹು ಗಂಭೀರ. ನಾಯಕಿಗೆ ತಲೆ ಬಾಚುವುದಕ್ಕೆ ದೇವತೆಗೆ ದೊಡ್ಡ ಪೂಜೆಯನ್ನು ಸಲ್ಲಿಸುವುದಕ್ಕಿಂತ ಹೆಚ್ಚು ಹಗರಣ. ಕೂದಲನ್ನು ಕಾಯಲು ನಾಲ್ಕು ಜಾತಿಯ ಪ್ರಬಲ ಭೂತಗಳ ನೇಮಕ. ನಾಯಕ ಉಪಯೋಗಿಸುವ ಕತ್ತರಿಯೇ ಪ್ರಚಂಡ ಆಯುಧ. ಭಾಷಾಮರ್ಯಾದೆಗಳಿಗೆ ಹೋಮರನೆ ಮಾದರಿ. ಅಂದರೆ ತ್ರಿವಿಕ್ರಮನ ಕವಚವನ್ನು ವಾಮನ ಹಾಕಿಕೊಂಡು ಅಣಕಿಸಿದಂತೆ!

ಗೇಲಿಗೆ ಉತ್ಪ್ರೇಕ್ಷೆಯೇ ಬೆಂಬಲ: ಕೊನೆ ಮೊದಲಿಲ್ಲದೆ ನಕಲಿಯನ್ನು ಮುಂದುವರಿಸುವುದು ಅದರ ಅಭಿರುಚಿ. ಕಲ್ಪನೆಯ ಮೇಲೆ ಕಲ್ಪನೆ ಬರುವುದರಿಂದ ಓದುಗರಿಗೆ ನಕ್ಕು ನಕ್ಕು ಹೊಟ್ಟೆ ಹುಣ್ಣಾಗುತ್ತದೆ. ವೃತ್ತವಿಲಾಸ ಕುರುಡುಭಕ್ತಿಯನ್ನು ಹಳಿಯುತ್ತಾನೆ: "ಅಜ್ಞಾನಿಗಳ್ ಇಟ್ಟ ಮರಂಗಳಂ ಒಟ್ಟಿದ ಕಲ್ಗಳಂ ದೈವಮೆಂದು ಪೆಸರಿಟ್ಟು ಕೊಂಡಾಡಿ ವರಮೀಗುಮೆಂಬಾಸೆಯಿಂ ತಮ್ಮೊಳರ್ಥಮಂ ಬಱಿಸೂಱೆಗೈವರ್. ಆ ದೈವಂ ವರಮನೀವಂದಂ ಎಂತುಟೆಂದೊಡೆ ಬಂಜೆಯ ಪೆರ್ಮಗಂ ಮೃಗತೃಷ್ಣಾಂಬುವಿಂ ಮಿಂದು, ಕಲ್ಲನಾರ ಸೀರೆಯುನುಟ್ಟು, ಆಗಸದ ಪೂದುಱುಂಬಿ, ಮೊಲದ ಕೋಡ ಬಿಲ್ವಿಡಿದು

CC-0. Jangamwadi Math Collection, Varanasi. An eGangotri Initiative

ಬರುತ್ತಿರ್ಪುದಂ, ಪುಟ್ಟುಂಗುರುಡಂ ಅಂಧಕಾರದ ನಟ್ಟನಡು ವಿರುಳೊಳ್ ಕಂಡನ್ ಎಂಬಂತೆ ನಿಷ್ಫಲಂ ಕ್ಲೇಶಂ ದುರ್ಗತಿ ದುಃಖಮೇ ಅಕ್ಕುಂ. ಆ ದೈವಂ ಪೆಡರ್ಗಿವುದುಂ ಕಾವುದುಂ ಅಂತಿರ್ಕೆ, ತನಗೆಂದುಂ ಸಂಕಲ್ಪಿಸಿದ ವಸ್ತುವಂ ಕಾಯು ಲಾಪಿರ್." ಐರ್ಲೆಂಡಿನ ಒಬ್ಬ ವಿಪರೀತ ದಡಾಣಿ ಹೆಂಗಸನ್ನು ಸ್ಕಾಟ್ಲೆಂಡಿನ ಒಬ್ಬ ಕುಳ್ಳು ಮನುಷ್ಯ ಮದುವೆಯಾಗುವನೆಂಬ ಸುದ್ದಿಯನ್ನು ಸಿಡ್ನಿಸ್ಮಿತ್ ಎಂಬವನಿಗೆ ಯಾರೋ ಹೇಳಿದರು. ಅವನು ಲೇವಡಿಮಾಡತೊಡಗಿದ: "ಅವಳನ್ನು ಕೈಹಿಡಿಯು ವನೇ! ಅಸಾಧ್ಯ! ಅವಳ ಒಂದು ಚೂರನ್ನು ವಿವಾಹವಾಗು ವನು ಎಂದೆಯಾ! ಪೂರ್ತಿ ಅವಳನ್ನು ಅವನು ಮದುವೆಯಾಗ ಲಾರ. ಹಾಗೆ ಮಾಡಿದರೆ ಅದು ದ್ವಿಪತ್ನೀವಿವಾಹ ತ್ರಿಪತ್ನೀ ವಿವಾಹವಾದೀತು; ನೆರೆಹೊರೆಯವರೊ ನ್ಯಾಯಾಧೀಶರೊ ಮುಂದೆ ಬಂದು ಆ ಅಪರಾಧವನ್ನು ತಪ್ಪಿಸಬೇಕು. ಅಷ್ಟೇಕೆ, ಅವಳಲ್ಲಿ ಒಂದು ಹಳ್ಳಿಗೆಲ್ಲಾ ಹೆಂಡತಿಯರನ್ನು ಒದಗಿಸುವಷ್ಟು ತೂಕವಿದೆ. ಒಬ್ಬನು ಅವಳನ್ನು ಮದುವೆಯಾಗುವುದೆ? ಎಂದಿಗೂ ಆಗದು. ಅವಳೊಬ್ಬಳೇ ಒಂದು ಗುಂಪಿಗೆ ಸಮಾನ; ಒಂದು ಸಭೆಗೆ ಸಮಾನ. ಬೆಳಗ್ಗೆ ಎದ್ದು ಅವಳ ಸುತ್ತ ಒಂದು ಸಾರಿ ತಿರುಗಾಡಿದರೆ ನಿನಗೆ ವ್ಯಾಯಾಮವಾಯ್ತು; ಅದಕ್ಕೂ ಆರೋಗ್ಯ ಚೆನ್ನಾಗಿರಬೇಕು; ಅಲ್ಲಲ್ಲಿ ತಂಗಿ ದಣಿವಾರಿಸಿ ಕೊಳ್ಳಲು ಮಜಲುಗಳನ್ನು ಮೊದಲೇ ಗೊತ್ತುಮಾಡಿಕೊಳ್ಳ ಬೇಕು. ಒಂದು ದಿವಸ ಉನ್ಮತ್ತನಾಗಿ ಹೊತ್ತರೂಟಕ್ಕೆ ಮುಂಚೆ ಅವಳನ್ನು ಪ್ರದಕ್ಷಿಣೆಮಾಡಲು ಉದ್ಯುಕ್ತನಾದೆ; ಅರ್ಧದೂರ ನಡೆದೆ; ಸುಮ್ಮನೆ ಸುಸ್ತಾಗಿ ಬಿಟ್ಟೆ! ಅವಳೊಬ್ಬಳೇ ಒಂದು ಜನ ಸಮೂಹ; ದೊಂಬಿಯನ್ನು ಚೆದರಿಸಲು ಇರುವ ಕಾನೂ

CC-0. Jangamwadi Math Collection, Varanasi. An eGangotri Initiative

ನಿನ ಆಶ್ರಯ ತಕ್ಕೊಂಡು ಅವಳನ್ನು ಅಡಗಿಸಬೇಕು! ಅವಳೊಡನೆ ಪಾಣಿಗ್ರಹಣ ಸರ್ವಥಾ ಆಗದು." ರಷ್ಯನರ ನಾಮಾಂಕಿತಗಳು ಕೇಳುವುದಕ್ಕೆ ಸ್ವಲ್ಪ ಕರ್ಕಶ. ಅವನ್ನು ಕವಿ ಬೈರನ್ ಹೀಗೆ ಗೇಲಿಮಾಡಿದ್ದಾನೆ: "ರಷ್ಯನ್ ಯೋಧರು ಯುದ್ಧಕ್ಕೆ ಸನ್ನದ್ಧರಾದರು. ಆದರೆ ನಾನು ಅವರನ್ನು ಹೇಗೆ ಕೂಗಿ ಕರೆಯಲಿ? ಪೌರಾಣಿಕ ವೀರ ಅಕೀಲಸ್ಸು ಕೂಡ ಕೀರ್ತಿಸಾಹಸಗಳಲ್ಲಿ ಅವರನ್ನು ಹಿಂದೆ ಹಾಕಲಾರ; ಅವರ ಹೆಸರುಗಳು ಎಲ್ಲ ಗುಣಸೌಜನ್ಯಗಳ ಗಣಿ—ಉಚ್ಚಾರಣೆ ಒಂದು ವಿನಾ. ಆದರೂ ನನ್ನ ಪದ್ಯ ಸುಶ್ರಾವ್ಯವಾಗಲೆಂದು ಕೆಲವನ್ನು ಬರೆಯುತ್ತೇನೆ: ಸ್ಟ್ರಾಂಗೆನಫ್, ಸ್ಟ್ರೋಕೊನಫ್, ಮೆಕ್ನಾಫ್, ಸರ್ಜ್‌ಲ್ವಾವ್, ಆರ್ಸೇನ್ಯೆವ್, ಟ್ಷಿಟ್ಷ್‌ಹ್ಯಾಕಫ್, ಜೋಕೆನಫ್, ಅಲ್ಲದೆ ಒಂದೊಂದಕ್ಕೂ ಹನ್ನೆರಡು ವ್ಯಂಜನಗಳಿರುವ ಇತರ ಕೆಲವು. ಇವೆಲ್ಲ ರಷ್ಯದ ರಾಜಧಾನಿಯಲ್ಲಿ ನಾಮಧೇಯಗಳಾಗಿರಬಹುದು; ನನ್ನ ಕಾವ್ಯದಲ್ಲಿ ಮಾತ್ರ ಅವನ್ನು ಪ್ರಾಸಕ್ಕೆ ಜೋಡಿಸುವುದು ಕಷ್ಟ. ಅವುಗಳಲ್ಲಿ ಅನೇಕವು ನೆನಪಿಗೆ ತಂದುಕೊಳ್ಳಲು ಯೋಗ್ಯವಾದುವು—ಇಷ್ಟ್ಸ್ಕಿನ್, ಔಸ್ಕಿನ್, ಇಫ್‌ಸ್ಕಚಿ, ಔಸ್ಕಿಗಳಲ್ಲಿ ಅಂತವಾಗುವ ಮಧುರ ಅಕ್ಷರ ಸಮೂಹಗಳು. ಆದರೇನು? ಈ ಏಳನ್ನು ಮಾತ್ರ ನನ್ನ ಕವನದಲ್ಲಿ ಸೇರಿಸಬಲ್ಲೆ: ರೌಸಮೌಸ್ಕಿ, ಶ್ಯೆರಿಮ್ಯುಟಫ್, ಕ್ರೀಮಟಫ್, ಕಾಕ್ಲಾಫ್ಟಿ, ಕಾಕ್ಲೊಬ್‌ಸ್ಕಿ, ಕೂರಕಿನ್, ಮೌಸ್ಕಿನ್ ಪೌಸ್ಕಿನ್." ಮೋಲಿಯೇರ್ ಸೃಷ್ಟಿಸಿರುವ ಹಾರ್ಪಗನ್ ಪಾತ್ರ ಎಷ್ಟು ಲೋಭಿಯೆಂದರೆ "ಕೊಡುತ್ತೇನೆ" ಎಂಬ ಪದವನ್ನು ಕೂಡ ಹೇಳಲೊಲ್ಲ. "ಸುಪ್ರಭಾತವನ್ನು ಎರವು ತೆಗೆದುಕೊಳ್ಳಿ," ಎನ್ನುವುದು ಅವನ ರೂಢಿ! ಅವನ ಕಾರ್ಪಣ್ಯವನ್ನು ಕಂಡು

CC-0. Jangamwadi Math Collection, Varanasi. An eGangotri Initiative

ಮಂದಿಗೆ ಗೇಲಿಯೋ ಗೇಲಿ. ಏಕಾದಶಿ ಜಾಗರಣೆ ಉಪವಾಸದ ವ್ರತಗಳು ಅಧಿಕವಾಗಿ ಬರುವಂತೆ ಪ್ರತ್ಯೇಕ ಪಂಚಾಂಗವನ್ನು ತನ್ನ ಮನೆಗೆ ತಯಾರಿಸಿಕೊಳ್ಳುವನಂತೆ! ಕ್ರಿಸ್‌ಮಸ್‌ಹಬ್ಬ ಸಂಪ್ರಾಪ್ತವಾದಾಗ ಸೇವಕರೊಡನೆ ಯಾವುದೋ ನೆವದಿಂದ ಅವನಿಗೆ ಜಗಳ: ಆಗ ಒಂದುಪಕ್ಷ ಅವರು ಅವನ ಮನೆಯನ್ನು ಬಿಟ್ಟರೆ ಯಾವ ಬಹುಮಾನವನ್ನೂ ಅವನು ಕೊಡಬೇಕಾದುದು ಇಲ್ಲ! ಒಂದುಸಲ ಕುದುರೆಗೆ ಕೊಟ್ಟ ಹುರುಳಿಯನ್ನು ರಾತ್ರಿ ತಾನೇ ಕದಿಯುತ್ತಿದ್ದಾಗ ಆಳಿನ ಕೈಲಿ ದೊಣ್ಣೆ ಸೇವೆ ಅವನಿಗೆ ಆಯಿತಂತೆ! ಹೀಗೆ ಲೇವಡಿಯಲ್ಲಿ ವಿಷಯವನ್ನು ಹಿಗ್ಗಲಿಸಿ ಹಿಗ್ಗಲಿಸಿ ಅತಿಶಯವಾಗಿ ಎಳೆದುಬಿಡುವುದೇ ವಾಡಿಕೆ.

ಈ ಮೂರೂ ಹತ್ತಿರ ಹತ್ತಿರದ ವಿಡಂಬನ ಪದ್ಧತಿಗಳು. ಒಂದು ವಿಕಾರ ಹಾಸ್ಯ; ಇನ್ನೊಂದು ವಿಷಮ ಹಾಸ್ಯ; ಮತ್ತೊಂದು ವಿಪರೀತ ಹಾಸ್ಯ: ಮೂರೂ ವಿದೂಷಕ ಹಾಸ್ಯಗಳು. ಯಾವುದಕ್ಕೂ ಅಂಕೆಯಿಲ್ಲ, ಅಳತೆಯಿಲ್ಲ. ಒಂದರೊಡನೊಂದು ಮಿಳಿತವಾಗಿ ಬರುವುದೂ ಸಂಭವ.

ಸೂಕ್ಷ್ಮಬುದ್ಧಿ ಪ್ರದರ್ಶಿಸುವ ಚಮತ್ಕಾರವೇ ನಾಲ್ಕನೆಯದಾದ ಚತುರೋಕ್ತಿ. ಈ ವಿಡಂಬನಕ್ಕೆ ಮಿಂಚಿನ ವೇಗ, ವ್ಯಾಘ್ರನಖದ ತೀಕ್ಷ್ಣತೆ. ಸಂದರ್ಭ ಒದಗಿದ ಒಡನೆಯೇ ನರ್ಮವಚನ ಹೊರಕ್ಕೆ ಹಾರಿ ಪಶುವಾಗಿ ಸಿಕ್ಕಿದ ಮನುಷ್ಯಪ್ರಾಣಿಯನ್ನೊ ಸಂಸ್ಥೆಯನ್ನೊ ವಿಚಾರವನ್ನೊ ಗಬಚಿಬಿಡುವುದು. ಸರ್ಪವನ್ನು ತಡೆಗಟ್ಟುವ ಮಂತ್ರವಿದೆಯಂತೆ: ಕುಶಾಗ್ರಬುದ್ಧಿ ಘೋಷಿಸುವ ನಿಪುಣಮಾತಿಗೇನೊ ಜನರನ್ನು ತಡೆದು ದಿಗ್ಭ್ರಮೆ ಹಿಡಿಸುವ ಚೈತನ್ಯವುಂಟು. ಅಂದರೆ ಬುದ್ಧಿಕೌಶಲ್ಯ ಬಹು ಚುರುಕಾಗಿ ಅತಿ ವಿಚಕ್ಷಣೆಯಿಂದ ಕೆಲಸ

CC-0. Jangamwadi Math Collection, Varanasi. An eGangotri Initiative

ಮಾಡುವುದು ಅಗತ್ಯ. ಸಮಯ ಸನ್ನಿವೇಶಗಳಿಂದ ಪ್ರಚೋದಿತವಾಗಿ ಅವುಗಳಿಗಾಗಿಯೇ ಅವತರಿಸಿದರೂ ಅನೇಕ ಜಾಣವಾಕ್ಯಗಳು ಅಳಿಯದೆ ನಿಲ್ಲುವಷ್ಟು ಅರ್ಥವನ್ನೂ ಅಂದವನ್ನೂ ಹೊಂದಿವೆ. ವಕೀಲರಿಗೂ ನ್ಯಾಯಾಧೀಶರಿಗೂ ಆಗಾಗ ನಡೆಯುವ ವಾಕ್ಸಾಳಗ; ಗುರು ಶಿಷ್ಯರ ಪೈಪೋಟಿ; ಮಿತ್ರಗೋಷ್ಠಿಗಳಲ್ಲಿ ಒಬ್ಬರೊಬ್ಬರ ಹುರುಡು; ರೋಗಿ ವೈದ್ಯರ ಸಂವಾದ; ಗಂಡ ಹೆಂಡಿರ ಜಗಳ; ಮಾರುವವ ಕೊಳ್ಳುವವರ ತಿಕ್ಕಾಟ; ಚುನಾಯಿಸುವ ಪ್ರಜೆಗಳಿಗೂ ನಿಂತಿರುವ ಉಮೇದುವಾರರಿಗೂ ವೈಷಮ್ಯ—ಇತ್ಯಾದಿ ನಾಗರಿಕ ಬಾಳಿನ ನೂರಾರು ಸಂಘಟನೆಗಳಲ್ಲಿ ಯುಕ್ತಿಯುಕ್ತವಾದ ಹೇಳಿಕೆಗಳು ಹುಟ್ಟಿ ಗಾದೆಗಳಂತೆ ಬಹಳಕಾಲ ಉಳಿದುಬಂದಿವೆ. ಇಂಗ್ಲೆಂಡಿನ ಮಾಜಿ ಮಂತ್ರಿ ಲಾಯ್ಡ್ ಜಾರ್ಜರವರು ಒಂದುಸಲ ಭಾಷಣ ಮಾಡುತ್ತಿದ್ದಾಗ ಒಬ್ಬ ಮಹಿಳೆ ಎದ್ದು ಅವರನ್ನು ಆಕ್ಷೇಪಿಸಿದಳಂತೆ: "ಜಾರ್ಜರೇ, ನಾನು ನಿಮ್ಮ ಹೆಂಡತಿಯಾಗಿದ್ದರೆ ಏನು ಮಾಡುತ್ತಿದ್ದೆ ಗೊತ್ತೊ? ನಿಮಗೆ ವಿಷವನ್ನು ಕೊಡುತ್ತಿದ್ದೆ!" ಸ್ವಲ್ಪವೂ ತಡವರಿಸದೆ ಜಾರ್ಜರು ತಕ್ಷಣ ಉತ್ತರ ಕೊಟ್ಟರು: "ಅಮ್ಮ, ನೀವು ನನ್ನ ಹೆಂಡತಿಯಾಗಿದ್ದರೆ ನಾನು ಆ ವಿಷವನ್ನು ಕುಡಿಯುತ್ತಿದ್ದೆ!" ಇನ್ನೊಂದಾವರ್ತಿ ಭಾಷಣಮಾಡುತ್ತಿದ್ದಾಗ ಆಗದವನೊಬ್ಬ ಅವರನ್ನು ಕಂಗೆಡಿಸಬೇಕೆಂದು ಮಧ್ಯದಲ್ಲಿ ತಲೆಹಾಕಿ "ಜಾರ್ಜರೇ, ನಿಮ್ಮ ಅಜ್ಜ ಒಂದು ಕತ್ತೆಯ ಗಾಡಿಯನ್ನು ಹೊಡೆಯುತ್ತಿದ್ದುದು ನಿಮಗೆ ಜ್ಞಾಪಕವಿದೆಯೇ?" ಎಂದು ಪ್ರಶ್ನಿಸಿದನಂತೆ. ಅರ್ಧಕ್ಷಣ ಕೂಡ ವಿಳಂಬವಾಗದೆ ಬಂತು ಜಾರ್ಜರ ಜವಾಬು: "ನಿಶ್ಚಯ; ಆ ಗಾಡಿ ಈಗ ಏನಾಗಿದೆಯೋ ತಿಳಿಯದು. ಆದರೂ ನನಗೆ

CC-0. Jangamwadi Math Collection, Varanasi. An eGangotri Initiative

ಬಹಳ ಸಂತೋಷ, ಆ ಕತ್ತೆ ಇನ್ನೂ ಬದುಕಿದೆಯಲ್ಲಾ ಎಂದು!" ಡಾಕ್ಟರ್ ಜಾನ್ಸನ್ ಈ ಬಗೆಯ ಮರುಮಾತುಗಳಲ್ಲಿ ತುಂಬ ಘಟ್ಟಿಗ. ಒಂದುದಿನ ಪಾದಚಾರಿಗಳ ಸಣ್ಣ ಪಥದಲ್ಲಿ ಆವನು ನಡಯುತ್ತಿದ್ದಾಗ, ಆವನೆದುರಿನಲ್ಲಿ ಒಬ್ಬ ಬರುತ್ತಿದ್ದ. ಒಂದೆರಡು ನಿಮಿಷಗಳಲ್ಲಿ ಎದುರು ಬದುರಾಗಿ ನಿಂತರು. ದಾರಿ ಬಿಡಲು ಇಬ್ಬರೂ ಒಪ್ಪಲಿಲ್ಲ. ಆ ಮಾರ್ಗಸ್ಥ ಕಡುಕೋಪದಿಂದ ಅಂದನಂತೆ: "ನಾನು ಯಾವ ಮುಟ್ಠಾಳನಿಗೂ ದಾರಿ ಬಿಡುವುದಿಲ್ಲ!" ತಕ್ಷಣ ಜಾನ್ಸನ್ "ಹಾಗೆಯೋ, ನಾನು ದಾರಿಬಿಡುತ್ತೇನೆ!" ಎಂದು ಉಸುರಿ, ಪಕ್ಕಕ್ಕೆ ಸರಿದುಹೋದ. ಒಬ್ಬ ನ್ಯಾಯಾಧೀಶ ಸ್ವಪ್ರತಿಷ್ಠೆಯಿಂದ ವಕೀಲನನ್ನು ಕುರಿತು ಗಜರಿದನಂತೆ: "ಅಯ್ಯ, ನೀವು ಹೇಳುವುದೇ ಸರಿಯಾದರೆ ನನ್ನ ನ್ಯಾಯಶಾಸ್ತ್ರದ ಪುಸ್ತಕಗಳನ್ನು ಸುಟ್ಟುಹಾಕಲೇಬೇಕು!" ಅದಕ್ಕೆ ವಕೀಲ ಅಂದನಂತೆ: "ಬೇಡ, ಮಹಾಸ್ವಾಮಿ, ಅವುಗಳನ್ನು ಪಠಿಸುವುದು ಹೆಚ್ಚು ಪ್ರಯೋಜನಕರ." ದರ್ಪದಲ್ಲಿ ಬೀಗಿಹೋದ ಇನ್ನೊಬ್ಬ ನ್ಯಾಯಾಧೀಶ ತನ್ನ ಕಾಲುಗಳನ್ನು ಮೇಜಿನಮೇಲೆ ಚಾಚಿಬಿಟ್ಟು ಕುರ್ಚಿಗೆ ಒರಗಿಕೊಂಡು ಮಲಗಿಬಿಡುತ್ತಿದ್ದನಂತೆ. ವಕೀಲನೊಬ್ಬ "ಸ್ವಾಮಿಯವರ ಆ ಕೊನೆಯನ್ನೊ ಈ ಕೊನೆಯನ್ನೊ ನಾನು ಸಂಬೋಧಿಸಬೇಕಾದ್ದು?" ಎಂದು ಕೇಳಿದ. ಉದಾಸೀನದಿಂದ ಆ ಜಡ್ಜಿ "ಯಾವ ಕೊನೆಗೆ ಬೇಕಾದರೂ ಒದರಿಕೊ!" ಅಂದುಬಿಟ್ಟ. ಅದಕ್ಕೆ ಪ್ರತಿಯಾಗಿ ವಕೀಲ ಹೇಳಿದ: "ಅಪ್ಪಣೆ. ಈ ಕೊನೆಯಲ್ಲಿ ಎಷ್ಟು ನ್ಯಾಯಪರಿಜ್ಞಾನವಿದೆಯೋ ಆ ಕೊನೆಯಲ್ಲಿಯೂ ಅಷ್ಟೆ!" ಪುರಾತನ ಗ್ರೀಕ್ ಕವಿ ಯೂರಿಪಿಡೀಸ್ ದೀರ್ಘಕಾಲ ಯೋಚಿಸಿ ನಿದಾನದಲ್ಲಿ ತನ್ನ ನಾಟಕಗಳನ್ನು

CC-0. Jangamwadi Math Collection, Varanasi. An eGangotri Initiative

ಎಚ್ಚರದಿಂದ ರಚಿಸುತ್ತಿದ್ದ. ಅವನ ಹುರುಡಾಳಿ ಆಲ್ಕೆಸ್ಟಿಸ್ ಒಂದುಸಾರಿ ಗರ್ವದಿಂದ ಅವನನ್ನು ತಿರಸ್ಕರಿಸಿ ಮಾತಾಡಿದ: "ಯೂರಿಪಿಡೀಸನ ಕವಿತ್ವದ ವೇಗವನ್ನು ಏನೆಂದು ಪ್ರಶಂಸಿಸಲಿ? ಮೂರು ದಿನಗಳಲ್ಲಿ ಮೂರು ಪಾದಗಳನ್ನು ಪೂರ್ಣ ಮಾಡಿದ್ದಾನೆ. ನಾನು ದಿವಸವೊಂದಕ್ಕೆ ನೂರು ಚರಣಗಳನ್ನಾದರೂ ಬರೆಯಬಲ್ಲೆ." ಅದಕ್ಕೆ ಯೂರಿಪಿಡೀಸ್ ಸಮಾಧಾನ ಹೇಳಿದ: "ಹವುದು; ಆದರೆ ಆಲ್ಕೆಸ್ಟಿಸ್ಸನ ಬರೆವಣಿಗೆಗೆ ಮೂರೇ ದಿವಸದ ಆಯುಸ್ಸು; ನನ್ನದು ಚಿರಂಜೀವಿ." ಒಬ್ಬ ಇಂಗ್ಲಿಷ್ ಗವರ್ನರನ ಪತ್ನಿ ಒಂದು ದಿವಸ "ಐರ್ಲೆಂಡಿನ ಹವ ಅತ್ಯುತ್ತಮವಾದುದು!" ಎಂದು ಹೊಗಳಿದಳು. ಆಗ ಡೀನ್ ಸ್ವಿಫ್ಟ್ ಅವಳಲ್ಲಿ ಮಂಡಿಯೂರಿ ಬೇಡಿಕೊಂಡ: "ತಾಯಿ, ಇಂಗ್ಲೆಂಡಿನಲ್ಲಿ ಆ ಮಾತು ಆಡೀರಿ, ಕಂಡಿರಾ; ಅದನ್ನು ಕೇಳಿದ ಕೂಡಲೆ ಇಂಗ್ಲಿಷರು ನಮ್ಮ ಹವದ ಮೇಲೆ ತೆರಿಗೆ ಹಾಕಿಬಿಡುತ್ತಾರೆ!" ಸಿಡ್ನಿಸ್ಮಿತ್ ಪುರೋಹಿತ ವರ್ಗಕ್ಕೆ ಸೇರಿದವ. ಒಬ್ಬ ಶ್ರೀಮಂತ ಅವನನ್ನು ಅವಮಾನ ಮಾಡಲು ಹೀಗೆ ನುಡಿದ: "ನನಗೆ ಒಬ್ಬ ಮಂಕು ಮಗನಿದ್ದಿದ್ದರೆ, ದೇವರಾಣೆ, ಅವನನ್ನು ಪುರೋಹಿತನನ್ನಾಗಿ ಮಾಡುತ್ತಿದ್ದೆ." ಸ್ಮಿತ್ ಕೂಡಲೆ ಬದಲು ಹೇಳಿದ: "ನಿಮ್ಮ ತಂದೆಯ ಅಭಿಪ್ರಾಯ ಬೇರೆಯಾಗಿತ್ತೆಂದು ಕಾಣುತ್ತದೆಯಲ್ಲ!"

ಇನ್ನು ಉಳಿದಿರುವುವು ವರ್ತುಳದಲ್ಲಿ ನಮ್ಮ ಎಡಗಡೆಗೆ ನಮೂದಿಸಿರುವ ನಾಲ್ಕು ಬಗೆಯ ವಿಡಂಬನ. ಇವು ಸ್ವಲ್ಪ ಮಟ್ಟಿಗೆ ನೋವನ್ನು ಉಂಟುಮಾಡುವ ಮಾತುಗಾರಿಕೆ. ಅಪಹಾಸ್ಯದಿಂದ ಮೊದಲೆಯವರೆಗೆ ಎಲ್ಲವೂ ಹೆಚ್ಚು ಕಡಮೆ ಕಹಿ ಮಿಶ್ರವಾದ ಸಿಹಿವಾಕ್ಕು. ಚತುರೋಕ್ತಿಯಲ್ಲಿಯೇ ಅವಹೇಳ

CC-0. Jangamwadi Math Collection, Varanasi. An eGangotri Initiative

ನದ ಒಗರು ಅನುಭವವಾಗುತ್ತದೆ. ಅದಕ್ಕೋಸ್ಕರ ಅದನ್ನು ವಿಡಂಬನ ಮಂಡಲದ ಬಲಗಡೆ ಕೆಳಭಾಗದಲ್ಲಿ ತೋರಿಸಿದ್ದೇನೆ.

ಜಾಣ್ನುಡಿಯ ತರುವಾಯ ಅಪಹಾಸ್ಯ. ಪರಿಹಾಸಕ್ಕೂ ಅಪಹಾಸ್ಯಕ್ಕೂ ಇಷ್ಟೇ ವ್ಯತ್ಯಾಸ: ಪರಿಹಾಸ ಸ್ವಚ್ಛ ಸೌಮ್ಯತೆಯಿಂದ ರಮ್ಯ; ಅಪಹಾಸ್ಯ ಬಿರುಸು ರಂಜನೆಗಳ ಬೆರಕೆ. ಈ ನಿದರ್ಶನಗಳನ್ನು ಭಾವಿಸಿ. ಅರ್ಜುನ ಮತ್ಸ್ಯಯಂತ್ರವನ್ನು ಸಾಧಿಸಲು ಸ್ವಯಂವರ ಸಭೆಯಲ್ಲಿ ಎದ್ದು ನಿಂತಾಗ, ದ್ರೌಪದಿಯ ಪರಿವಾರ ತಮ್ಮ ತಮ್ಮಲ್ಲಿ ಆಡಿಕೊಳ್ಳುತ್ತಾರೆ: "ಧನು ತನಗೆ ನೆಗಹಲ್ಕೆ ಕೃಷ್ಣಾ। ಜಿನವೊ ಸಾಲಗ್ರಾಮ ದೇವರೋ। ವಿನುತ ತುಳಸಿಯೊ ಕುಶವೊ ದರ್ಭೆಯೊ ಸಮಿಧೆಗಳ ಹೊರೆಯೊ॥ ನೆನೆದ ತಿಲವೋ ಮೇಣಿದೌಪಾಸನದ ಕೋಳವಿಯೊ ಬಣಗು ವಿಪ್ರನ। ನೆನಹ ನೋಡಿರೆ ಘನವಲಾ ದ್ರೌಪದಿಯ ಸೌಭಾಗ್ಯ॥ ಇತ್ತ ನೋಡೌ ತಾಯೆ ಹಾರುವ। ರತ್ತ ಗಡ್ಡದುಪಾಧ್ಯರನು ತಾ। ವೆತ್ತುವರು ಗಡ ಧನುವನಿಸುವರು ಗಡ ತಿಮಿಂಗಿಲವ॥ ಹೊತ್ತುಗಳೆವೊಡೆ ಲೇಸು ಬಳಿಕಿ। ನ್ನುತ್ತಮರಲಾ ವಿಪ್ರರೆನೆ ತಲೆ। ಗುತ್ತಿ ನಾಚಿದಳುಂಗುಟದೊಳೌಂಕುತ ಮಹೀತಳವ॥" ಸಾಹಿತ್ಯ ರಸದ ಪಾನ ಎಲ್ಲರಿಗೂ ದಕ್ಕದೆಂದು ಕವಿ ಮಧುರ ಸಿದ್ಧಾಂತ ಮಾಡಿಕೊಂಡು ಸಾಮಾನ್ಯ ಜನರನ್ನು ಹೀಗೆ ಅಲಕ್ಷ್ಯಗೈಯುತ್ತಾನೆ: "ಪಂಡಿತರುಂ ವಿವಿಧ ಕಳಾ। ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್॥ ಕಂಡರ್ ಕೇಳ್ವೊಡೆ ಗೊರವರ। ಡುಂಡುಚಿಯೇ ಬೀದಿವಱಿಯೆ ಬೀರನ ಕತೆಯೇ॥" ಕೃಷ್ಣಪರಮಾತ್ಮನಿಗೆ ಅಗ್ರಪೂಜೆ ಕೊಡಲೇ ಕೂಡದೆಂದು ಶಿಸುಪಾಲ ಹರಟುವ ಆಕ್ಷೇಪವೂ ಒಳ್ಳೆಯ ಉದಾಹರಣೆ: "ದನುಜಾಂತಕನೆಂಬೀ ನಿ। ನ್ನ ನಚ್ಚುವೋದಂಕಂ ಎಲವೊ ಮುನ್ನೆ

ಕೃಷ್ಣಂ || ದನುಜಂ ಪುಟ್ಟದೆ ಸಂದುದು | ನಿನಗೀ ಪೆಸರೆನ್ನ ಮುಂದೆಯುಂ ಸಂದಪುದೇ || ಮಿಾನಾವೆ ಪಂದಿಯೆಂದೆನಿ | ತಾನುಂ ಕೆಟಿನಾಗಿ ಡೊಂಬವಿದ್ದೆಯ ನಾಡಲ್ || ನೀನಱುವೈ ಉಱಿದೆಇದಿರ್ಚಿದೊ | ಡೆ ಆಂ ಅಱಿವೆಂ ನಿನ್ನನಿಲ್ಲಿ ದೆಸೆವಲಿ ಗೆಯ್ಯಲ್ || " —ಪಂಪ.

ಆಮೇಲೆ ಕೊಂಕುನುಡಿ. ಇದರಲ್ಲಿ ಪದಗಳು ಪ್ರಕಟಿಸುವ ಮೇಲಣ ಅರ್ಥಕ್ಕಿಂತ ಸ್ಪಷ್ಟವಾಗಿ ಸೂಚಿತವಾಗುವ ಒಳಗಣ ಇನ್ನೊಂದು ಅರ್ಥಕ್ಕೇ ಪ್ರಾಮುಖ್ಯತೆ. ಮಾತನಾಡುವವನ ಇಚ್ಛೆ ಎರಡನೆಯ ಅರ್ಥವನ್ನು ಒತ್ತಿಹೇಳುವುದೇ. "ಅದು ಜಪಾನ್ ಚಿಮಣಿ" ಎಂದಾಗ ಜಪಾನ್ ದೇಶದಿಂದ ಬಂದದ್ದು ಎಂಬ ಅರ್ಥಕ್ಕಿಂತ ಬಹು ಬೇಗ ಒಡೆದುಹೋಗುವ ಹಗುರ ತಯಾರಿಕೆ ಎಂಬ ಖಚಿತಾರ್ಥ ಹೆಚ್ಚು ಗ್ರಾಹ್ಯವಾದ್ದು. "ಗಾಥಮ್ ಗ್ರಾಮದ ಬುದ್ಧಿವಂತರು" ಎಂದರೆ ದಡ್ಡರು ಎಂದು ತಾತ್ಪರ್ಯ. ಪೋಪ್ ಬರೆಯುತ್ತಾನೆ: "ರಾತ್ರಿ ಯಾಯಿತು; ಸಮಾರಂಭ ಮುಗಿಯಿತು. ಆದರೆ ಸೆಟ್ಲ್ ಕವಿಯ ಪದ್ಯದಲ್ಲಿ ಅದಕ್ಕೆ ಇನ್ನೊಂದು ದಿನ ಜೀವಮಾನ." ಇದರಲ್ಲಿ ಕುಕವಿ ಸೆಟ್ಲ್‌ನ ಲೇಖನ ಒಂದೇ ದಿವಸ ಬದುಕು ತ್ತದೆ ಎಂಬುದು ಪೋಪನ ಅಪಹಾಸ್ಯ. ಸೆಂಟ್‌ಪಾಲ್ ದೇವಾ ಲಯದ ಸುತ್ತ ಮರಹಾಸಿದ ಒಂದು ಚಿಕ್ಕ ಪಥ ಇರಬೇಕೆಂಬ ಸಲಹೆ ಬಂದಾಗ, ಸಿಡ್ನಿಸ್ಮಿತ್ ಹೇಳಿದ: "ಪ್ರಧಾನ ಪುರೋಹಿ ತನೂ ಇತರ ಪುರೋಹಿತರೂ ತಮ್ಮ ತಲೆಗಳನ್ನು ಒಟ್ಟು ಕೂಡಿಸಿದರೆ ಆ ಏರ್ಪಾಡು ಆದಹಾಗೆ." ಇದರಲ್ಲಿ ದೇವ ಸ್ಥಾನದ ನೌಕರರು ಒಟ್ಟಿಗೆ ಕಲೆತು ಸಾಧಕ ಬಾಧಕಗಳನ್ನು ವಿಚಾರಮಾಡಿದರೆ ಆ ಕೆಲಸ ನಡೆಯುತ್ತದೆ ಎಂಬುದಲ್ಲ

CC-0. Jangamwadi Math Collection, Varanasi. An eGangotri Initiative

ಮುಖ್ಯಾಭಿಪ್ರಾಯ, ದೇವಸ್ಥಾನದ ನೌಕರರ ತಲೆಯಲ್ಲಿ ಮಿದುಳಿಲ್ಲ ಮರ ತುಂಬಿದೆ ಎಂಬುದು. ಮಾರ್ಷಲನ " ಕ್ಲೀಟಸ್ ತನ್ನ ಏಳು ಮಂದಿ ಮಡದಿಯರ ಗೋರಿಗಳ ಮೇಲೆ ' ಇದು ಕ್ಲೀಟಸನ ಕೆಲಸ ' ಎಂದು ನಿರೂಪ ಬರೆಸಿದ. ಅದಕ್ಕಿಂತ ಮತ್ತಾವುದು ಸ್ಪಷ್ಟ?" ಎಂಬ ವಿಡಂಬನದಲ್ಲಿ, ಕ್ಲೀಟಸ್ ಮಡಿದ ಹೆಂಡತಿಯರಿಗೆ ವಿಶ್ವಾಸದ ಗುರುತಾಗಿ ಅಂದದ ಗೋರಿಗಳನ್ನು ಕಟ್ಟಿಸಿದ ಎಂದು ಭಾಸವಾದರೂ, ಏಳುಜನ ಮಹಿಳೆಯರು ಕ್ಲೀಟಸನ ಹಿಂಸೆಯನ್ನು ತಾಳಲಾರದೆ ಒಬ್ಬೊಬ್ಬರಾಗಿ ಪ್ರಾಣಬಿಟ್ಟರು ಎಂಬುದೇ ಸ್ಪಷ್ಟಾರ್ಥ. ಎರಡು ವಾಕ್ಯಗಳನ್ನು ಹತ್ತಿರ ಇಟ್ಟರೆ ಸಾಕು, ಕೆಲವು ವೇಳೆ ವಕ್ರೋಕ್ತಿ ಉದಯಿಸಿಬಿಡುತ್ತದೆ. " ಆ ಠರಾವು ಬಿದ್ದು ಹೋಯಿತು. ಶೀನಪ್ಪ ಅದರ ಪರವಾಗಿ ಮಾತನಾಡಿದರು." " ಆ ದೇಶದ ಸಿಪಾಯಿಗಳು ರಣರಂಗಕ್ಕೆ ಬಂದರು. ಹೇಸರ ಕತ್ತೆಗಳೂ ಬಂದುವು." " ನಾಲ್ಕೈದು ಉಲ್ಲಾಸಕರವಾದ ಕಾರ್ಯಕ್ರಮಗಳು ನೆರವೇರಿವೆ. ಈಗ ರಾಯರು ಭಾಷಣ ಮಾಡುತ್ತಾರೆ." ಸಂಸ್ಕೃತ ಸಾಹಿತ್ಯದ ಅನ್ಯೋಕ್ತಿ ಎಂಬ ಬಿಡಿಪದ್ಯ ಜಾತಿಯನ್ನು ಡೊಂಕುನುಡಿಯ ವಿಡಂಬನದಲ್ಲಿ ಸೇರಿಸಬಹುದು. ಒಂದು ಜೀವಂತ ಪ್ರಾಣಿಯನ್ನೊ ನಿರ್ಜೀವ ಪದಾರ್ಥವನ್ನೊ ಉದ್ದೇಶಿಸಿದಂತೆ ಮಾತನಾಡುವುದು ಅನ್ಯೋಕ್ತಿಯ ಸ್ವಭಾವ: ಆದರೆ ಅದು ನಿಜವಾಗಿ ಅನ್ವಯಿಸುವುದು ಮನುಷ್ಯನ ಯಾವುದೋ ಒಂದು ದೋಷಕ್ಕೆ. ಕತ್ತೆಯನ್ನು ಕುರಿತಂತೆ ಕವಿ ಹೇಳುತ್ತಾನೆ: " ಎಲೈ ರಾಸಭ, ವಸ್ತ್ರಭಾರವನ್ನು ಹೊರುತ್ತ ಕುಗ್ರಾಸವನ್ನು ನುಂಗುತ್ತ ಏಕೆ ವ್ಯಥೆಪಡುವೆ? ಅರಮನೆಯ ಲಾಯಕ್ಕೆ ಹೋಗಿ ಕಡಲೆಗುಗ್ಗರಿಯನ್ನು

CC-0. Jangamwadi Math Collection, Varanasi. An eGangotri Initiative

ವಿಲಾಸದಿಂದ ಭಕ್ಷಿಸು. ಬಾಲವಿರುವ ಪ್ರಾಣಿಯೆಲ್ಲವನ್ನೂ ಕುದುರೆಯೆಂದೇ ಅಲ್ಲಿನ ಅಧಿಕಾರಿಗಳು ಭಾವಿಸಿಕೊಳ್ಳುತ್ತಾರೆ; ಅವರು ಹೇಳಿದ್ದನ್ನೇ ಸತ್ಯವೆಂದು ರಾಜನೂ ತಿಳಿಯುತ್ತಾನೆ. ಇತರ ಜನ ತಮಗೇಕೆ ಆ ತಂಟೆಯೆಂದು ತಟಸ್ಥರಾಗಿದ್ದು ಬಿಡುತ್ತಾರೆ.'' ಇದರ ತಾತ್ಪರ್ಯ ಅಂಗೈ ಹುಣ್ಣಿನಂತೆ ವ್ಯಕ್ತ. ಇನ್ನೊಂದು ಅನ್ಯಾಪದೇಶದಲ್ಲಿ ದೊಡ್ಡವರಂತೆ ಕುಣಿದು ನಟಿಸುವವರನ್ನು ರತ್ನಖಚಿತವಾದ ಗೋಡೆಯಲ್ಲಿ ಪ್ರತಿಫಲಿತವಾಗಿರುವ ಒಂದು ನೆರಳುಗಿಳಿಯ ನೆಪದಲ್ಲಿ ಹಂಗಿಸಿದೆ: "ಓ, ಛಾಯಾಶುಕ! ಅಂತಃಪುರದ ಹೆಂಗಸಿನ ಕೈಯಲ್ಲಿರುವ ರಾಜಗಿಳಿ ಚಲಿಸಿದಾಗ ನೀನೂ ಚಲಿಸಿದೆ; ನಿಂತಾಗ ನಿಂತೆ; ಮೇಲೆ ನೋಡಿದರೆ ಮೇಲೆ ನೋಡಿದೆ; ಅದರ ವಿಶಿಷ್ಟ ಆಚರಣೆಯನ್ನೂ ಅಂಗೀಕರಿಸಿದೆ. ಆಗೊ, ರಾಜಗಿಳಿ ಕರ್ಣಾಮೃತವಾದ ಮಾತನ್ನು ಆಡಲಾರಂಭಿಸಿತು: ತಾವೇಕೆ ಸುಮ್ಮನೆ ಇರೋಣಾಗಿದೆ?" ಮತ್ತೊಂದು ಅನ್ಯಾಪದೇಶ ಬಿದುರನ್ನು ಬಯ್ಯುವ ಮರೆಯಲ್ಲಿ ರಸಿಕತೆ ಇಲ್ಲದ ಸಾಮಾಜಿಕರನ್ನು ವಿಡಂಬನ ಗೈದಿದೆ: "ಎಲೈ ಬಿದುರೇ, ಮಲಯ ಮಾರುತ ಬೀಸುವಾಗ ನೀನು ತಲೆಯನ್ನು ತೂಗಾಡುವೆ. ಅದರಿಂದ ನೀನು ಶ್ಲಾಘ್ಯನೆ? ಇಲ್ಲ; ನೀನು ನೀರಸ ಹೃದಯ: ಮಂದ ಮಾರುತದ ಗುಣಲೇಶವನ್ನೂ ನೀನರಿಯೆ. ತಲೆಯನ್ನು ಅಲ್ಲಾಡಿಸುತ್ತ ಸುಮ್ಮನೆ ಅಭಿನಯಿಸುವೆ, ಅಷ್ಟೆ!''

ಕಟಕಿಯೆನ್ನುವುದು ವಿಶೇಷ ವೈಖರಿಯ ಸಾಹಿತ್ಯ ಯುಕ್ತಿ. ಅದರಲ್ಲಿಯೂ ಕೊಂಕುನುಡಿಯಹಾಗೆ ಮೇಲಣ ಅರ್ಥ ಒಂದು, ಒಳಗಣ ಅರ್ಥ ಇನ್ನೊಂದು. ಆದರೆ ಕೊಂಕುನುಡಿಯಲ್ಲಿ ಮೊದಲಿನ ಅರ್ಥ ಅಳಿಸಿಹೋಗಿ ಒಂದೇ

CC-0. Jangamwadi Math Collection, Varanasi. An eGangotri Initiative

ಅರ್ಥ ಉಳಿಯುತ್ತದೆ. ಕಟಕಿಯಲ್ಲಿ ಎರಡು ಅರ್ಥಗಳೂ ಒಟ್ಟಿಗೆ ಪ್ರಕಾಶಿಸುತ್ತ ತಮ್ಮ ವೈಷಮ್ಯದಿಂದ ಹೆಚ್ಚಿನ ಪರಿಣಾಮವನ್ನು ಹುಟ್ಟಿಸುತ್ತವೆ. ಕೆಲವು ಸಾರಿ ಕಟಕಿ ಯಲ್ಲಿ ಎರಡೇ ಅಲ್ಲ, ಮೂರು, ಕೊನೆಗೆ ನಾಲ್ಕು ಅರ್ಥ ಗಳು ಅಡಕವಾಗಿರುತ್ತವೆ. ಧ್ವನಿ ಅಥವಾ ವ್ಯಂಗ್ಯ ಕಟ ಕಿಯ ಪ್ರಾಣ. ವ್ಯಂಗ್ಯೋಕ್ತಿಯಿಂದ ಗ್ರಂಥ ಅತ್ಯುತ್ಕೃಷ್ಟ ವಾಗುವುದಕ್ಕೆ ಕೆಲವು ನಿದರ್ಶನಗಳುಂಟು; ಪುರಾತನ ಗ್ರೀಕ್ ನಾಟಕಗಳಲ್ಲಿ ಬಹು ಸ್ತುತ್ಯವಾದುದು ಸಾಫೊಕ್ಲೀಸನ "ಈಡಿಪಸ್"; ಅದು ಮೊದಲಿಂದ ಕಡೆಯುವರೆಗೂ ವ್ಯಂಗ್ಯೋ ಕ್ತಿಯಲ್ಲಿ ಅದ್ದಿ ತೆಗೆದದ್ದು. ಕಟಕಿ ನುಡಿಯಲ್ಲಿ ಮಾತ್ರ ವಲ್ಲ, ಪಾತ್ರ ಸಂಗತಿ ಸನ್ನಿವೇಶಗಳಲ್ಲಿಯೂ ಇರಬಹುದು; ಆದ್ದರಿಂದ ಅದು ಚಿತ್ರವನ್ನು ಸೂರೆಗೈಯುವ ಬಹು ಉಪ ಯುಕ್ತವಾದ ಕಾವ್ಯಾಲಂಕಾರ. "ಅಯ್ಯೋ, ನೀನೇ ಅಲ್ಲವೇ ನಪ್ಪ, ಧರ್ಮರಾಯ!" "ಪುಣ್ಯಾತ್ಮಗಿತ್ತಿ, ಅವಳ ಮುಂದೆ ಸಾವಿತ್ರಿ ಏತಕ್ಕೆ!" ಮುಂತಾದ ದಿನಚರಿ ಮಾತುಗಳಿಂದ ಹಿಡಿದು, ರನ್ನನ "ಕುರುಧರೆಯೊಳ್ ಕುರುಪತಿಯಂ ಅಜಿ ಸಿದಂ ಪವನಸುತಂ!" ಕುಮಾರವ್ಯಾಸ ದ್ರೌಪದಿಯಿಂದ ಆಡಿಸುವ "ಪತಿಗಳೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು!" ಎಂಬ ಮಹಾವಾಕ್ಯಗಳವರೆಗೂ ಕಟಕಿಯ ವ್ಯಾಪ್ತಿ ಹರಡಿದೆ. ನಮಗೆ ವಿಡಂಬನವಾಗುವ ಕಟಕಿ ಮಾತ್ರ ಪ್ರಕೃತ. ಜೈಮಿನಿ ಭಾರತದಲ್ಲಿ ಸೀತಾದೇವಿಯ "ಏಕೆ ನಿಂದಿಹೆ ಪೋಗು ಸೌಮಿತ್ರಿ ಕೋಪಿಸನೆ ಕಾಕುತ್ಸ್ಥಂ ಇಲ್ಲಿ ತಳುವಿದೊಡೆ ನೆರ ವುಂಟು ತನಗೀ ಕಾಡೊಳುಗ್ರಜಂತುಗಳಲ್ಲಿ ರಘುನಾಥನೇ ಕಾಕಿಯಾಗಿರ್ಪನು;" "ಕಡೆಗೆ ಕರುಣಾಳು ರಾಘವನಲ್ಲಿ

CC-0. Jangamwadi Math Collection, Varanasi. An eGangotri Initiative

ತಪ್ಪಿಲ್ಲ ;" ಎಂಬ ದುಃಖವಚನಗಳಲ್ಲಿ ಅನುದ್ದಿಷ್ಟವಾದ ವ್ಯಂಗ್ಯವನ್ನು ಲಕ್ಷಿಸಿ. ಹಾಗೆಯೇ ಕವಿಯ ಈ ಹೇಳಿಕೆಯನ್ನೂ ಭಾವಿಸಿ: ಲಕ್ಷ್ಮಣ "ರಾಮನ ಸೇವೆ ಸಂಮುದೇ ತನಗೆಂದು ರೋದಿಸಿದನು." ಮಾರ್ಷಲ್ ಕವಿಯ ಒಂದು ಸಣ್ಣ ಪದ್ಯ: "ಟೈಬರ್ ದಡದಲ್ಲಿದ್ದ ನನ್ನ ವಸಂತಗೃಹದಲ್ಲಿ ನೀನು ತಿಂಗಳುಗಟ್ಟಲೆ ಅತಿಥಿಯಾಗಿದ್ದೆ, ಮ್ಯಾಥೊ. ಈಗ ನೀನು ಅದನ್ನು ಕೊಂಡುಕೊಂಡೆ. ನಾನು ಮೋಸಗಾರ, ಮ್ಯಾಥೊ, ನಿನ್ನ ಮನೆಯನ್ನು ನಿನಗೇ ಮಾರಿಬಿಟ್ಟಿರುವೆ!" ಅವನದೇ ಇನ್ನೊಂದು ಪದ್ಯ: "ಸಾಕುವವನ ಅಂಗೈ ನೆಕ್ಕುತ್ತಿದ್ದ ಹೆಣ್ಣುಹುಲಿ ಭಯಂಕರ ಸಿಂಹವೊಂದರ ಮೇಲೆ ಬಿದ್ದು ಖಂಡ ಖಂಡವನ್ನು ಕಿತ್ತು ಕೊಂದುಬಿಟ್ಟಿತು. ಇಂಥಾ ಘಟನೆಯನ್ನು ಹಿಂದೆ ಕೇಳಿದವರಾರು, ಕಂಡವರಾರು? ತನ್ನ ಮನೆಯೇ ಆದ ಹರ್ಕಾನ ಕಾಡಿನಲ್ಲಿ ಸ್ವತಂತ್ರವಾಗಿದ್ದಾಗ ಆ ಹುಲಿ ಇಂಥಾ ಧೈರ್ಯವನ್ನು ಎಂದೂ ಮಾಡಿರಲಿಲ್ಲ. ಏತರಿಂದ ಅದಕ್ಕೆ ಈಗ ಅಷ್ಟೊಂದು ಕ್ರೌರ್ಯ? ಅದು ನಮ್ಮ ನಡುವೆ ವಾಸಿಸುತ್ತಿದೆ." ಚಾಸರ್ ಕವಿಯಲ್ಲಿ ಕ್ರೈಸ್ತ ವಿರಕ್ತ ಮಠವೊಂದರ ಒಬ್ಬ ಯತಿಯ ವರ್ಣನೆ ಸೊಗಸಾಗಿದೆ: "ಆ ಯಾತ್ರಿಕ ಗೋಷ್ಠಿಯಲ್ಲಿ ಒಬ್ಬ ಸಾಧುವಿದ್ದ. ಮೇಲು ತರಹದ ಮನುಷ್ಯ ಆತ; ಬೇಟೆಯೆಂದರೆ ಅವನಿಗೆ ಅಧಿಕ ಆಸಕ್ತಿ; ಕುದುರೆ ಸವಾರಿಯಲ್ಲಿ ಅತ್ಯಂತ ಪ್ರವೀಣ; ಒಳ್ಳೆಯ ಪೌರುಷದ ಗಂಡಸು. ಸನ್ಯಾಸಿ ಮಠದ ಮಹಂತನಾಗಲು ಅತಿ ಯೋಗ್ಯ: ಏತಕ್ಕೆಂದರೆ ಅವನ ಲಾಯದಲ್ಲಿ ಹತ್ತಾರು ಚಲೋ ಕುದುರೆಗಳಿದ್ದುವು. ಅಶ್ವಾರೂಢನಾಗಿ ಅವನು ಹೊರಟಾಗ ಕಡಿ

CC-0. Jangamwadi Math Collection, Varanasi. An eGangotri Initiative

ವಾಣದ ಗಂಟೆಗಳ ಇಂಪಾದ ಸ್ವರವನ್ನು ಗುಡಿಯ ಗಂಟೆ ಗಳ ಸದ್ದಿನಂತೆ ಎಷ್ಟೋ ದೂರ ಆಲಿಸಬಹುದಾಗಿತ್ತು. ‘ ಶಿಕಾರಿ ಇಷ್ಟ ಪದ್ಧತಿ ನಷ್ಟ’ ‘ ಮಠವನ್ನು ಬಿಟ್ಟ ಮುಸಿಯೂ ಒಂದೆ ನೀರಿನಿಂದ ಹೊರಬಿದ್ದ ಮೀನೂ ಒಂದೆ’ ಮೊದಲಾದ ಸೂತ್ರಗಳನ್ನು ಕಂಡರೆ ಅವನಿಗೆ ತೀರ ಅಸಡ್ಡೆ. ಅವನ ಅಭಿಮತ ಸರಿ, ನನ್ನ ದೃಷ್ಟಿಯಲ್ಲಿ. ಸಣ್ಣ ಕೋಣೆಯಲ್ಲಿ ಕುಳಿತು, ಹಗಲು ರಾತ್ರಿ ಓದಿ ಓದಿ, ಮರುಳು ಕೂಡು ಭಟ್ಟನಾದರೆ ಏನು ಬಂತು? ಅಥವಾ ಸಂತ ಆಸ್ಟಿನ್ ಅಪ್ಪಣೆಮಾಡಿದಂತೆ ಯಾವಾಗಲೂ ಕಾಯಕ ದುಡಿಯು ತ್ತಿದ್ದರೆ ಪ್ರಪಂಚಕ್ಕೆ ಯಾವ ಪ್ರಯೋಜನ? ಕೆಲಸವೆಲ್ಲ ವನ್ನೂ ಬೇಕಾದರೆ ಆಸ್ಟಿನ್ ತನಗಿರಿಸಿಕೊಳ್ಳಲಿ!” ಹೀಗೆ ಕಟಕಿ ತಿಳಿಯಾದ ಪರಿಹಾಸಕ್ಕೂ ಒದಗುತ್ತದೆ, ರೋಷದ ಬಿರುಹಾಸ್ಯಕ್ಕೂ ಒದಗುತ್ತದೆ.

ಆದರೆ ಕಠಿಣವಾದ ಖಂಡನೆಗೂ ರೌದ್ರ ವಿಡಂಬ ನಕ್ಕೂ ಸಮಂಜಸವಾದುದು ಮೂದಲಿಕೆ. ಅದು ನಿಷ್ಠ ಯವಾಗಿ ಮರ್ಮಭೇದಕವಾದ ಅವಹೇಳನ. ನಿಕಾರ್ಕ ಸನ ಈ ಪದ್ಯದಲ್ಲಿ ಸೂಚಿತವಾಗುವ ಅವಮನ್ನಣೆಯನ್ನು ಗಮನಿಸಿ: “ ಗೂಜೆ ಘೂಗುಟ್ಟಿದರೆ ಜನರು ಸಾಯುತ್ತಾರೆ. ಡಿಕ್ ಹಾಡಿದರೆ ಗೂಜೆ ಕೂಡ ಸಾಯುತ್ತೆ.” ಮಾರ್ಷಲ್ “ ನಿನ್ನ ಸ್ನಾನದ ನೀರು ಮುಟ್ಟಲಾಗದಷ್ಟು ಕುದಿಯುತ್ತಿದ್ದರೆ ಈ ಲಾಕ್ಷಣಿಕನನ್ನು ಅದರಲ್ಲಿ ಅದ್ದು, ಸುಡುವನೀರು ಮಂಜಿ ನಂತೆ ಶೀತಳವಾಗುತ್ತೆ!” ಎಂದು ರಸಿಕತೆಯ ಕಾವನ್ನು ಕಂಡ ರಿಯದ ಒಣ ಓದುಗರನ್ನು ತುಚ್ಛೀಕರಿಸಿದ್ದಾನೆ. ಬೈರನ್ ಒಂದು ಕಡೆ ಬರೆಯುತ್ತಾನೆ: “ನನ್ನ ಕವಿತೆಯನ್ನು ಸ್ಕಾಚ್

CC-0. Jangamwadi Math Collection, Varanasi. An eGangotri Initiative

ವಿಮರ್ಶಕರು ಆಗಲೆ ಕಂಡಾಬಟ್ಟೆ ಛೀಮಾರಿ ಮಾಡಿದ್ದಾರೆ; ಇನ್ನೂ ಒಂದು ಅತ್ಯುಗ್ರವಾದ ಪ್ರಚಂಡ ವಿಮರ್ಶೆಯನ್ನು ರಚಿಸುತ್ತಿದ್ದಾರಂತೆ. ಅಯ್ಯೋ, ಅದು ಪ್ರಕಟವಾಗುವ ಹೊತ್ತಿಗೆ ನಾನು ಬಾಸ್ಫೊರಸ್ಸಿನಿಂದಾಚೆ ಪಯಣಮಾಡಿರು ತ್ತೇನಲ್ಲ! ಒಳ್ಳೆಯದು, ಪರ್ಷಿಯದಲ್ಲಿ ನಾನು ಅವರ ಪ್ರಬಂಧ ವನ್ನು ನನ್ನ ಹೊಗೆಸೊಪ್ಪಿನ ಚಿಲುಮೆಯನ್ನು ಹೊತ್ತಿಸುವು ದಕ್ಕೆ ಉಪಯೋಗಿಸುತ್ತೇನೆ." ಕೀಚಕನಿಂದ ಅವಮಾನಿತ ಳಾದ ದ್ರೌಪದಿ ಏಕಾಂತದಲ್ಲಿ ಭೀಮನ ಬಳಿಗೆ ಬಂದು, "ನಿಗಡ ಬಿರುದನು ಬಿಟ್ಟು ಬಡಹೋರಿಗಳು ಪಾಂಡವರಂತೆ ಮೂಗುರ್ಚಿ ಗಳದಿನ್ನಾರುಂಟೆನುತ ಮರುಗಿದಳು ನಳಿನಾಕ್ಷಿ॥ ತೋಳ ಹೊರೆ ನಿಮಗೇಕೆ ಭೂಮೀಪಾಲ ವಂಶದೊಳುದಿಸಲೇತಕೆ ಕೂಳು ಗೇಡಿಂಗೊಡಲ ಹೊರುವಿರಿಯೆಂದಳಿಂದುಮುಖಿ॥" "ಇನ್ನು ಹುಟ್ಟದೆಯಿರಲಿ ನಾರಿಯರು ಎನ್ನವೊಲು ಭಂಗಿತರು" "ಭೀಮ ಕೊಟ್ಟೈ ತನಗೆ ಸಾವಿನ ನೇಮವನು" "ಕಾಮಿ ನಿಯ ಕೇಳಿಯಲಿ ನೆನೆವುದು" ಎಂದು ಚುಚ್ಚಿ ಚುಚ್ಚಿ, ಭೀಮನನ್ನು ಕೀಚಕವಧೆಗೆ ರೇಗಿಸುವಳು. ರಾಘವಾಂಕನ ಕಾವ್ಯದಲ್ಲಿ ಚಂಡಾಲ ಕನ್ಯೆಯರು ಹರಿಶ್ಚಂದ್ರನನ್ನು ಮೂದ ಲಿಸುತ್ತಾರೆ: "ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ ವಾ। ತಾಡಿ ನುಡಿಸಿದ ಬಾಯ್ಗೆ ಹೊಲೆಯಿಲ್ಲ ರೂಪ ನೆರೆ। ನೋಡಿದ ವಿಲೋಚನಕೆ ಹೊಲೆಯಿಲ್ಲ ಮೆಯ್ ಮುಡಿಗಳಿಂ ಸುಳಿವ ತಂಗಾಳಿಯಿಂ॥ ತೀಡುವ ಸುಗಂಧಮಂ ವಾಸಿ ಸಿದ ನಾಸಿಕಕೆ। ನಾಡೆ ಹೊಲೆಯಿಲ್ಲ ಸೋಂಕಿಂಗೆ ಹೊಲೆ ಯುಂಟಾಯ್ತೆ। ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕ ಧಮ ವೊಂದಧಿಕವೇ ಎಂದರು!" ಬರ್ನಾರ್ಡ್ ಷಾ ಮೊದಲು

CC-0. Jangamwadi Math Collection, Varanasi. An eGangotri Initiative

ಜನತೆಯಲ್ಲಿ ಪ್ರಖ್ಯಾತಿಪಡೆದಾಗ ಪ್ರಸಿದ್ಧ ನಟಿಯೊಬ್ಬಳು ಅವನಿಗೆ ಒಂದು ಕಾಗದ ಬರೆದಳಂತೆ: "ನಾವಿಬ್ಬರೂ ದಾಂಪತ್ಯಕ್ಕೆ ಯೋಗ್ಯರು: ಮದುವೆಯಾಗೋಣ. ನಮ್ಮ ಶಿಶುವಿಗೆ ನಿನ್ನ ಬುದ್ಧಿಯೂ ನನ್ನ ರೂಪೂ ಬರುತ್ತದೆ." ಆ ಆಹ್ವಾನಕ್ಕೆ ಷಾ ಉತ್ತರ ಕಳುಹಿದ: "ನಿನ್ನ ಸೂಚನೆಯನ್ನು ಮನ್ನಿಸಬಹುದಾಗಿತ್ತು; ಆದರೆ ನನಗೆ ಒಂದು ಶಂಕೆಯಿರುವುದರಿಂದ ಅದು ಆಗದು: ನಮ್ಮಿಂದ ಜನಿಸುವ ಮಗುವಿಗೆ ನಿನ್ನ ಬುದ್ಧಿಯೂ ನನ್ನ ರೂಪೂ ದತ್ತವಾದೀತೋ ಏನೋ!" ಹೀಗೆ ಇದಿರಿಗೇ ಮುಖಮುರಿಯುವ ವಿಡಂಬನಕ್ಕೆ ಮೂದಲಿಕೆ ಯುಕ್ತ. "ಸ್ಯಾರ್‌ಕ್ಯಸ್ಮ್" ಎಂಬ ಇಂಗ್ಲಿಷ್ ಪದಕ್ಕೆ ಮಾಂಸಖಂಡವನ್ನು ಬಗಿದು ಕೀಳುವುದು ಎಂದು ಮೂಲದ ಅರ್ಥ. ಕರುಳು ಚುಚ್ಚುವ ಅಪಹಾಸ್ಯದಲ್ಲಿ ವಾಲ್ಟೇರ್ ಅತ್ಯಂತ ನಿಸ್ಸೀಮ. "ಅವನ ಶರೀರದಲ್ಲಿ ಸೈತಾನ ಹೊಕ್ಕಿದ್ದ" "ನರಕ ತನ್ನ ಸಕಲ ಹಿಂಸ್ರ ಶಕ್ತಿಗಳನ್ನೂ ಅವನಿಗೆ ಕೊಟ್ಟಿತ್ತು" ಎಂದು ಅವನನ್ನು ಅಭಿವರ್ಣಿಸಿದ್ದಾರೆ. ಒಂದುಸಾರಿ ರಾಜನ ಅಶ್ವಾಲಯದ ಕುದುರೆಗಳಲ್ಲಿ ಅರ್ಧವನ್ನು ಮಾರಿದರೆಂಬ ಸುದ್ದಿ ಬರಲು, ವಾಲ್ಟೇರು ರಾಜನ ಆಸ್ಥಾನದಲ್ಲಿದ್ದ ಕತ್ತೆಗಳಲ್ಲಿ ಅರ್ಧವನ್ನು ಮಾರಿದ್ದರೆ ಹೆಚ್ಚು ಜಾಣ್ಮೆಯಾಗುತ್ತಿತ್ತೆಂದು ಅಂದುಬಿಟ್ಟ! ಮೊದಲುಸಾರಿ ಸೆರೆಮನೆಗೆ ಹೋಗಿ ಅಲ್ಲಿಂದ ಬಿಡುಗಡೆ ಹೊಂದಿದಾಗ ಅವನಿಗೆ ಒಂದು ವಾರ್ಷಿಕ ವೇತನವನ್ನು ರಾಜಪ್ರತಿನಿಧಿ ದಯಪಾಲಿಸಿದ: ತನಗೆ ಅನ್ನವನ್ನು ಒದಗಿಸಿಕೊಟ್ಟುದಕ್ಕಾಗಿ ಆಶ್ರಯದಾತನನ್ನು ವಂದಿಸಿ, ಇನ್ನುಮುಂದೆ ತನ್ನ ವಾಸದ ಮನೆಯನ್ನು ತಾನೇ ಗೊತ್ತುಮಾಡಿಕೊಳ್ಳುವುದಕ್ಕೆ ಅನುಮತಿ ಬೇಕೆಂದು ವಾಲ್ಟೇರು ಬರೆದ. ಅವನ ಕಾವ್ಯವೊಂದ

CC-0. Jangamwadi Math Collection, Varanasi. An eGangotri Initiative

ರಲ್ಲಿ ಒಬ್ಬ ಕಾಡುಮನುಷ್ಯನನ್ನು ಫ್ರಾನ್ಸಿಗೆ ಕರೆತಂದು ರೋಮನ್ ಕ್ಯಾಥೊಲಿಕ್ ಮತಕ್ಕೆ ಅವನನ್ನು ಸೇರಿಸುತ್ತಾರೆ. ತಪ್ಪುಗಳನ್ನು ಆಗಾಗ ಜೋಯಿಸನಿಗೆ ನಿವೇದಿಸಿ ಕರ್ಮಕ್ಷಯ ಮಾಡಿಕೊಳ್ಳ ಬೇಕೆಂಬುದು ಆ ಮತದ ಒಂದು ಸಂಪ್ರದಾಯ. ಕಾಡುಮನುಷ್ಯ "ಬೈಬಲ್ಲಿನಲ್ಲಿ ಅದನ್ನು ಎಲ್ಲಿ ವಿಧಿಸಿದೆ, ತೋರಿಸಿ?" ಎಂದು ಕೇಳು ತ್ತಾನೆ. ಒಂದು ಕಡೆ 'ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆಮಾಡಿ ಕೊಳ್ಳಿ' ಎಂದಿದೆ. ಸರಿ, ಅವನು ಅಂತೆಯೇ ಆಚರಿಸಿ, ಅನಂತರ ಆ ಜೋಯಿಸನನ್ನು ಪೀಠದಿಂದ ಕೆಳಕ್ಕೆ ಎಳೆದು ತಾನು ಅದರಲ್ಲಿ ಕುಳಿತುಕೊಂಡು, "ಎಲ್ಲಿ, ನಿನ್ನ ದುಷ್ಕೃತ್ಯಗಳನ್ನು ಈಗ ನನ್ನ ಮುಂದೆ ಒಪ್ಪಿಸು!" ಎಂದು ಮುಷ್ಕರ ಹಿಡಿಯುತ್ತಾನೆ. ಏಕಾಧಿ ಪತ್ಯ ಒಳ್ಳೆಯದೊ ಪ್ರಜಾಧಿಪತ್ಯ ಒಳ್ಳೆಯದೊ ಎಂಬ ಚರ್ಚೆಗೆ ವಾಲ್ಟೇರ್ ಹೇಳಿದ: "ಮಾರ್ಕಸ್ ಆರಿಲಿಯಸ್ಸನಂಥಾ ದೊರೆ ಯಾದರೆ ಏಕಾಧಿಪತ್ಯ ಒಳ್ಳೆಯದು. ಇಲ್ಲದಿದ್ದರೆ ಜನಗಳನ್ನು ಒಂದು ಸಿಂಹ ತಿಂದರೇನು ನೂರು ಹೆಗ್ಗಣ ತಿಂದರೇನು?" ಅವನು ಮೃತ್ಯುಶಯ್ಯೆಯಲ್ಲಿದ್ದಾಗ ಒಬ್ಬ ಕ್ಯಾಥೊಲಿಕ್ ಭಟ್ಟ ಅವನನ್ನು ಪರಿಶುದ್ಧಿಗೈಯಬೇಕೆಂದು ಅವನಲ್ಲಿಗೆ ಹೋದ. "ಎಲ್ಲಿಂದ ತಾವು ದಯಮಾಡಿಸಿದ್ದು?" ಎಂದು ವಾಲ್ಟೇರ್ ಕೇಳಲು, ಅವನು ಗರ್ವ ದಿಂದ "ದೇವರಿಂದ" ಎಂದು ಹೇಳಿದ. "ಹಾಗಾದರೆ ತಮ್ಮನ್ನು ರಾಯಭಾರಿಯಾಗಿ ನೇಮಿಸಿರುವ ಹುಕುಮನ್ನು ತೋರಿಸಿ!" ಎಂದು ವಾಲ್ಟೇರ್ ತನಿಖೆಮಾಡಲು ಭಟ್ಟ ಬೇಗ ಕಾಲಿಗೆ ಬುದ್ಧಿ ಹೇಳಿದ. ಅಂತು ವಾಲ್ಟೇರನ ಮಾರ್ಮಿಕ ಹಾಸ್ಯಕ್ಕಿಂತ ಬಲಿಷ್ಠ ವಾದ ಆಯುಧ ಮಾನವಬುದ್ಧಿಗೆ ಬಂದಿಲ್ಲವೆಂಬುದು ಸತ್ಯ.

ವಿಡಂಬನ ವಲಯದ ಹತ್ತು ಪ್ರದೇಶಗಳಲ್ಲಿ ಸಂಚರಿಸಿ, ಅವುಗಳ ಭೂಗುಣವನ್ನು ವಿಶದವಾಗಿ ವಿಮರ್ಶಿಸಿದ್ದಾಯ್ತು.

CC-0. Jangamwadi Math Collection, Varanasi. An eGangotri Initiative

೪. ವಿಡಂಬನಕಾರ

ಯಾವ ಗದೆಯನ್ನು ಬೇಕಾದರೂ ತಿರುಗಿಸಲಿ, ಯಾವ ಡಂಭದ ಮೇಲಾದರೂ ಕಾಳಗವಾಡಲಿ, ವಿಡಂಬನಕಾರನಲ್ಲಿ ಕೆಲವು ಸದ್ಗುಣಗಳು ಇರಬೇಕು, ಕೆಲವು ದುರ್ಗುಣಗಳು ಇರಬಾರದು. ಅಂದರೆ ಒಪ್ಪಾದ ಯೋಗ್ಯತೆ ಅವನಿಗೆ ಅಗತ್ಯ. ವಿಡಂಬನದ ಕರ್ತವ್ಯ ದೋಷಾರೋಪಣೆ. ಹೊಗಳಿ ಒಳ್ಳೆಯವನೆನ್ನಿಸಿಕೊಳ್ಳುವುದು ಸುಲಭ; ಬಯ್ದು ಮೆಚ್ಚಿಕೆಯನ್ನು ಸಂಪಾದಿಸುವುದು ಕಷ್ಟ. ಸಮಾಜ ವಿಮರ್ಶಕರನ್ನು ಮೂರು ಪಂಗಡಗಳಾಗಿ ವಿಭಾಗಿಸಬಹುದು. ಎಲ್ಲದರಲ್ಲಿಯೂ ಚೆಲುವನ್ನೇ ನೋಡುತ್ತ, ಎಲ್ಲರಿಗೂ ಪ್ರಿಯವಾಗುವ ಕೋಮಲ ದೃಷ್ಟಿಯವರು ಕೆಲವು ಮಂದಿ; ಅವರು ಧರ್ಮರಾಯನ ಸಾತ್ವಿಕ ಗೋತ್ರಕ್ಕೆ ಸೇರಿದವರು. ಇನ್ನು ಕೆಲವರು ಕೊರತೆ ಕಲ್ಮಷಗಳನ್ನು ಕಂಡರೂ ಅವನ್ನು ಮನ್ನಿಸಿ, ಹಿಂದಿಟ್ಟು, ಶಿಷ್ಟ ಲಕ್ಷಣಗಳನ್ನೇ ಮುಂದಕ್ಕೆ ಹಿಡಿಯುವರು; ಅವರದು ಒಂದು ವಿಧದ ಸಮದೃಷ್ಟಿ. ಮತ್ತೆ ಕೆಲವರಿಗೆ ನಿಷ್ಠುರ ದೃಷ್ಟಿ: ಅವರು ತಪ್ಪುಗಳನ್ನು ನಿರೀಕ್ಷಿಸುವರು; ಅವನ್ನು ನಿರಾಕರಿಸಲು ಎಂದಿಗೂ ಸಮ್ಮತಿಸರು. ಅವನ್ನು ಮೇಲಕ್ಕೆತ್ತಿ, ನೋಟಕರಿಗೆ ತೋರಿಸಿ, ಅವನ್ನು ಅಲ್ಲಗಳೆಯುವುದೇ ಅವರ ಭಾರ. ಪ್ರಮಾದಗಳನ್ನು ತುಳಿಯದೆ ತಾತ್ಸಾರ ಮಾಡಿದರೆ ಅವುಗಳಿಂದ ಹಾನಿಯೆಂದು ಅವರಿಗೆ ಅಂಜಿಕೆ. ಇಂಥಾ ರಾಜಸ ಕುಲದವರೇ ವಿಡಂಬನಕಾರರು. ಅವರ ಬೇಸಾಯ ತಾನಾಗಿಯೇ ಹಿತವಾದ ಕೆಲಸವಲ್ಲ. ಅಣಕಿಸುವುದೇ ತನ್ನ ಧರ್ಮವೆಂದು ಹೇಳಿ

CC-0. Jangamwadi Math Collection, Varanasi. An eGangotri Initiative

ಕೊಳ್ಳುವವನನ್ನು ಹತ್ತಿರ ಕರೆಯುವವರಾರು ? ದ್ರೋಹೈಕ ವೃಕ್ಷ; ನರದ್ವೇಷಿ; ಹೂಗಣ್ಣ; ಪುತ್ತಿನಾಲಗೆಯ ಮೂದೇವಿ; ಅಸೂಯಾ ಕ್ರಿಮಿ; ಕೋಳಚೆಯಲ್ಲಿ ಹೊರ ಳಾಡುವ ಹುಳು; ಹಸುರಿನಲ್ಲಿ ಹುದುಗಿಕೊಂಡು ಕಾಲನ್ನು ಕಚ್ಚುವ ಹಾವು;—ಹೀಗೆ ಮನಬಂದಂತೆ ಅವನನ್ನು ಮಾತಿನಲ್ಲಿ ದಂಡಿಸಿ ಹೊರಕ್ಕೆ ದಬ್ಬಲು ಯತ್ನಿಸುವವರೇ ಹೆಚ್ಚು. ಆದ್ದರಿಂದ ಲೋಕ ಮೆಚ್ಚುವಂತೆ ವಿಡಂಬನವನ್ನು ನಡೆಸಲು ವಿಶೇಷ. ಅರ್ಹತೆ ಅತ್ಯಗತ್ಯ. ವಿಡಂಬನಕ್ಕೆ ಪಕ್ಕಾ ದವರೇ ಭೇಷೆನ್ನುವಂತೆ ಕಾವ್ಯರಚನೆ ಮಾಡುವುದು ವಿಡಂಬನ ಕಾರನ ಹಿರಿಯ ಹೆಮ್ಮೆ, ಕಡೆಯ ಮರ್ಯಾದೆ.

ತನ್ನ ವೃತ್ತಿಯ ಘನತೆಯನ್ನೂ ಜವಾಬ್ದಾರಿಯನ್ನೂ ಆಗು ಹೋಗುಗಳನ್ನೂ ವಿಡಂಬನಕಾರ ಚೆನ್ನಾಗಿ ಅರಿತಿರ ಬೇಕು. ಹೃದಯವನ್ನು ಗುಡಿಸಿ, ಸಾರಿಸಿ, ಚೊಕ್ಕಟ ಶುಭ್ರವಾಗಿಟ್ಟುಕೊಳ್ಳುವುದು ಅವನ ನಿತ್ಯಕರ್ತವ್ಯ. ರಾಗಾ ತಿಶಯಗಳ ಮೇಲಣ ಹತೋಟಿ, ಎಂದರೆ ಆತ್ಮಶಿಕ್ಷಣ, ಅವನಿಗೆ ಆವಶ್ಯಕ. ಅವನ ಕಾಲಿಗೆ ಸಂಕಲೆಯಾಗಿ ತೊಡರಿ ಕೊಳ್ಳುವ ಚಿತ್ತವೃತ್ತಿಗಳಲ್ಲಿ ನಾಲ್ಕು ಪ್ರಬಲವಾದುವು; ಅವನ್ನು ಮುರಿದು ಕಿತ್ತೊಗೆದಲ್ಲಿ ಅವನು ಮುಂದಕ್ಕೆ ಸರಿ ಯಲು ಸಾಧ್ಯ. (೧) ಕ್ರೌರ್ಯವೆಂಬುದು ಸರ್ವಥಾ ಹೊಲ್ಲ. ಅದರಿಂದ ಜನರಿಗೆ ಉಪದ್ರವ, ಕವಿಗೆ ಅಪಕೀರ್ತಿಯೇ ಫಲ. ಅಬ್ಬಿಯಾನಸನ ಈ ಪದ್ಯವನ್ನು ಕೇಳಿ: "ನಿನ್ನ ಶವದ ಮೇಲೆ, ನಿಯಾರ್ಕಸ್, ಮಣ್ಣನ್ನು ಹಗುರವಾಗಿ ಚೆಲ್ಲಲಿ; ನಾಯಿನರಿಗಳಿಗೆ ಆಹಾರ ಹೆಚ್ಚು ಸುಲಭವಾಗಿ ಸಿಕ್ಕುತ್ತೆ." ವಾಗ್ಬಲವನ್ನು ಶಾರದೆ ದಯಪಾಲಿಸಿದ್ದಾಳೆಂದು ಅದನ್ನು

Jangamwadi Math, VARANASI
Acc. No. 2272.6
CC-0. Jangamwadi Math Collection, Varanasi. An eGangotri Initiative

ಕಠೋರ ರೀತಿಯಲ್ಲಿ ಪರಪೀಡನೆಗೆ ಉಪಯೋಗಿಸುವುದು ಮಹಾಪಾತಕ. ವಿಡಂಬನವನ್ನು ಮೊದಲು ಸಾಹಿತ್ಯದ ಗದ್ದುಗೆಗೆ ಏರಿಸಿದ ಆರ್ಕಿಲೋಕಸನ ವಿಚಾರದಲ್ಲಿ ಒಂದು ಸಂಕಟದ ಕಥೆಯಿದೆ. ಲೈಕಾಂಬಿಸ್ ಎಂಬವನ ಮೂವರು ಪುತ್ರಿಯರಲ್ಲಿ ಒಬ್ಬಳನ್ನು ಅವನು ಪ್ರೀತಿಸುತ್ತಿದ್ದ. ಮದುವೆಗೆ ಅವಳು ಒಪ್ಪದಿದ್ದುದಕ್ಕೋ ಮತ್ತಾವ ಆಶಾಭಂಗವಾದುದಕ್ಕೋ, ಆರ್ಕಿಲೋಕಸ್ ಬಹು ಸಿಟ್ಟಾಗಿ ತಂದೆ ಮಕ್ಕಳ ಮೇಲೆ ನೀಚವೂ ನಿರ್ದಯವೂ ಆದ ಮಾನಹಾನಿಯ ಕ್ಷುದ್ರ ಪದ್ಯಗಳನ್ನು ಬರೆದು ಪ್ರಕಟಿಸಿದ. ದಿಕ್ಕು ತೋಚದೆ ಆ ನಾಲ್ವರೂ ಆತ್ಮಹತ್ಯವನ್ನು ಮಾಡಿಕೊಂಡರಂತೆ! ಒಂದು ಸಂಸಾರವನ್ನೇ ನುಂಗಿ ನೀರ್ಕುಡಿದ ಈ ಪ್ರಚಂಡ ಪುರುಷ! ರಾಕ್ಷಸನ ಶಕ್ತಿಯಿರುವುದು ಒಳ್ಳೆಯ ಸಂಪತ್ತು; ರಾಕ್ಷಸನಂತೆ ಅದನ್ನು ವೆಚ್ಚಮಾಡುವುದು ಕೆಟ್ಟಚರ್ಯೆ. ಆರ್ಕಿಲೋಕಸನ ಮೇಲಣ ಒಂದು ಶ್ಲೋಕ ಹೀಗೆ ಎಚ್ಚರ ಕೊಡುತ್ತದೆ: "ಪಾದಚಾರಿ, ಈ ಗೋರಿಯ ಬಳಿ ಸಪ್ಪಳಿಲ್ಲದೆ ನಡಿ, ಕಂಡೆಯಾ; ಶಬ್ದವಾದರೆ ಇದರಲ್ಲಿರುವ ಕಣಜಗಳು ಕನಲಿ ಎದ್ದು ನಿನ್ನನ್ನು ಮುತ್ತಿಬಿಟ್ಟಾವು!" ಟೆನಿಸನ್ ಕವಿಯ ಬಾಲಕಾವ್ಯಗಳನ್ನು ದುಷ್ಟವಿಮರ್ಶಕರು ಎಷ್ಟರಮಟ್ಟಿಗೆ ಅಪಹಾಸ್ಯ ಮಾಡಿದರೆಂದರೆ ಅವನು ಹತ್ತುವರುಷ ಕಾವ್ಯಪ್ರಕಟನಕ್ಕೆ ಹೆದರಿ ಹಿಂದೆ ನಿಂತ. ಕೀಟ್ಸ್ ಕವಿ ಇಪ್ಪತ್ತಾರನೆಯ ವಯಸ್ಸಿಗೆ ಮುಂಚೆ ಮೃತ್ಯುವಶನಾಗಲು ಅವಿವೇಕಿ ವಿಮರ್ಶಕರ ಗಂಟುಮೋರೆಯ ಮೂದಲೆ ಒಂದು ಕಾರಣ. ಇದು ವಿಡಂಬನದ ಕ್ರಮವಲ್ಲ. ಚುಚ್ಚಿ ಕಚ್ಚಿ ಕೊಲ್ಲುವುದಕ್ಕಲ್ಲ ವಿಡಂಬನ. ಮಾರ್ಷಲ್ ಪುನಃ ಪುನಃ ಒತ್ತಿ ಹೇಳುತ್ತಾನೆ:

CC-0. Jangamwadi Math Collection, Varanasi. An eGangotri Initiative

"ನನ್ನ ಹಾಸ್ಯ ಸರಳವಾದುದು"; "ನನ್ನ ಲೇಖನದಿಂದ ಯಾರಿಗೂ ಅಪಾಯವಿಲ್ಲ." ವಾಲ್ಟೇರನಿಗೆ ಆಶ್ಚರ್ಯಕರ ವಾದ ಸಾಮರ್ಥ್ಯವಿತ್ತು; "ನನ್ನ ಕೈಯಲ್ಲಿ ರಾಜದಂಡ ವಿಲ್ಲ, ಆದರೆ ಲೇಖಣಿಯಿದೆ!" ಎಂದು ಗುಡಗಿದ ಮಹಾ ಸಾಹಸಿ ಅವನು. ಆದರೂ ತನ್ನನ್ನು ಹೀಗೆ ವರ್ಣಿಸಿಕೊಂಡ: "ಅಂತರ್ಯದಲ್ಲಿ ನಾನು ಒಬ್ಬ ಒಳ್ಳೆಯ ಪಿಶಾಚಿಯೆ. ನಗುವಿನಲ್ಲಿಯೇ ನನ್ನ ಕೆಲಸದ ಅಂತ್ಯ."

(೨) ದ್ವೇಷವೂ ಆಗದು. ಅದೊಂದು ಬಗೆಯ ವಿಷ; ಅದಕ್ಕೆ ಎಡೆಗೊಟ್ಟು ಮನಸ್ಸು ಮಲಿನವಾಗುತ್ತದೆ. ಬರುತ್ತ ಬರುತ್ತ ಮನುಷ್ಯ ನರದ್ವೇಷಿಯೂ ಪ್ರಪಂಚದ್ವೇಷಿಯೂ ಆಗಿಬಿಡುತ್ತಾನೆ. ಅವನಿಗೆ ಎಲ್ಲವೂ ಅಪ್ರಿಯ. ಅಂದಮೇಲೆ ಅವನಲ್ಲಿ ಯಾವ ಮತಿ ಭಾವ ಭಾಷೆ ಕೌಶಲ ಇದ್ದರೂ ಅದು ವ್ಯರ್ಥ. ಪಾಶ್ಚಾತ್ಯ ಸಾಹಿತ್ಯದಲ್ಲಿ ಸ್ವಿಫ್ಟ್ ಹಯನೆ ಮೊದಲಾದವರು ಈ ವಿಷಾದ ಗುಹೆಯ ನಿವಾಸಿಗಳು. ಸ್ವಿಫ್ಟ್‌ನ ಅಂತಃಕರಣ ಕ್ರಮೇಣ ಎಷ್ಟು ಕದಡಿ ಹೋಯಿ ತೆಂದರೆ ಮನುಷ್ಯನನ್ನು ದೈತ್ಯರಿಗಿಂತ ಅಧಮನೆಂದು ಬಗೆದ; ಹೊಲಸು ಜಂತುವೆಂದು ಹಳಿದ; ಕೊನೆಗೆ ಕುದುರೆಗೆ ಅಡಿಯಾಳಾಗಿರುವುದಕ್ಕೆ ಮಾತ್ರ ಯೋಗ್ಯನೆಂದು ತೀರ್ಪು ಕೊಟ್ಟ. ದ್ವೇಷದ ಆರ್ಭಟ ಹೆಚ್ಚಾಗಿ ಕಡೆಯಲ್ಲಿ ಅವನು ಹುಚ್ಚನೇ ಆದ. ತನ್ನ ಗೋರಿಗೆಂದು ಈ ಲಿಪಿಯನ್ನು ರಚಿಸಿದ: "ಕ್ಷಮಿಸಿ ಇವನನ್ನು. ಬಹು ಚೆನ್ನಾಗಿ ದ್ವೇಷಿ ಸಿದ." ಹಯನೆಯ ಒಂದು ವಾಕ್ಯ: "ನಿದ್ರೆ ಒಳ್ಳೆಯದು; ಸಾವು ಮತ್ತೂ ಒಳ್ಳೆಯದು; ಹುಟ್ಟದೇ ಇದ್ದಿದ್ದರೆ ಅದು ಎಲ್ಲಕ್ಕಿಂತಲೂ ಒಳ್ಳೆಯದು." ಮನುಜನನ್ನೂ ಜನ್ಮವನ್ನೂ

CC-0. Jangamwadi Math Collection, Varanasi. An eGangotri Initiative

ಕಂಡು ಅವನಿಗೆ ಹಿಡಿಯಲಾರದ ಹಗೆತನ. ಅದೇ ಥ್ಯಾಕ ರೆಯ ಸಕ್ಕರೆ ವಚನವನ್ನು ಲಾಲಿಸಿ: "ತಮಾಷೆ ಒಳ್ಳೆ ಯದು; ಸತ್ಯ ಅದಕ್ಕಿಂತ ಒಳ್ಳೆಯದು; ಎಲ್ಲಕ್ಕಿಂತ ಒಳ್ಳೆಯದು ಪ್ರೇಮ."

(೩) "ಕೋಪವೆಂಬುದನರ್ಥಸಾಧನ ಕೋಪವುಳ್ಳವ ನಾವನಾಗಲಿ ಕಾಪುರುಷನಿಹಪರಕೆ" ಎಂದು ಕುಮಾರ ವ್ಯಾಸನ ಸುಭಾಷಿತವಿದೆ. ವಿಡಂಬನದಲ್ಲಿಯೂ ಕೋಪ ವರ್ಜಿತ ವಾಗಬೇಕು. ಸಿಟ್ಟು ಸನ್ಮತಿಯನ್ನು ಕೆಡಿಸುತ್ತದೆ; ಆದರ ರಭಸದಲ್ಲಿ ಒಪ್ಪು ತಪ್ಪುಗಳ ಸಮವಾದ ಸಮರ್ಪಕವಾದ ಸೂಕ್ಷ್ಮ ವಿವೇಚನೆ ಊನವಾಗುತ್ತದೆ. ಮುನಿಸಿನಿಂದ ಮರೆವು, ಮುನಿಸಿನಿಂದ ಅವಿವೇಕ. ಆದರೆ ಒಂದು ಅಂಶ. ಜುವೆನಲ್ ಎಂಬ ದೊಡ್ಡ ವಿಡಂಬನಕಾರ ಆಗ್ರಹವೇ ತನ್ನ ಕವನಕ್ಕೆ ಆಧಾರವೆಂದು ಹೊಗಳಿದ್ದಾನೆ. ಅವನು ನಿರೂಪಿಸಿರುವುದು ಸತ್ಯವಾದ ಸಕಾರಣವಾದ ಆಗ್ರಹ; ಕೊಳೆಯನ್ನು ಕಂಡರೆ ಶುಚಿಗೆ ಅಸಹನೆ ಹುಟ್ಟುವುದು ಸ್ವಾಭಾವಿಕವೆ. ಕೆಟ್ಟದನ್ನೇ ಕಂಡರಿಯದವನ ಒಳ್ಳೆಯದನ್ನೂ ಕಾಣಲಾರ. ಪವಿತ್ರವಾದ ಸಿಟ್ಟೆಂಬುದು ಉಂಟು; ಅದು ಬಂದಲ್ಲಿ ವ್ಯಾಕುಲವಿಲ್ಲ. ಆದರೆ ಸಿಡಿಮೋರೆಯ ದುರಾಗ್ರಹ ಖಂಡಿತವಾಗಿ ಕೂಡದು.

(೪) ಕಡೆಯ ತೊಡಕು ಜುಗುಪ್ಸೆ. ಇದೂ ಕೂಡ ವಿಡಂಬ ನಕ್ಕೆ ಅಯುಕ್ತ. ಲೋಪ ದೋಷವೇ ವಿಡಂಬನದ ವಿಷಯ; ಅವಗುಣವೇ ಅದರ ನಾಯಕ. ಆದ್ದರಿಂದ ತಾತ್ಸಾರಕ್ಕೆ ಅವ ಕಾಶವೇ ಇಲ್ಲ. ವೈದ್ಯರು ಕಠಿಣ ಕಾಹಿಲೆಗಳನ್ನೂ ಉಬ್ಬಿದ ಬಾವುಗಳನ್ನೂ ಕಂಡರೆ ವಿಸ್ಮಯದಿಂದ ಹಿಗ್ಗುವರಂತೆ! ವಿಡಂಬ ನಕಾರನಿಗೂ ಅದೇ ತರಹದ ಮನೋಭಾವ ಇರಬೇಕು.

CC-0. Jangamwadi Math Collection, Varanasi. An eGangotri Initiative

ವಸ್ತುವಿನ ವಿಕಾರವನ್ನು ಎಷ್ಟು ಹಂಗಿಸಿದರೂ ವಸ್ತುವನ್ನು ಬಿಟ್ಟುಕೊಡಲಾಗದು. ತನ್ನ ವೈಪರೀತ್ಯದಿಂದಲೇ ವಸ್ತು ಆಕರ್ಷಣೀಯವಾಗಬೇಕು ಅವನಿಗೆ. ಪಾಶ್ಚಾತ್ಯ ನಾಗರಿಕತೆಯನ್ನು ವಾಲ್ಟೇರನಹಾಗೆ ವಿಡಂಬಿಸಿದವರಿಲ್ಲ. ಆದರೆ ಅದನ್ನು ಪೂರ್ತಿಯಾಗಿ ಧ್ವಂಸಮಾಡಿ ಅನಾಗರಿಕ ಜೀವನಕ್ಕೆ ಹಿಂತಿರುಗಲು ಅವನು ಒಪ್ಪಲೊಲ್ಲ. ಸಾಯುವ ಮುನ್ನ ಕಾರ್ಯದರ್ಶಿಯ ಕೈಯಲ್ಲಿ ಒಂದು ಪತ್ರವನಿಟ್ಟ; ಅದರಲ್ಲಿ ಹೀಗಿತ್ತು; "ದೇವರನ್ನು ಭಜಿಸುತ್ತ, ಮಿತ್ರರನ್ನು ಪ್ರೀತಿಸುತ್ತ, ಶತ್ರುಗಳನ್ನು ದ್ವೇಷಿಸದೆ, ಮೂಢಭಕ್ತಿಗೆ ಅಸಹ್ಯಪಡುತ್ತ, ನಾನು ಸಾಯಲಿದ್ದೇನೆ. (ರುಜು) ವಾಲ್ಟೇರ್. ಫೆಬ್ರವರಿ 28, 1778." ಈ ಶಾಸನವನ್ನು ವಿಡಂಬನಕಾರ ನೆನಪಿನಲ್ಲಿಟ್ಟುಕೊಂಡರೆ ಕ್ಷೇಮ.

ಹೀಗೆ ಮನಸ್ಸಿನಿಂದ ಕೊರತೆಗಳನ್ನು ನಿವಾರಿಸಿಕೊಂಡು ವಿಡಂಬನಕಾರ ಕೆಲವು ಸುಗುಣಗಳನ್ನು ಬೆಳೆಯಿಸಿಕೊಳ್ಳಬೇಕು. ಆ ಸುಗುಣಗಳು ಯಾವುವು? ಕವಿ ಹಯನೆಯ ಒಂದು ಪ್ರಾರ್ಥನಾಪದ್ಯದಲ್ಲಿ ವಿಡಂಬನಕ್ಕೆ ನ್ಯಾಯದೇವಿಯೇ ತಾಯಿ, ಪ್ಯಾನ್‌ದೇವನೇ ತಂದೆ ಎಂಬ ಕಲ್ಪನೆಯಿದೆ. ಅದು ವಿಡಂಬನದ ಸುಲಕ್ಷಣಗಳನ್ನು ವಿಶದವಾಗಿ ವಿವರಿಸುವ ಸೂಕ್ತ ಭಾಷ್ಯ. ತಾಯಿ ಕೈಯಲ್ಲಿ ತಕ್ಕಡಿಯನ್ನು ಹಿಡಿದುಕೊಂಡು ಮಂಡಿಯಮೇಲೆ ಬಿಚ್ಚುಗತ್ತಿಯನ್ನು ಇಟ್ಟುಕೊಂಡು ಸಿಂಹಾಸನದಲ್ಲಿ ಕುಳಿತಿದ್ದಾಳೆ. ಅಂದರೆ ವಿಡಂಬನಕ್ಕೆ ತಾಯಿಯಿಂದ ಆನುವಂಶಿಕವಾಗಿ ಬಂದಿರುವ ಗುಣಗಳು ಪಾವನತ್ವ, ನಿಷ್ಪಕ್ಷಪಾತ, ಬಿಗಿ, ನಿಯಮನಿಷ್ಠೆ, ನಿರ್ಭೀತಿ, ದುಷ್ಟಶಿಕ್ಷಣೆ, ಶಿಷ್ಟರಕ್ಷಣೆ, ರಾಜಠೀವಿ. ಪ್ಯಾನನಿಗೆ ಮನುಷ್ಯನಂದದ ದೇಹ; ಆದರೆ ಕಿವಿ ಕಾಲುಗಳು ಹೋತನವು, ಬಾಲ ಕುದುರೆಯದು. ಅರ್ಧ

CC-0. Jangamwadi Math Collection, Varanasi. An eGangotri Initiative

ದೇವತೆ ಅರ್ಧ ಪಶು ಆತ. ನೃತ್ಯಗೀತಗಳಲ್ಲಿ ಆಸಕ್ತನಾಗಿ, ಕೊಳಲನ್ನು ಬಾರಿಸುತ್ತ, ಅರಣ್ಯದಲ್ಲಿ ಸಂಚರಿಸುತ್ತ, ಆಗಾಗ ಜನರಿಗೆ ಕಾಣಿಸಿಕೊಂಡು ಅವರಲ್ಲಿ ದಿಗ್ಭ್ರಮೆಯನ್ನು ಹುಟ್ಟಿಸುತ್ತ, ವಿಹರಿಸುವುದು ಅವನ ಜೀವನಕ್ರಮ. ಆದ್ದರಿಂದ ತಂದೆಯಿಂದ ವಿಡಂಬನಕ್ಕೆ ಬಂದಿರುವ ಗುಣಗಳು ಸ್ವಾತಂತ್ರ್ಯ, ಶಕ್ತಿ, ಚಟುವಟಿಕೆ, ಒರಟು, ಭಯಾನಕ ಸ್ವರೂಪ, ಇಂಪು, ಆಕರ್ಷಣೆ. ವಿಡಂಬನಕಾರನಲ್ಲಿ ಯಾವ ಹಂಗಿಗೂ ದಾಕ್ಷಿಣ್ಯಕ್ಕೂ ಸಿಕ್ಕದ ಧೃಢತ್ವವಿರಬೇಕು. ಜನತೆಯ ಚಲನವಲನಗಳನ್ನು ಪರೀಕ್ಷಿಸಿ, ಟಕ್ಕು ಠೌಳಿಗಳನ್ನು ಹುಡುಕಿ ಸೆರೆಹಿಡಿದು, ಖಂಡಿತವೂ ನ್ಯಾಯವೂ ಆದ ಶಿಕ್ಷೆಯನ್ನು ಅವಕ್ಕೆ ವಿಧಿಸುವುದು ಅವನ ಕರ್ತವ್ಯ. ಅನುಮಾನ ಹೆದರಿಕೆ ಹೇಡಿತನಗಳ ಯೋಚನೆಯ ನೆರಳು ಕೂಡ ಅವನ ಹತ್ತಿರ ಸುಳಿಯಲಾಗದು. ಲೋಕದಲ್ಲಿ ಕವಿಗಳಿಗೇ ಕಷ್ಟ; ವಿಡಂಬನದ ಕವಿಗಳಿಗೆ ಇನ್ನೂ ಹೆಚ್ಚು ಕಷ್ಟ: ಬಡತನ ಅಪವಾದ ಬಹಿಷ್ಕಾರ ಕಾರಾಗೃಹವಾಸ ದೇಹಕ್ಕೆ ಅಪಾಯ ಪ್ರಾಣಕ್ಕೆ ಅಪಾಯ ಎಲ್ಲಕ್ಕೂ ಅವರು ಸಿದ್ಧರಾಗಿರಬೇಕು. ಡ್ರೈಡನ್ನಿಗೆ ದೇಹದಂಡನೆ ಪ್ರಾಪ್ತಿಸಿತು; ಡೀಫೋವಿನ ಪಾಲಿಗೆ ಜುಲ್ಮಾನೆ, ಕೈಕಾಲು ಜೇಡಿಯ ಬಹಿರಂಗ ಅವಮಾನ; ಜುವೆನಲ್ ವಾಲ್ಟೇರರು ದೇಶಭ್ರಷ್ಟರಾಗಿ ಅಲೆಯಬೇಕಾಯ್ತು; ಸಾಕ್ರಟೀಸನ ವಿಡಂಬನವನ್ನು ತಡೆಯಲಾರದೆ ಆಥೆನ್ಸಿನ ಜನ ಅವನಿಗೆ ವಿಷವನ್ನು ಕುಡಿಸಲಿಲ್ಲವೆ? ಆದರೂ ಯಾವ ಅಸಹ್ಯ ನಿರ್ಬಂಧವನ್ನೂ ಮೂರ್ಖ ತಡೆಯನ್ನೂ ಲೆಕ್ಕಿಸದ ಸ್ವಾತಂತ್ರ್ಯ ವಿಡಂಬನಕಾರನಿಗೆ ಬೇಕು. ಅಂದರೆ ವಿಡಂಬನ ಜನರಲ್ಲಿ ಸ್ವಲ್ಪ ಭಯವನ್ನು ಉತ್ಪತ್ತಿಮಾಡುವ ಸಾಹಿತ್ಯ ವಿಭೇದವೇ ಆಯ್ತು. ಆದರೆ ಪ್ಯಾನ್ ದೇವನ ಮಂಜುಳ ಗಾಯನ

CC-0. Jangamwadi Math Collection, Varanasi. An eGangotri Initiative

ದಂತೆ ರುಚಿಯಾಗಿ ಆನಂದಕರವಾಗಿ ಆಕರ್ಷಿಸುವ ಚಮತ್ಕಾರ ಅದಕ್ಕಿದೆ. ಎಷ್ಟು ಬೇಡವೆಂದರೂ ಕಡೆಯಲ್ಲಿ ವಿಡಂಬನವನ್ನು ಸ್ವೀಕರಿಸಲೇ ಬೇಕು. ಈಗಲ್ಲದಿದ್ದರೆ ನಾಳೆ ಸತ್ಯ ಪ್ರಿಯವಾಗಿಯೇ ಆಗುತ್ತದೆ. ಬೀಸುವ ಕಲ್ಲಿನಂತೆ ತರಕಲಾಗಲಿ, ಪಶ್ಚಿಮದ ಗಾಳಿಯಂತೆ ಗದ್ದಲ ಮಾಡಲಿ, ಉತ್ತಮ ವಿಡಂಬನದಲ್ಲಿ ಮನೋಜ್ಞತೆ ಇದ್ದೇ ಇರುತ್ತದೆ. ಇಲ್ಲದಿದ್ದರೆ ಅದು ಹೇಗೆ ಸಾಹಿತ್ಯವೆನಿಸಿಕೊಂಡೀತು ?

ಈ ಗುಣಸಂಪತ್ತನ್ನು ಪಡೆದು, ಪವಿತ್ರ ಆಶಯದಿಂದ ತನ್ನ ಕೆಲಸವನ್ನು ಪ್ರಾರಂಭಿಸಿ, ದಕ್ಷತೆಯಿಂದ ಅದನ್ನು ಪೂರ್ತಿ ಗೊಳಿಸಬೇಕು ವಿಡಂಬನ ಚತುರ. ಮನಸ್ಸು ಬೆಂಕಿಯಂತೆ ಪ್ರಾಮಾಣಿಕವಾಗಿದೆಯೆ ಎಂದು ವಿಡಂಬನಕಾರ ಮೊದಲು ತನ್ನನ್ನು ತಾನೇ ಕೇಳಿಕೊಳ್ಳಬೇಕು. ಸ್ವಂತ ಶತ್ರುವಿನ ಮೇಲೆ ಸೇಡನ್ನು ತೀರಿಸಿಕೊಳ್ಳುವುದಕ್ಕೆ ಅಲ್ಲ ವಿಡಂಬನ. ಹಲವು ಕವಿಗಳು, ಪೋಪ್ ಮುಂತಾದ ಕೆಲವು ದೊಡ್ಡ ಕವಿಗಳು ಕೂಡ, ಬರಿಯ ಪ್ರತೀಕಾರಕ್ಕೆ ವಿಡಂಬನ ಹಾದಿಯನ್ನು ಹಿಡಿದಿದ್ದಾರೆ. ಅದು ಪಶ್ಚಾತ್ತಾಪ ಪಡಬೇಕಾದ ವಿದ್ಯಮಾನ. ರೋಷದ ಆವೇಶದಲ್ಲಿ ಮುಯ್ಯಿಗಾಗಿ ಬರೆದ ಲೇಖನ ಅಪವಾದ ಲೇಖನವಾಗಿಬಿಡುತ್ತದೆ. ಸಂಘದಲ್ಲಿ ಅದು ಅಪರಾಧ, ಸಾಹಿತ್ಯದಲ್ಲಿ ಅಪ್ರಿಯತೆ. ಮಾರ್ಷಲನ ನಿಯಮ ಸರಿ: "ವ್ಯಕ್ತಿಯನ್ನು ಮನ್ನಿಸುತ್ತೇನೆ ನಾನು, ದುಷ್ಕೃತ್ಯವನ್ನು ದೂಷಿಸುತ್ತೇನೆ." ಒಂದು ಪದ್ಯದಲ್ಲಿ ಅವನು "ಅಥಿನಗೊರಾಸ್" ಎಂಬ ಕಾಲ್ಪನಿಕ ಹೆಸರನ್ನು ಉದ್ದೇಶಿಸಿ ಅಪಹಾಸ್ಯ ಮಾಡಿ ಕೊನೆಯಲ್ಲಿ ಎಚ್ಚರಿಸುತ್ತಾನೆ: "ಯಾರಾದರೂ ಅಥಿನಗೊರಾಸ್ ಎಂಬ ಹೆಸರನ್ನಿಟ್ಟುಕೊಂಡಿದ್ದರೆ ಅದು ಅವರ

CC-0. Jangamwadi Math Collection, Varanasi. An eGangotri Initiative

ತಪ್ಪು, ನನ್ನದಲ್ಲ." ಎಂದರೆ ಯಾವ ಒಬ್ಬ ಸಮಕಾಲಿಕ ವ್ಯಕ್ತಿಯನ್ನೂ ಹೀನಾಯಮಾಡುವುದು ಅವನ ಆಕಾಂಕ್ಷೆಯಲ್ಲ. ಯೋಗ್ಯ ವಿಡಂಬನ ಒಂದು ಗುಂಪಿನ, ಒಂದು ವರ್ಗದ, ಒಂದು ಜನತೆಯ ನ್ಯೂನಾತಿರಿಕ್ತವನ್ನು ಅವಹೇಳಿಸಗೈಯುತ್ತದೆ. ವಿಡಂಬನ ಮಹಾತ್ಮರ ಮಾರ್ಗ ಅದೇ. ಜುವೆನಲ್ ಹೇಳುತ್ತಾನೆ ಕೇಳಿ: "ಮರುಳರ ಒಟ್ಟು ಸೈನ್ಯದ ಮೇಲೆ ನಾನು ಧಾಳಿಯಿಡುತ್ತೇನೆ." ಒಬ್ಬನ ಮೇಲಣ ಒಡಲುರಿಗಾಗಿ ಗ್ರಂಥ ರಚಿಸುವುದನ್ನು ಸ್ವಿಫ್ಟ್ ದೂಷಿಸಿದ್ದಾನೆ; ಅವನು ಹೇಳಿದ: "ನಾನು ದ್ವೇಷಿಸುವುದು ನರವರ್ಗವನ್ನ: ಟಾಮ್ ಡಿಕ್ ಹ್ಯಾರಿಗಳನ್ನು ಕಂಡರೆ ನನಗೆ ಇಷ್ಟ." ಯಾವುದೋ ಒಂದು ಕಳಪೆಯಾದ ಪದಾರ್ಥದಲ್ಲಿ ಒಬ್ಬ ಹೀನ ಮಾನವನಲ್ಲಿ ಒಂದು ಹುಳುತಿಂದ ಸಂಪ್ರದಾಯದಲ್ಲಿ ಕೊಳಕನ್ನು ಮೊದಲು ಕಾಣಬಹುದು. ಕೂಡಲೇ ವಿಡಂಬನಕ್ಕೆ ಎಳಸುವುದು ತರವಲ್ಲ. ನಿದಾನಿಸಿ, ನಿಂತು, ಕಣ್ಣನ್ನು ಸುತ್ತ ತಿರುಗಿಸಬೇಕು. ಒಂದರಲ್ಲಲ್ಲ ನೂರರಲ್ಲಿ, ನೂರರಲ್ಲಲ್ಲ ಸಾವಿರದಲ್ಲಿ, ಅದೇ ಮಾಲಿನ್ಯ ಕಂಡುಬಂದರೆ ಆಗ ವಿಡಂಬನಕ್ಕೆ ಅನುಗುಣವಾದ ವಸ್ತು ದೊರಕಿದಂತೆ. ಯಾವ ಸಮಾಜದಲ್ಲಿ ತಾನೆ ಬಾಯಿಬಡುಕರು ಗಯ್ಯಾಳಿಗಳು ಮೊಂಡರು ಮೋಸಗಾರರು ಹೊಗಳುಭಟ್ಟರು ಹೇಡಿಗಳು ಬಡಿವಾರದವರು ಬಹು ಸಂಖ್ಯೆಯಲ್ಲಿ ಇಲ್ಲ? ಆದ್ದರಿಂದ ಸಕಲರಲ್ಲಿ ಅಥವಾ ಅನೇಕರಲ್ಲಿ ಸಮಾನಲಕ್ಷಣವಾದ ದುರ್ನಯವನ್ನು ಹಂಗಿಸುವುದೇ ವಿಡಂಬನಕ್ಕೆ ಗೌರವದ ಅಭಿಲಾಷೆ.

ಹೀಗೆ ಕೊರತೆ ಅತಿಶಯಗಳನ್ನು ಕನ್ನಡಿ ಹಿಡಿದಂತೆ ನಿರ್ಮತ್ಸರದಿಂದ ಯಥಾರ್ಥವಾಗಿ ತೋರಿಸಿಕೊಡುವುದಕ್ಕೆ ವಿಡಂಬನ

CC-0. Jangamwadi Math Collection, Varanasi. An eGangotri Initiative

ಹೊಣೆ. "ಎಲ್ಲರೂ ಹಾಗೆ ಹಾಗೇ, ಯಾರಲ್ಲಿ ತಾನೆ ಹುಳುಕಿಲ್ಲ?" ಎಂದುಕೊಂಡು ನಾವು ಸಾಮಾನ್ಯವಾಗಿ ಆಲಸ್ಯದಲ್ಲಿದ್ದು ಬಿಡುತ್ತೇವೆ. ಸಮಾಜದ ಬೆಳೆವಣಿಗೆಗೆ ಆ ಮನೋಭಾವ ಅಡ್ಡಿ. ಕೆಟ್ಟವರ ಆಕಾರ ಪುಷ್ಟಿ ಪ್ರಭಾವವೆಲ್ಲವನ್ನೂ ಅಚ್ಚು ಕಟ್ಟಾಗಿ ಚಿತ್ರಿಸಿ, ಅವಶ್ಯವಾದ ತಿಳಿವಳಿಕೆಯನ್ನೂ ಮುಂಜಾಗ್ರತೆಯನ್ನೂ ಈಯುವ ವಿಡಂಬನವಿಲ್ಲದಿದ್ದರೆ ನಮ್ಮ ಗತಿ?

ಅಷ್ಟೇ ಅಲ್ಲ. ಕೆಲವು ಸಾರಿ ವಿಡಂಬನ ಕನ್ನಡಿಯೇ ಅಲ್ಲದೆ ಭೂತಗನ್ನಡಿಯೂ ಆಗಿ ಪರಿಣಮಿಸುತ್ತದೆ. ಅದೂ ಉಚಿತ ಕರ್ಮ. ಉಬ್ಬುಗಾಜು ಬೆಳಕಿನ ರಶ್ಮಿಗಳನ್ನು ಕೇಂದ್ರೀಕರಿಸಿ ಯಜ್ಞೇಶ್ವರನನ್ನು ಆವಾಹನಮಾಡಿ ಮೇಣವನ್ನು ಕರಗಿಸುವಂತೆ ವಿಡಂಬನ ನಕ್ಕು ನಕ್ಕು ಲೋಪದೋಷಗಳನ್ನು ತಾತ್ಕಾಲಿಕವಾಗಿ ನಾಶಮಾಡಲು ಸಾಧಕವಾಗುತ್ತದೆ. ತಿರುತಿರುಗಿ ಅವು ಘನೀಭೂತವಾಗುತ್ತವೆ; ತಿರುತಿರುಗಿ ಕರಗಿ ನೀರಾಗುತ್ತವೆ. ವಿಡಂಬನ ಹುಟ್ಟದಿದ್ದರೆ ಅವು ಇಷ್ಟುಹೊತ್ತಿಗೆ ದಾಟಲಾರದ ಬೆಟ್ಟವಾಗಿ ಸಮಾಜದಮೇಲೆ ಉರುಳಿಬಿಡುತ್ತಿದ್ದುವು.

ವಿಡಂಬನದ ಧ್ಯೇಯ ಉದಾತ್ತವಾದುದು. ಅದು "ಶಿಕ್ಷೆಯ ಮೂಲಕ ತಪ್ಪುಗಳನ್ನು ತಿದ್ದುವುದು" ಎಂಬುದು ಡ್ರೈಡನ್ನನ ಸೂಕ್ತಿ. ಮುಳ್ಳುಗಳನ್ನು ಕಡಿದು, ಕಳೆಯನ್ನು ಕಿತ್ತು, ಕಳ್ಳ ಹಕ್ಕಿಗಳನ್ನು ಓಡಿಸಿ, ಡೊಂಕು ರೆಂಬೆಗಳನ್ನು ನೇರವಾಗಿ ಕಟ್ಟಿ, ಸಮಾಜೋದ್ಯಾನ ಸಮೃದ್ಧಿಯಿಂದ ನಲಿಯುತ್ತ ಇರುವುದಕ್ಕೆ ಸಹಕರಿಸುವುದು ವಿಡಂಬನದ ಧರ್ಮ. ಇತರ ಬಗೆಯ ಸಾಹಿತ್ಯದಂತೆ ಅದಕ್ಕೂ ಸತ್ಯ ಚೆಲುವು ಶುದ್ಧತೆಗಳಲ್ಲಿಯೇ ವಿಶ್ವಾಸ. ಆದರೆ ಆ ದಿವ್ಯ ತತ್ವಗಳಿಗೆ ಪ್ರತ್ಯಕ್ಷವಾಗಿ ಕೈಮುಗಿಯಲು ಅದಕ್ಕೆ ಹಕ್ಕಿಲ್ಲ. ಪ್ರತಿ ತತ್ವಗಳಾದ ಸುಳ್ಳು.

CC-0. Jangamwadi Math Collection, Varanasi. An eGangotri Initiative

ಕುರೂಪ ಹೊಲಸುಗಳ ಕೈಮುರಿದು ತನ್ಮೂಲಕ ತನ್ನ ಅಂತರಂಗವನ್ನು ಬಯಲು ಮಾಡಬೇಕು. ಒಬ್ಬ ಬಾಲಕ ಆಶೀರ್ವಾದ ಪಡೆಯಲು ಬಂದಾಗ ಅವನ ನೆತ್ತಿಯಮೇಲೆ ಕೈಯಿಟ್ಟು "ದೇವರಿಗೂ ಸ್ವಾತಂತ್ರ್ಯಕ್ಕೂ ನಿನ್ನನ್ನು ಸಮರ್ಪಿಸಿಕೋ!" ಎಂದು ಹರಸಿದ ವಿಡಂಬನ ವಿಶಾರದ ವಾಲ್ಟೇರ್.

ಅಂತು ವಿಡಂಬನ ಹೇರಳ ಕಷ್ಟದ ವ್ಯವಸಾಯ. ಕಳಂಕವಿಲ್ಲದ ಮನಸ್ಸು, ನಿರ್ದಾಕ್ಷಿಣ್ಯ, ಅತ್ತಿತ್ತ ಒಲಿಯದ ನ್ಯಾಯ ಬುದ್ಧಿ, ಲೋಕಾನುಭವ, ಮರುಕ, ಸದುದ್ದೇಶ, ವಿಶೇಷ ಶಕ್ತಿಗಳೆಲ್ಲವೂ ಅದಕ್ಕೆ ಬೇಕು. ಸಾಹಿತ್ಯಪ್ರಪಂಚದಲ್ಲಿ ಕವಿಪುಂಗವರು ಹಲವರುಂಟು, ನಿಪುಣ ವಿಮರ್ಶಕರು ಕಡಮೆ, ವಿಡಂಬನ ಪಾರಂಗತರು ಮತ್ತೂ ವಿರಲ. ಕಾವ್ಯೋದ್ದೇಶದಲ್ಲಿ ಕಿಂಚಿತ್ತು ಮತ್ಸರವಾಗಲಿ ಕೈಚಳಕದಲ್ಲಿ ಕೊಂಚ ಕೊರತೆಯಾಗಲಿ ಇದ್ದರೆ ವಿಡಂಬನ ಅಸಮರ್ಪಕ. ಒಂದು ವಿಧದಲ್ಲಿ ಆಲೋಚಿಸಿದರೆ ವಿಡಂಬನ ಬಲರಾಮನ ಹಲಾಯುಧದಂತೆ. ಸತ್ವವಿರುವವನು ಅದನ್ನು ಎತ್ತಿ ತಿರುಗಿಸಿ ವೈರಿಯನ್ನು ಬಡಿದಿಕ್ಕಬಹುದು; ಬರಿಯ ನೇಗಿಲಲ್ಲವೆ ಎಂದು ಸತ್ವವಿಲ್ಲದವನು ಅದನ್ನು ತುಡುಕಿದರೆ ಅದು ಅವನ ಮೇಲೆಯೇ ಬಿದ್ದು ಕೈಮೈಯನ್ನು ಜಜ್ಜಿಬಿಡುತ್ತದೆ.

ವಿಡಂಬನ ಎರಡು ತರಹದ ಶಕ್ತಿಯನ್ನುಳ್ಳ ಔಷಧದ ಹಾಗೆ: ರೋಗಿ ಅದನ್ನು ಕುಡಿದಲ್ಲಿ ಅವನ ಜಾಡ್ಯ ಹರಿಯುತ್ತದೆ; ಆರೋಗಿ ಕುಡಿದಲ್ಲಿ ಅವನ ಆರೋಗ್ಯ ಭದ್ರವಾಗುತ್ತದೆ. ಸರಳತೆ ಸತ್ಯ ಸೌಂದರ್ಯ ಮುಂತಾದ ಸದ್ಗುಣಗಳಿಗೆ ವಿಡಂಬನದಿಂದ ಯಾವ ನಷ್ಟವೂ ಇಲ್ಲ. ಅಷ್ಟೇಕೆ; ಯಾವುವನ್ನು ವಿಡಂಬನ ನಗೆಪಾಟಲುಮಾಡಿ ಚೆದರಿಸಲಾರದೋ ಅವೇ

CC-0. Jangamwadi Math Collection, Varanasi. An eGangotri Initiative

ಸತ್ಯ ಸೌಂದರ್ಯ ಶುಚಿ. ಕೇರಿವರೆ ಹೊಟ್ಟು ಹಾರೀತು; ಕಾಳಿ ಗೇನು ಭೀತಿ? ಆದ್ದರಿಂದ ಎಲ್ಲ ಕಾಲಗಳಲ್ಲಿಯೂ ಎಲ್ಲ ದೇಶ ಗಳಲ್ಲಿಯೂ ವಿಡಂಬನದ ಸ್ವರ ಕೇಳಿಸುತ್ತಲೇ ಬಂದಿದೆ. ಕೆಲವು ಕವಿಗಳು ತಮ್ಮ ಕಾಲದ ವಿಚಾರದಲ್ಲಿ "ಇನ್ನು ಹೆಚ್ಚಾಗಿ ಕಾಲ ಕೆಡಲಾರದು; ಅವಗುಣಗಳ ಪಟ್ಟಿ ಈಗ ಸಂಪೂರ್ಣ ವಾಗಿದೆ!" ಎಂದು ಭಾವಿಸಿಕೊಂಡರು. ಅದನ್ನು ಎಲ್ಲ ತಲೆ ಮಾರುಗಳಿಗೂ ಅನ್ವಯಿಸಬಹುದು. ಹೊರಗಣ ತೋರಿಕೆ ಮಾರ್ಪಾಡಾದರೂ ಕೆಡುಕು ಕೆಡುಕೇ: ಒಂದು ಸಮಯದಲ್ಲಿ ಕೈಮಗ್ಗದ ಕಾಡಿಗೆ ಹರಿದು ನದಿಯ ನೀರನ್ನು ಕಪ್ಪುಮಾಡಿ ದರೆ ಇನ್ನೊಂದು ಸಮಯದಲ್ಲಿ ಕಾರ್ಖಾನೆ ಕಾಡಿಗೆಯ ಕೆಲಸ ಅದು. ಆಗ ಬೆರಣಿಯ ಹೊಗೆಯಿಂದ ಕಣ್ಣು ಮೂಗುಗಳಲ್ಲಿ ಲವಣಜಲ; ಈಗ ಎಂಜಿನ್ನಿನ ಕಲ್ಲಿದ್ದಲು ಹೊಗೆಯಿಂದ ಅದೇ ಸಂಕಟ. ರಣರಂಗದ ಕಗ್ಗೊಲೆಗೆ ಅಂದು ಬಾಣ, ಇಂದು ಬಾಂಬು. ಈಗಲೇ ವಿಶ್ರಾಂತಿಯನ್ನು ಕೊಡುವಂತಿಲ್ಲ ವಿಡಂ ಬನಕ್ಕೆ. ಬ್ರಹ್ಮನ ಅಪೂರ್ವ ಸೃಷ್ಟಿಯಾದರೂ ಮನುಷ್ಯ ಇನ್ನೂ ಬಹುಮಟ್ಟಿಗೆ ಅಪೂರ್ಣ. ಪರಿಪೂರ್ಣತೆಯ ವರ್ಚಸ್ಸು ಅವನಿಗೆ ಬರಬೇಕಾದರೆ ನಾನಾ ಅಗ್ನಿಶ್ಚಿಕೆಗಳಲ್ಲಿ ಬಹುಕಾಲ ಅವನು ಬೇಯಬೇಕು; ವಿಡಂಬನವೂ ಒಂದು ಅಗ್ನಿಶ್ಚಿಕೆ.

CC-0. Jangamwadi Math Collection, Varanasi. An eGangotri Initiative

೫. ಸಮಾಪ್ತಿ

ಇನ್ನೊಂದು ವಿಚಾರವನ್ನು ಹೇಳಿದರೆ ಈ ಪುಸ್ತಕಕ್ಕೆ ಮುಕ್ತಾಯ. ಘನ ಸಾಹಿತ್ಯದ ಭಂಡಾರದಲ್ಲಿ ವಿಡಂಬನಕ್ಕೆ ಜಾಗವಿದೆಯೇ ? ಕೊಳೆ ತಪ್ಪು ವಕ್ರತೆ ದೌರಾತ್ಮ್ಯದ ಮಂಡೆಯೇ ಅದರ ವಸ್ತು. ಆಂಜನೇಯನ ಸಾಹಸ, ರಾಮ ರಾವಣ ಯುದ್ಧ, ಭೀಷ್ಮ ಪ್ರತಿಜ್ಞೆ, ದ್ರೌಪದಿಯ ಸಂತಾಪ, ಶ್ರೀಕೃಷ್ಣ ಲೀಲೆ, ದುಷ್ಯಂತನ ವಿರಹ, ಮಹಾಶ್ವೇತೆಯ ಪ್ರಣಯ—ಇಂತಹ ಅತ್ಯಂತ ಬೆಡಗಿನ ವಿಶಾಲ ವಸ್ತುಗಳನ್ನು ಅದು ಪ್ರತಿಪಾದಿಸಲಾಗದು. ಹೋಗಲಿ. ಆದರೆ ರಾಜಕೀಯ ಪಂಗಡಗಳ ಅದ್ಭುತ ಮಸಲತ್ತು, ಲೋಭಿಯ ಅಸಾಧ್ಯ ಹಂಚಿಕೆ, ಸ್ವಾರ್ಥಪರನ ಸಾವಿರ ಸಾಹಸ, ವೇಷಧಾರಿಯ ಹೊಸ ಹೊಸ ಒಯ್ಯಾರ, ಮೋಸದ ನೂರೆಂಟು ಅವತಾರ, ಕಪಟದ ನಾನಾ ನಾಟಕ—ಇವೇನು ಅಸ್ವಾರಸ್ಯದ ಸಾಮಾನ್ಯ ಸಂಗತಿಗಳೆ ? ತನಗೆ ಸಮಂಜಸವಾದ ವಿಷಯವನ್ನು ಬಣ್ಣಿಸುವುದರಲ್ಲಿ ಹೊಸತನ ಕೌಶಲ್ಯ ಸೊಬಗು ವಿಸ್ಮಯಗಳನ್ನು ವಿಡಂಬನ ತರಲಾರದೆ ? ಕವಿತ್ವದಲ್ಲಿ ವಿಷಯಕ್ಕಿಂತ ವಿಷಯ ನಿರೂಪಣೆ ಕಡಮೆಯಲ್ಲ. ವಿಡಂಬನವೂ ಮೇಲ್ತರದ ಸಾಹಿತ್ಯಕ್ಕೆ ಅನುರೂಪವಾದ ಉಲ್ಲಾಸ ಉತ್ಕರ್ಷ ಆನಂದಗಳನ್ನು ಕೊಡಬಲ್ಲುದು. ರಸವತ್ತಾದ ಕಥೆ, ಜೀವಂತ ಪಾತ್ರ, ಬೆರಗು ಮಾಡುವ ಪ್ರತಿಭೆ, ಕಲ್ಪನೆಯ ಸುರಿಮಳೆ, ಮಾತಿನ ಇಂದ್ರಜಾಲ—ಯಾವುದೂ ಅದಕ್ಕೆ ಅಸಾಧ್ಯವಲ್ಲ. ಪ್ರಸಿದ್ಧ ವಿಡಂಬನಕಾರನಿಗೂ ಹಿರಿಯ ಸಾಹಿತಿಗಳ ಗುಡಿಯಲ್ಲಿ ಪೀಠವುಂಟು, ನಂದಾದೀಪ ಉರಿಯುತ್ತದೆ.

CC-0. Jangamwadi Math Collection, Varanasi. An eGangotri Initiative

ಅನುಬಂಧ

ಗ್ರಂಥದಲ್ಲಿ ಹೇಳಿರುವ ಪ್ರಸಿದ್ಧ ವಿಡಂಬನಕಾರರ ದೇಶ ಮತ್ತು ಕಾಲ

ಕವಿ	ದೇಶ	ಕಾಲ
ಆಡಿಸನ್	ಇಂಗ್ಲೆಂಡ್	೧೬೭೨-೧೭೧೯
ಅಮ್ಮಿಯಾನಸ್	ರೋಮ್	ಸುಮಾರು ೩೬೩
ಅರ್ಲ್	ಇಂಗ್ಲೆಂಡ್	೧೬೦೧-೧೬೬೫
ಅರಿಸ್ಟೊಫೇನಿಸ್	ಗ್ರೀಸ್	೪೪೪-೩೮೦ ಕ್ರಿ.ಪೂ.
ಅರಿಸ್ಟೊ	,,	ಸುಮಾರು ೨೫೦ ಕ್ರಿ.ಪೂ.
ಅನಟೋಲ್‌ಫ್ರಾನ್ಸ್	ಫ್ರಾನ್ಸ್	೧೮೪೪-೧೯೨೪
ಅರ್ಕಿಲೋಕಸ್	ಗ್ರೀಸ್	೭೨೦-೬೭೦ ಕ್ರಿ.ಪೂ.
ಇಬ್ಸನ್	ನಾರ್ವೆ	೧೮೨೮-೧೯೦೦
ಇರ್ಯಾಸ್ಮಸ್	ಹಾಲೆಂಡ್	೧೪೬೬-೧೫೩೬
ಕುಮಾರವ್ಯಾಸ	ಕನ್ನಡ	ಸುಮಾರು ೧೪೩೦
ಗೋಲ್ಡ್‌ಸ್ಮಿತ್	ಇಂಗ್ಲೆಂಡ್	೧೭೨೮-೧೭೭೮
ಚಾಸರ್	,,	೧೩೪೦-೧೪೦೦
ಜುವೆನಲ್	ರೋಮ್	೫೫-೧೩೮
ಟಾಲ್‌ಸ್ಟಾಯ್	ರಷ್ಯ	೧೮೨೮-೧೯೧೧
ಡಾಕ್ಟರ್ ಜಾನ್ಸನ್	ಇಂಗ್ಲೆಂಡ್	೧೭೦೯-೧೭೮೪
ಡೀಫೊ	,,	೧೬೬೧-೧೭೩೧
ಡೆಕ್ಕರ್	,,	೧೫೭೦-೧೬೪೧
ಡ್ರೈಡನ್	,,	೧೬೩೧-೧೭೦೦
ತಿಮ್ಮಾರ್ಯ	ಕನ್ನಡ	ಸುಮಾರು ೧೭೫೦
ಥ್ಯಾಕರೆ	ಇಂಗ್ಲೆಂಡ್	೧೮೧೧-೧೮೬೩
ನಿಕಾರ್ಕಸ್	ಗ್ರೀಸ್	?
ಪಂಪ	ಕನ್ನಡ	ಹುಟ್ಟಿದ್ದು ೯೦೨
ಪುರಂದರದಾಸ	,,	ಸತ್ತದ್ದು ೧೫೬೪
ಪ್ಲೇಟೊ	ಗ್ರೀಸ್	೪೨೮-೩೪೭ ಕ್ರಿ.ಪೂ.
ಪೋಪ್	ಇಂಗ್ಲೆಂಡ್	೧೬೮೮-೧೭೪೪

CC-0. Jangamwadi Math Collection, Varanasi. An eGangotri Initiative

ಬಟ್ಲರ್	ಇಂಗ್ಲೆಂಡ್	೧೬೧೨-೧೬೮೦
ಬರ್ನಾರ್ಡ್ ಷಾ	,,	ಹುಟ್ಟಿದ್ದು ೧೮೫೬
ಬಸವಣ್ಣ	ಕನ್ನಡ	ಸುಮಾರು ೧೧೬೦
ಬ್ವಾಲೊ	ಫ್ರಾನ್ಸ್	೧೬೩೬-೧೭೧೧
ಬೆನ್ ಜಾನ್ಸನ್	ಇಂಗ್ಲೆಂಡ್	೧೫೭೩-೧೬೩೭
ಬೈರನ್	,,	೧೭೮೮-೧೮೨೪
ಮಧುರ	ಕನ್ನಡ	ಸುಮಾರು ೧೩೮೫
ಮಾರ್ಷಲ್	ರೋಮ್	೩೮-೧೦೪
ಮೋಲಿಯೇರ್	ಫ್ರಾನ್ಸ್	೧೬೨೨-೧೬೭೩
ಯೂರಿಪಿಡೀಸ್	ಗ್ರೀಸ್	೪೮೦-೪೦೬ ಕ್ರಿ.ಪೂ.
ರನ್ನ	ಕನ್ನಡ	ಹುಟ್ಟಿದ್ದು ೯೪೯
ರಾಘವಾಂಕ	,,	ಬಹುಶಃ ೧೩ನೆಯ ಶತ. ಪೂರ್ವಭಾಗ
ಲಕ್ಷ್ಮೀಶ	,,	೧೬೦೦ಕ್ಕೆ ಹಿಂದೆ
ಲಾಯ್ಡ್ ಜಾರ್ಜ್	ಇಂಗ್ಲೆಂಡ್	ಹುಟ್ಟಿದ್ದು ೧೮೬೩
ಲಿಯೋನಿಡಾಸ್	ಗ್ರೀಸ್	ಕ್ರಿ.ಪೂ. ೩ನೆಯ ಶತಮಾನದ ಮಧ್ಯ
ಲ್ಯೂಸಿಲಿಯಸ್	ರೋಮ್	೧೪೮-೧೦೩ ಕ್ರಿ.ಪೂ.
ವಾಲ್ಟೇರ್	ಫ್ರಾನ್ಸ್	೧೬೯೪-೧೭೭೮
ವೃತ್ತವಿಲಾಸ	ಕನ್ನಡ	ಬಹುಶಃ ೧೪ನೆಯ ಶತಮಾನ
ಷೇಕ್ ಸಾದಿ	ಪರ್ಷಿಯ	ಸುಮಾರು ೧೧೮೪-೧೨೯೨
ಷೇಕ್ಸ್‌ಪಿಯರ್	ಇಂಗ್ಲೆಂಡ್	೧೫೬೪-೧೬೧೬
ಸರ್ವಜ್ಞ	ಕನ್ನಡ	?
ಸರ್ವ್ಯಾಂಟೀಸ್	ಸ್ಪೇನ್	೧೫೪೭-೧೬೧೬
ಸಾಕ್ರಟೀಸ್	ಗ್ರೀಸ್	೪೬೯-೩೯೯ ಕ್ರಿ.ಪೂ.
ಸಿಡ್ನಿ ಸ್ಮಿತ್	ಇಂಗ್ಲೆಂಡ್	೧೭೭೧-೧೮೪೫
ಸ್ವಿಫ್ಟ್	,,	೧೬೬೭-೧೭೪೫
ಹಯ್‌ನೆ	ಜರ್ಮನಿ	೧೭೯೯-೧೮೫೬
ಹಾರೆಸ್	ರೋಮ್	೬೫-೮ ಕ್ರಿ.ಪೂ.
ಹೊನ್ನಮ್ಮ	ಕನ್ನಡ	೧೭ನೆಯ ಶತಮಾನದ ಕೊನೆ
ಹೋಮರ್	ಗ್ರೀಸ್	ಸುಮಾರು ೧೦೦೦ ಕ್ರಿ.ಪೂ.

Jangam...
Acc: No. 726.
CC-0. Jangamwadi Math Collection, Varanasi. An eGangotri Initiative

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ

೧೯೩೮-೩೯ ರಲ್ಲಿ ಅಚ್ಚಾಗಿರುವ ಪುಸ್ತಕಗಳು:

ಸಾಧಾರಣ ಪ್ರತಿ ಒಂದಕ್ಕೆ ೨ ಆಣೆ, ಉತ್ತಮ ಪ್ರತಿ ಒಂದಕ್ಕೆ ೩ ಆಣೆ.

೧. ಖಗೋಳಶಾಸ್ತ್ರ ಪ್ರವೇಶ—
ಸಿ. ಎಸ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.

೨. ಸಮಾಜದ ರೋಗ ರುಜಿನಗಳು—
ಜಿ. ಹನುಮಂತರಾವ್, ಎಂ.ಎ.

೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.

೪. ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.

೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.

೧೯೩೯-೪೦ ರಲ್ಲಿ ಅಚ್ಚಾಗಿರುವ ಪುಸ್ತಕಗಳು:

೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.

೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.

೮. ಕನ್ನಡಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.

೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್,
ಎಂ.ಎಸ್‌ಸಿ.

೧೦. ಪಂಪ—ತೀ. ನಂ. ಶ್ರೀಕಂಠಯ್ಯ, ಎಂ.ಎ.

೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.

೧೨. ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರಿ, ಎಂ.ಎ.

೧೩. ಮದುವೆ—ನಾ. ಕಸ್ತೂರಿ, ಎಂ.ಎ., ಬಿ.ಎಲ್.

೧೪. ನಮ್ಮ ಆರ್ಥಿಕ ದೃಷ್ಟಿ—ಎಸ್. ಗೋಪಾಲಸ್ವಾಮಿ,
ಎಂ.

(ಪು.ತಿ.ನೋ.)

CC-0. Jangamwadi Math Collection, Vara

೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್,
ಎಂ.ಎಸ್‌ಸಿ.,ಎಲ್ ಎಲ್.ಬಿ.

೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.

೧೭. ಕರ್ನಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.

೧೯೪೦-೪೧ ರಲ್ಲೂ ಹನ್ನೆರಡು ಪುಸ್ತಕಗಳು ಅಚ್ಚಾಗುವುವು:

ಸಾಧಾರಣ ಪ್ರತಿ ೨ ಆಣೆ; ವಾರ್ಷಿಕ ಚಂದಾ ರೂ. ೧-೪-೦.

ಉತ್ತಮ ಪ್ರತಿ ೩ ಆಣೆ; ವಾರ್ಷಿಕ ಚಂದಾ ರೂ. ೦-೨-೦.

ವಿ.ಪಿ.ಪಿ. ಮೂಲಕ ಪುಸ್ತಕಗಳನ್ನು ತರಿಸಿಕೊಳ್ಳುವುದರ ಬದಲು ಮುಂಗಡ ವಾಗಿ ಹಣವನ್ನು ಕಳುಹಿಸಿ ತರಿಸಿಕೊಂಡರೆ ನಾಲ್ಕು ಆಣೆಗಳು ಉಳಿತಾಯ ವಾಗುವುವು.

೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್,
ಎಂ.ಎ.

೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—
ಪಿ. ಜಿ. ಸತ್ಯಗಿರಿನಾಥನ್, ಎಂ.ಎ.

೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ,
ಬಿ.ಎ., ಎಂ.ಬಿ., ಬಿ.ಎಸ್.

೨೧. ಸಾರ್ವಜನಿಕ ವೆಚ್ಚ—ಎಂ. ಎಚ್. ಗೋಪಾಲ್,
ಎಂ.ಎ., ಪಿಎಚ್.ಡಿ.

೨೨. ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ.,
ಎಂ.ಎಡ್.

೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.

೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.

೨೫. ಅಜಂತ ಮತ್ತು ಎಲ್ಲೋರ—ಡಾ॥ ಎಂ. ಎಚ್. ಕೃಷ್ಣ,
ಎಂ.ಎ., ಡಿ.ಲಿಟ್.

ಸಿದ್ದಿ ಸ್ಮಿತ್
ಪ್ಲಿ ಫ್ಟ್
ಪಯಸ್
ಹಾರಿಸ್
ಪೊನ್ನಮ್ಮ
ಹೋಮರ್

Acc: No. 11687U

CC-0. Jangamwadi Math Collection, Varanasi. An eGangotri Initiative